ಸಂಪುಟ: 05 ಸಂಚಿಕೆ: 244 ಪುಟಗಳು: 08 ಮಂಗಳವಾರ 18 ನವೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5
# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ದೊಡ್ಡ ಗುರಿ, ಜ್ಞಾನದ ಸಂಪಾದನೆ, ಕಠಿಣ ಪರಿಶ್ರಮ ಮತ್ತು ದೃಢ ಹಾಗೂ ಸತತ ಪ್ರಯತ್ನ ಎಂಬ ನಾಲ್ಕು ವಿಷಯಗಳನ್ನು ಅನುಸರಿಸಿದರೆ ಏನು ಬೇಕಾದರೂ ಸಾಧಿಸಬಹುದು.

# ಕರ್ನಾಟಕ ಕಾಂಗ್ರೆಸ್ ಕದನದಿಂದ ಕಂಗಾಲಾದ ಹೈಕಮಾಂಡ್

## ● ಬೇಕಂತಲೇ ಹರಿಬಿಡಲಾಗಿದೆಯೇ ಡಿಕೆಶಿ ರಾಜೀನಾಮೆ ವದಂತಿ ● ಹೈಕಮಾಂಡ್ ಮೇಲೆ ಒತ್ತಡ ಹಾಕಲು ಡಿಕೆ ಕ್ಯಾಂಪ್ ತಂತ್ರ

• **ಉದಯವಾಹಿನಿ, ಬೆಂಗಳೂರು**

ಬಿಹಾರ ಚುನಾವಣಾ ಫಲಿತಾಂಶ ಕರ್ನಾಟಕದ ಕಾಂಗ್ರೆಸ್ ರಾಜಕೀಯಕ್ಕೆ ಬಿಸಿ ಮುಟ್ಟಿಸಿದೆ. ಕಾಂಗ್ರೆಸ್ ಮಟ್ಟಿಗಿದು ತೀವ್ರ ಹಿನ್ನಡೆಯಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪ್ಲಸ್ ಪಾಯಿಂಟ್. ಈ ನಡುವೆ ದಿಢೀರ್ ಆಗಿ ಡಿಕೆ ಶಿವಕುಮಾರ್ ರಾಜೀನಾಮೆ ವಿಚಾರ ಮುನ್ನಲೆಗೆ ಬಂದಿದೆ. ದಿಢೀರ್ ಆಗಿ ಈ ಸುದ್ದಿ ಹರಿಯ ಬಿಟ್ಟಿರುವ ಹಿಂದೆ, ಡಿಕೆ ಕ್ಯಾಂಪ್ ಕೈವಾಡ ಇದೆಯೇ ಎಂಬ ಚರ್ಚೆ ರಾಜಕೀಯ ಪಡಸಾಲೆಯಲ್ಲಿ ಶುರುವಾಗಿದೆ.

ದೆಹಲಿಯಲ್ಲಿ ಬೀಡು ಬಿಟ್ಟಿರುವ ಡಿಕೆ ಬ್ರದರ್ಸ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಸುಧೀರ್ಘ ಮಾತುಕತೆ ನಡೆಸಿದ್ದಾರೆ. ಈ ಗೌಪ್ಯ ಮಾತುಕತೆ ಸಂದರ್ಭದಲ್ಲಿ, ಸಿಎಂ ಸ್ಥಾನಕ್ಕೆ ಡಿಕೆ ಶಿವಕುಮಾರ್ ಅವರು ಹಕ್ಕು ಮಂಡನೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಖುದ್ದು ಡಿಕೆ ಕ್ಯಾಂಪ್ ಮಾಹಿತಿ ನೀಡಿದ್ದು, ಡಿಕೆಶಿ ರಾಜೀನಾಮೆ ಸುದ್ದಿಯನ್ನೂ ಉದ್ದೇಶಪೂರ್ವಕವಾಗಿ ಹರಿಬಿಡಲಾಗಿದೆ ಎಂದು ಹೇಳಲಾಗುತ್ತಿದೆ.

**ಸಿಕ್ಕಿಲ್ಲ ಗ್ರೀನ್ ಸಿಗ್ನಲ್:** ಬಿಹಾರ ಚುನಾವಣೆಯ ಬಳಿಕ ನಾಯಕತ್ವ ಬದಲಾವಣೆ ಶತಸಿದ್ಧ ಎಂಬ ನಿರೀಕ್ಷೆ ಡಿಕೆ ಕ್ಯಾಂಪ್‌ನಲ್ಲಿತ್ತು. ಆದರೆ ಆ ನಿರೀಕ್ಷೆ ಹುಸಿಯಾಗುತ್ತಿದೆ. ಹೀಗಾಗಿಯೇ ಸಂಪುಟ ಪುನಾರಚನೆಗೆ ವೇಗ ಸಿಕ್ಕಿದೆ. ಆದರೆ ಹೈಕಮಾಂಡ್ ಇದಕ್ಕೆ ಅಸ್ತು ಅಂದರೆ ಸಿದ್ದರಾಮಯ್ಯ ಬಣಕ್ಕೆ ಭಾರೀ ಜಯ ಲಭಿಸಲಿದೆ. ಇದೇ ಕಾರಣಕ್ಕೆ ಡಿಕೆ ಶಿವಕುಮಾರ್ ರಾಜೀನಾಮೆ ವದಂತಿ ಹಬ್ಬಿಸಿ, ಗೊಂದಲ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

**ಒತ್ತಡ ಸೃಷ್ಟಿಗೆ ಡಿಕೆಶಿ ಪ್ಲ್ಯಾನ್:** ನಾಯಕತ್ವ ಬದಲಾವಣೆ ಇಲ್ಲ ಎಂಬ ಸುಳಿವು ಬಹುತೇಕ ಖಚಿತ ಆಗುತ್ತಿದ್ದಂತೆ, ಡಿಕೆ ಶಿವಕುಮಾರ್ ಅವರು ಒತ್ತಡ ತಂತ್ರಕ್ಕೆ ಮೊರೆ ಹೋಗಿದ್ದಾರೆ. ಇದರ ಮುಂದುವರಿದ ಭಾಗವಾಗಿಯೇ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ವಿಚಾರ ಮುನ್ನಲೆಗೆ ಬಂದಿದೆ. ಇದು ಉದ್ದೇಶಪೂರ್ವಕವಾಗಿ ತೇಲಿ ಬಿಟ್ಟ ಸುದ್ದಿ ಎಂಬುದು ಸದ್ಯ ನಡೆಯುತ್ತಿರುವ ಚರ್ಚೆ.

ಆದರೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿಕೆಶಿ ರಾಜೀನಾಮೆ ಕೇವಲ ಊಹಾಪೋಹ ಎಂಬುದೂ ಸಾಬೀತಾಗಿದೆ. ಏಕೆಂದರೆ ಈ ಕುರಿತು ಖುದ್ದು ಪ್ರತಿಕ್ರಿಯೆ ನೀಡಿರುವ ಉಪಮುಖ್ಯಮಂತ್ರಿಗಳು, ನಾನೇಕೆ ರಾಜೀನಾಮೆ ಕೊಡಲಿ ಪಕ್ಷ ಸಂಘಟನೆ ನನ್ನ ಗುರಿ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಿದ್ದರೂ ಡಿಕೆಶಿ ರಾಜೀನಾಮೆ ಸದ್ದು ಹೈಕಮಾಂಡ್‌ಗೆ ಪರೋಕ್ಷ ಸಂದೇಶ ಎನ್ನಲಾಗುತ್ತಿದೆ.

**ಗೊಂದಲ ನಿವಾರಿಸಲು ಪಟ್ಟು:** ನಾಯಕತ್ವ ಬದಲಾವಣೆ ವಿಚಾರವಾಗಿ ಗೊಂದಲ ನಿವಾರಣೆ ಮಾಡಲು ಡಿಕೆ ಶಿವಕುಮಾರ್ ಪಟ್ಟು ಹಿಡಿದಿದ್ದಾರೆ ಎಂಬ ಮಾಹಿತಿ ಇದೆ. ಸಂಪುಟ ಪುನಾರಚನೆಗೆ ನನ್ನ ತಕರಾರು ಇಲ್ಲ. ಆದರೆ ನಾಯಕತ್ವ ಬದಲಾವಣೆ ವಿಚಾರವಾಗಿ ಒಂದು ನಿರ್ಧಾರಕ್ಕೆ ಮೊದಲು ಬನ್ನಿ. ನಂತರದಲ್ಲಿ ಸಂಪುಟ ಪುನಾರಚನೆ ಬಗ್ಗೆ ನಿರ್ಧಾರ ಆಗಲಿ ಎಂಬುದು ಡಿಕೆ ಕ್ಯಾಂಪ್ ಬೇಡಿಕೆಯಾಗಿದೆ.



**ಗುಟ್ಟು ಬಿಟ್ಟು ಕೊಡದ ದಿಲ್ಲಿ**

ಈ ಎಲ್ಲಾ ಬೆಳವಣಿಗೆ ನಡುವೆ ದೆಹಲಿ ನಾಯಕರು ಗುಟ್ಟು ಬಿಟ್ಟುಕೊಟ್ಟಿಲ್ಲ. ಡಿಕೆ ಶಿವಕುಮಾರ್ ಅವರನ್ನು ಯಾವ ರೀತಿಯಲ್ಲಿ ಹೈಕಮಾಂಡ್ ಮನವೊಲಿಸುತ್ತದೆ ಎಂಬುದು ಸದ್ಯದ ಕುತೂಹಲ. ಒಂದು ವೇಳೆ ಸಿದ್ದರಾಮಯ್ಯ ಅವರು ಸಂಪುಟ ಪುನಾರಚನೆ ಲಿಸ್ಟ್ ಗೆ ಒಪ್ಪಿಗೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರೆ ಅದು ಡಿಕೆ ಶಿವಕುಮಾರ್ ಅವರಿಗೆ ಆಗುವ ಹಿನ್ನಡೆಯಾಗಿದೆ.

## ಬವೇರಿಯಾ ಜೊತೆ ಪಾಲುದಾರಿಕೆ ನೀಲನಕ್ಷೆ ಶೀಘ್ರ ಅಂತಿಮ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಮತ್ತು ಜರ್ಮನಿಯ ಬವೇರಿಯಾ ಪ್ರಾಂತ್ಯವು ಮಾಹಿತಿ ತಂತ್ರಜ್ಞಾನ, ವೈಮಾಂತರಿಕ್ಷ, ರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, ಸೆಮಿಕಂಡಕ್ಟರ್, ನವೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಪ್ರಗತಿ ಸಾಧಿಸಿದ್ದು, ದ್ವಿಪಕ್ಷೀಯ ಸಹಭಾಗಿತ್ವ ಮತ್ತು ಹೂಡಿಕೆಗೆ ಯಥೇಚ್ಛ ಅವಕಾಶಗಳಿವೆ. ಈ ಸಂಬಂಧ ನೀಲನಕ್ಷೆ ರೂಪಿಸಿ. ಶೀಘ್ರ ಅಂತಿಮರೂಪ ನೀಡಲಾಗುವುದು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ವಿಧಾನಸೌಧದಲ್ಲಿ ತಮ್ಮನ್ನು ಭೇಟಿಯಾದ ಬವೇರಿಯಾದ ಪ್ರಾಂತೀಯ ಸಂಸತ್ತಿನ ಅಧ್ಯಕ್ಷೆ ಐಲ್ ಏಗ್ನರ್ ನೇತೃತ್ವದ ನಿಯೋಗದ ಜತೆ ಅವರು ಮಾತುಕತೆ ನಡೆಸಿದರು.

ಕರ್ನಾಟಕವು ಬವೇರಿಯಾದ ಅತ್ಯುನ್ನತ ಪಾಲುದಾರ ಆಗಬೇಕೆಂದು ಈ ನಿಯೋಗದ ಸದಸ್ಯರು ಬಯಸಿದ್ದಾರೆ. ಈ ಸಂಬಂಧ ವಿಸ್ತೃತ ಚರ್ಚೆ ನಡೆಯಬೇಕಾದ ಅಗತ್ಯವಿದ್ದು, ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳಲು ಪರಿಸ್ಥಿತಿ ನಿಚ್ಚಳವಾಗಿದೆ. ಸೂಪರ್ ಕಂಪ್ಯೂಟಿಂಗ್, ಕ್ವಾಂಟಂ ತಂತ್ರಜ್ಞಾನ ಕ್ಷೇತ್ರಗಳಲ್ಲೂ ಬವೇರಿಯಾ ಮುಂಚೂಣಿಯಲ್ಲಿದೆ. ನಾವು ಕೂಡ ಕ್ವಾಂಟಂ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ನೀತಿ ರೂಪಿಸಿದ್ದೇವೆ' ಎಂದಿದ್ದಾರೆ.

## ಓಲಾ ಉದ್ಯೋಗಿ ಸಾವು: ವರದಿ ಆಧರಿಸಿ ಮುಂದುವರಿಯಿರಿ

• **ಉದಯವಾಹಿನಿ, ಬೆಂಗಳೂರು**

ಓಲಾ ಎಲೆಕ್ಟ್ರಿಕ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯ ಮೃತ ಉದ್ಯೋಗಿ ಕೆ.ಅರವಿಂದ್ ಸಾಯುವ ಮುನ್ನ ಬರೆದಿಟ್ಟಿದ್ದರು ಎನ್ನಲಾದ ಆತ್ಮಹತ್ಯೆ ಪತ್ರದ ಕುರಿತಂತೆ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಏನು ತಿಳಿಸುತ್ತದೆಯೋ ಅದನ್ನು ಆಧರಿಸಿ ತನಿಖೆ ಮುಂದುವರಿಸಿ' ಎಂದು ಹೈಕೋರ್ಟ್, ರಾಜ್ಯ ಪ್ರಾಸಿಕ್ಯೂಷನ್‌ಗೆ ಆದೇಶಿಸಿದೆ.

ಅರವಿಂದ್ ಸಾವಿನ ಆರೋಪದಡಿ ನಮ್ಮ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ಮತ್ತು ಈ ಸಂಬಂಧ 30ನೇ ಎಸಿಎಂಎಂ ಕೋರ್ಟ್‌ನಲ್ಲಿ ನಡೆಯುತ್ತಿರುವ ನ್ಯಾಯಿಕ ವಿಚಾರಣೆ ರದ್ದುಗೊಳಿಸಬೇಕು' ಎಂದು ಕೋರಿ ಕಂಪನಿಯ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸುಬ್ರತ್ ಕುಮಾರ್ ದಾಸ್, ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಭವಿಶ್ ಅಗರವಾಲ್ ಮತ್ತು ಓಲಾ ಕಂಪನಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

## ಬಿಹಾರದಲ್ಲಿ 84 ಲಕ್ಷ ಮತ ಕಳ್ಳತನ ಸಂತೋಷ್ ಲಾಡ್ ಆರೋಪ

• **ಉದಯವಾಹಿನಿ, ಬೆಂಗಳೂರು**

'ಬಿಹಾರದಲ್ಲಿ 84 ಲಕ್ಷ ಮತಗಳ ಕಳ್ಳತನವಾಗಿದೆ. ವಿಧಾನಸಭೆ ಚುನಾವಣೆಗೂ ಮುನ್ನ ಮತದಾರರ ಪಟ್ಟಿಯಿಂದ 65 ಲಕ್ಷ ಮತದಾರರ ಮತಗಳನ್ನು ತೆಗೆದು, ಹೊಸದಾಗಿ 25 ಲಕ್ಷ ಮತದಾರರ ಹೆಸರು ಸೇರಿಸಿದ್ದಾರೆ. ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಆರೋಪಿಸಿದರು.

ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 100 ಸೀಟುಗಳಲ್ಲಿ ಸ್ಪರ್ಧಿಸಿದೆ. ಇದರಲ್ಲಿ 90ರಲ್ಲಿ ಗೆದ್ದಿದೆ. ಬಿಹಾರವೇನೂ ಅಮೆರಿಕನಾ ಬೆಂಗಳೂರಿನಲ್ಲಿ ಟಾರ್ಚ್ ಹಾಕಿ ಹುಡುಕಿದರೆ ಮನೆ ಮನೆಯಲ್ಲಿ ಬಿಹಾರಿಗಳು ಸಿಗುತ್ತಾರೆ. ಬಿಜೆಪಿ ಬಿಹಾರದಲ್ಲಿ 90 ಸೀಟ್ ಗೆಲ್ಲಲು ಅವರೇನು ಸಾಧನೆ ಮಾಡಿದ್ದಾರೆ ಎಂದು ನಗರದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡುತ್ತ ಪ್ರಶ್ನಿಸಿದರು. ಚುನಾವಣಾ ಆಯೋಗವು ಎಸ್.ಐ.ಆರ್. ಹೆಸರಿನಲ್ಲಿ 65 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದೆ. ಸುಪ್ರೀಂಕೋರ್ಟ್ ಹೇಳಿದರೂ ಪುನಃ ಸೇರಿಸಲಿಲ್ಲ.

ಚುನಾವಣೆಗೆ ಒಂದು ತಿಂಗಳು ಇರುವಾಗ ಹೆಣ್ಣು ಮಕ್ಕಳ ಖಾತೆಗೆ 10 ಸಾವಿರ ಜಮೆ ಮಾಡಿದ್ದಾರೆ. ಬಿಜೆಪಿ ಕೇಂದ್ರದಲ್ಲಿ 11 ವರ್ಷಗಳಿಂದ ಆಡಳಿತ ನಡೆಸುತ್ತಿದೆ. ಹೀಗೆ ಹಣ ಕೊಡುವ ಉದ್ದೇಶವಾದರೂ ಏನು ಎಂದು ಕೇಳಿದರು.

# ಅಭಿವೃದ್ಧಿಗೆ ನಿಲುವು

## ಕರುನಾಡ ಮೇಲೆ ಒಲವು

### ಪ್ರಧಾನಿ ಭೇಟಿ ಬಳಿಕ ಸಿಎಂ ಸುದ್ದಿಗೋಷ್ಠಿ

• **ಉದಯವಾಹಿನಿ, ನವದೆಹಲಿ**

ರಾಜ್ಯ ಸರ್ಕಾರ ಎರಡುವರೆ ವರ್ಷ ಪೂರೈಸ್ತಿರೋ ಹೊತ್ತಲ್ಲೇ ಕಾಂಗ್ರೆಸ್ ಹೈಕಮಾಂಡ್ ಅಂಗಳದಲ್ಲಿ ಕೈ ಪಡೆಯ ಬೆಳವಣಿಗೆಗಳು ತೀವ್ರ ರೂಪ ತಾಳಿವೆ. ಸಚಿವ ಸಂಪುಟ ಪುನಾರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಜೊತೆಗೆ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆಗಳು ನಡೆದಿವೆ. ಕರ್ನಾಟಕ ರಾಜ್ಯ ರಾಜಕಾರಣದ ಚರ್ಚೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಗರಿಗೆದರಿದೆ. ಪ್ರಧಾನಿ ಮೋದಿ ಅವರನ್ನು ಕರ್ನಾಟಕ ಸಿಎಂ ಸಿದ್ದರಾಮಯ್ಯ ದೆಹಲಿಯಲ್ಲಿ ಭೇಟಿ ಮಾಡಿದ್ದು, ರಾಜ್ಯಕ್ಕೆ ಸಂಬಂಧಿಸಿದಂತೆ ಹಲವು ವಿಷಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಬೆಳೆಹಾನಿ, ಕಬ್ಬು ಬೆಳೆಗಾರರ ಸಮಸ್ಯೆ, ಮಹದಾಯಿ ಮತ್ತು ಮೇಕೆದಾಟು ಯೋಜನೆಗಳು ಸೇರಿ ಹಲವು ಪ್ರಮುಖ ವಿಷಯಗಳ ಬಗ್ಗೆ ಪ್ರಧಾನಿಗಳ ಗಮನ ಸೆಳೆದಿದ್ದಾರೆ. ಈ ವೇಳೆ ಸಿದ್ದರಾಮಯ್ಯ ಅವರಿಗೆ ಸಚಿವ ಕೃಷ್ಣಭೈರೇಗೌಡ ಸಾಥ್ ನೀಡಿದ್ದಾರೆ.

ಪ್ರಧಾನಿ ಭೇಟಿ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿರುವ ಸಿಎಂ, ಒಟ್ಟು 5 ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಿರೋದಾಗಿ ತಿಳಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 14,58,000 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಆ ಕುರಿತು ನಾವು ಜಂಟಿ ಸಮೀಕ್ಷೆ ಮಾಡಿಸಿದ್ದೇವೆ.

ರಾಜ್ಯದಲ್ಲಿ ಒಟ್ಟು 3,560 ಕೋಟಿ ನಷ್ಟವಾಗಿದ್ದು, ಮಳೆಯಿಂದಾಗಿ ಮೂಲಸೌಕರ್ಯಗಳಿಗೂ ಹಾನಿಯಾಗಿರುವ ಬಗ್ಗೆ ಪ್ರಧಾನಮಂತ್ರಿಯವರಿಗೆ ಮನವರಿಕೆ ಮಾಡಿದ್ದೇವೆ. ರಾಜ್ಯ ಸರ್ಕಾರವೂ ಬೆಳೆ ಹಾನಿ ಪರಿಹಾರ ಕೊಡುತ್ತಿದ್ದು, ರೈತರಿಗೆ ಕೊಡಬೇಕಾದ ಪರಿಹಾರ 2,800 ಕೋಟಿ ಆಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆಯೂ ಪ್ರಧಾನಿ ಮೋದಿಯವರಿಗೆ ಮಾಹಿತಿ ನೀಡಲಾಗಿದೆ. ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರ. ಟನ್‌ಗೆ 3,500 ರೂ. ಕೊಡಬೇಕು ಎಂದು ರೈತರ ಬೇಡಿಕೆ ಇದ್ದು, ರಾಜ್ಯದಲ್ಲಿ 81 ಸಕ್ಕರೆ ಕಾರ್ಖಾನೆಗಳಿವೆ. ರೈತ ಮುಖಂಡರು, ಕಾರ್ಖಾನೆ ಮಾಲೀಕರ ಜೊತೆ ಸಭೆ ನಡೆಸಿ ಪ್ರತಿ ಟನ್ ಕಬ್ಬಿಗೆ 3,300 ರೂ. ನಿಗದಿ ಮಾಡಿದ್ದೆವು.

ಸರ್ಕಾರದ ದರ ಒಪ್ಪಿಕೊಂಡು ರೈತರು ಪ್ರತಿಭಟನೆ ಹಿಂಪಡೆದರು. ಆದರೆ, ಸಕ್ಕರೆಗೆ ದರ ನಿಗದಿ ಮಾಡುವುದು ಸಹ ಕೇಂದ್ರ ಸರ್ಕಾರ. ಕೆಜಿ ಸಕ್ಕರೆಗೆ 41 ರೂ. ಮಾಡುವಂತೆ ಬೇಡಿಕೆ ಇದ್ದು, ಆ ಬಗ್ಗೆಯೂ ಪ್ರಧಾನಮಂತ್ರಿಗೆ ಮನವಿ ಮಾಡಿದ್ದೇನೆ ಎಂದು ಸಿಎಂ ಹೇಳಿದ್ದಾರೆ.

ಮಹದಾಯಿ ಯೋಜನೆ ವಿಚಾರ ಕೇಂದ್ರ ಸರ್ಕಾರದ ಮುಂದೆ ಇದ್ದು, ಯೋಜನೆ ಜಾರಿಗೆ ಅವರೇ ಅನುಮತಿ ನೀಡಬೇಕು. ಹೀಗಾಗಿ ಆ ಬಗ್ಗೆಯೂ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ್ದೇವೆ. ಕುಡಿಯುವ ನೀರಿನ ಯೋಜನೆ ಕೂಡಲೇ ಮಾಡಿ ಅಂತಾ ಹೇಳಲಾಗಿದೆ.

ಅಪ್ಪರ್ ಕೃಷ್ಣ ಟ್ರಿಬ್ಯುನಲ್ 2 ಅಂತಿಮ ವರದಿ ಬಂದು 10 ವರ್ಷ ಆದರೂ ಈವರೆಗೆ ಗೆಜೆಟ್ ನೋಟಿಫಿಕೇಷನ್ ಮಾಡಿಲ್ಲ. ಹೀಗಾಗಿ ಶೀಘ್ರ ಆ ಬಗ್ಗೆ ಕ್ರಮವಹಿಸಲು ಒತ್ತಾಯಿಸಿರೋದಾಗಿ ಸಿದ್ದರಾಮಯ್ಯ ತಿಳಿಸಿದ್ದಾರೆ.


ಮೇಕೆದಾಟು ಯೋಜನೆ ಸಂಬಂಧ ತಮಿಳುನಾಡು ಅರ್ಜಿ ವಜಾ ಆಗಿದ್ದು, ಅನುಮತಿ ಕೊಡಿ ಅಂತಾ CWCಗೆ ಕೇಂದ್ರ ಸರ್ಕಾರ ಹೇಳಬೇಕು. ಕೋರ್ಟ್ ಅಡೆತಡೆ ಇಲ್ಲ, ಯೋಜನೆ ಮಾಡಲು ತೊಂದರೆ ಇಲ್ಲ. ಹೀಗಾಗಿ 67 ಟಿಎಂಸಿ ನೀರು ಸಂಗ್ರಹ ಮಾಡ್ತೀವಿ. ತಮಿಳುನಾಡಿಗೆ ಸಹಜವಾಗಿ 177.25 ಟಿಎಂಸಿ ನೀರು ಕೊಡ್ತೀವಿ. ಅದರಲ್ಲೂ ಈ ಬಾರಿ ತಮಿಳುನಾಡಿಗೆ ಅತಿಹೆಚ್ಚು ನೀರು ಹೋಗಿದೆ. ಕುಡಿಯುವ ನೀರು ಯೋಜನೆ ಹಾಗೂ ವಿದ್ಯುತ್ ಉತ್ಪಾದನೆ ತಮಿಳುನಾಡಿಗೂ ಹೆಚ್ಚು ಉಪಯೋಗ ಆಗಲಿದ್ದು, ಕರ್ನಾಟಕದ ಜೊತೆ ಜಗಳ ಆಡೋದು ತಪ್ಪುತ್ತೆ ಎಂದು ಸಿಎಂ ಹೇಳಿದ್ದಾರೆ. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಸಂಬಂಧವೂ ಪ್ರಧಾನಿಗೆ ಮನವಿ ಮಾಡಲಾಗಿದೆ ಎಂದಿದ್ದಾರೆ.

### 2,136 ಕೋಟಿ ರೂ.ಗಳ ಪರಿಹಾರಕ್ಕೆ ಮನವಿ



**ವರ್ಷ ಉಂಟಾದ ಭಾರಿ ಮಳೆಯಿಂದಾಗಿ ರಾಜ್ಯದ 14.5 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದ್ದು, 19 ಲಕ್ಷ ರೈತರಿಗೆ ನಷ್ಟ ಉಂಟಾಗಿದೆ. ಇದಲ್ಲದೇ ಸಾವಿರಾರ ಮನೆಗಳು, ರಸ್ತೆ ಹಾಗೂ ಶಾಲೆಗಳು ಹಾನಿಗೀಡಾಗಿದ್ದು ಎನ್.ಡಿ.ಆರ್ ಎಫ್ ವತಿಯಿಂದ ಪರಿಹಾರವನ್ನು ಕೋರಿ ಎರಡು ಮನವಿ ಪತ್ರಗಳನ್ನು ಸಲ್ಲಿಸಲಾಗಿದೆ. ಇನ್ಪುಟ್ ಸಬ್ಸಿಡಿಯಲ್ಲಿನ ಕೊರತೆಗಳನ್ನು ನೀಗಿಸಲು 'ರಕ್ಷಣೆ ಮತ್ತು ಪರಿಹಾರ' ದಡಿ 614.9 ಕೋಟಿಗಳು ಹಾಗೂ ಹಾನಿಗೊಳಗಾದ ಸಾರ್ವಜನಿಕ ಮೂಲಸೌಕರ್ಯಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕಾಗಿ 1521.67 ಕೋಟಿಗಳ ಪರಿಹಾರ ನೀಡಲು ಮನವಿ ಪತ್ರದಲ್ಲಿ ಕೋರಲಾಗಿದೆ.**

**ಪ್ರಧಾನಿಗೆ ಸಿಎಂ ಐದು ಅಂಶಗಳ ಮನವಿ**



**ಸಮಸ್ಯೆ ಹಲವು ಕೇಂದ್ರ ಸರ್ಕಾರ ನೆರವು**

**ಪ್ರವಾಹ ಪರಿಹಾರ ನಿಧಿ ಬಿಡುಗಡೆಗೆ ಅನುಮೋದನೆ**


ಕೇಂದ್ರ ಸರ್ಕಾರವು ಅತಿವೃಷ್ಟಿಯಿಂದ ಹಾನಿಗೊಳಗಾದ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಪ್ರವಾಹ ಪರಿಹಾರ ನಿಧಿಯ ಎರಡನೇ ಕಂತನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಿದೆ. ಈ ಹಣವು ರಾಜ್ಯ ವಿಪತ್ತು ಪರಿಹಾರ ನಿಧಿಯ ಕೇಂದ್ರದ ಪಾಲಿನ ಭಾಗವಾಗಿದ್ದು, ಪ್ರವಾಹದಿಂದ ಹಾನಿಗೊಳಗಾದ ರಾಜ್ಯಗಳಿಗೆ ಇದು ಮಹತ್ವದ ನೆರವು ಒದಗಿಸಲಿದೆ. ಕೇಂದ್ರವು ಈಗಾಗಲೇ ಹಲವು ರಾಜ್ಯಗಳಿಗೆ ವಿಪತ್ತು ಪರಿಹಾರ ನಿಧಿಯನ್ನು ಬಿಡುಗಡೆ ಮಾಡಿದೆ.

**ಸರ್ಕಾರಕ್ಕೆ ಕುಮಾರಸ್ವಾಮಿ ಆಗ್ರಹ**

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಕಲ್ಯಾಣ ಕರ್ನಾಟಕದ ನೆರೆಪೀಡಿತ ಪ್ರದೇಶಗಳಾದ ಕಲಬುರಗಿ, ಯಾದಗಿರಿ ಸೇರಿದಂತೆ ಐದು ಜಿಲ್ಲೆಗಳಲ್ಲಿ ಸಂಕಷ್ಟದಲ್ಲಿರುವ ಜನರಿಗೆ ತಕ್ಷಣವೇ ನೆರವು ನೀಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಪರಿಹಾರ ಕಾರ್ಯಗಳನ್ನು ತ್ವರಿತಗೊಳಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ ಅವರು, ಕಾಳಜಿ ಕೇಂದ್ರ ತೆರೆಯುವುದು, ಆಹಾರ, ನೀರು, ಔಷಧ, ಬೆಳೆ ನಷ್ಟಕ್ಕೆ ಪರಿಹಾರ ಮತ್ತು ಜಾನುವಾರುಗಳ ಆರೈಕೆಗೆ ಒತ್ತು ನೀಡಲು ಆಗ್ರಹಿಸಿದ್ದಾರೆ. ಈ ಕುರಿತು ಕೇಂದ್ರ ಸರ್ಕಾರದಿಂದ ಸಹಕಾರ ಕೊಡಿಸುವ ಭರವಸೆಯನ್ನೂ ಅವರು ನೀಡಿದ್ದಾರೆ.



**ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ**




ಕಲ್ಯಾಣ ಕರ್ನಾಟಕದ ಭಾಗವಾದ ರಾಯಚೂರು ಜಿಲ್ಲೆಯು ಆರೋಗ್ಯ ರಕ್ಷಣೆ, ಶಿಕ್ಷಣ ಹಾಗೂ ತಲಾ ಆದಾಯದ ಮಟ್ಟದಲ್ಲಿ ಆರಂಭಿಕ ಹಂತದಲ್ಲಿದೆ. ದಲಿತರು ಹಾಗೂ ಹಿಂದುಳಿದ ವರ್ಗಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಯ ಜನರಿಗೆ ಗುಣಮಟ್ಟದ ರೆಫರೆಲ್ ವೈದ್ಯಕೀಯ ಕೇಂದ್ರದ ಅಗತ್ಯತೆಯನ್ನು ಪೂರೈಸಲು ರಾಯಚೂರು ಜಿಲ್ಲೆಯಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆಯನ್ನು ನೀಡುವಂತೆ ಮನವಿಪತ್ರದಲ್ಲಿ ಕೋರಲಾಗಿದೆ. ಕರ್ನಾಟಕ ಸರ್ಕಾರವು ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆ ಕೋರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ ವಿವರವಾದ ಯೋಜನಾ ವರದಿಯನ್ನು ಈಗಾಗಲೇ ಸಲ್ಲಿಸಿದೆ. ಯೋಜನೆಗೆ ಅವಶ್ಯವಾದ ಭೂಮಿಯ ಲಭ್ಯತೆ, ಸಂಪರ್ಕ ವ್ಯವಸ್ಥೆ ಮತ್ತು ಸ್ಥಳೀಯ ಆಡಳಿತದ ಬೆಂಬಲ ಸೇರಿದಂತೆ ಏಮ್ಸ್ ನಂತಹ ರಾಷ್ಟ್ರೀಯ ಮಟ್ಟದ ಸಂಸ್ಥೆಯನ್ನು ಜಿಲ್ಲೆಯಲ್ಲಿ ಸ್ಥಾಪಿಸಲು ಪೂರಕ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮನವಿ ಪತ್ರದಲ್ಲಿ ಕೋರಲಾಗಿದೆ.


1. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಪ್ರಧಾನಿ ನರೇಂದ್ರ ಮೋದಿಯವರಿಗೆ ನೆರವು
2. ರಾಯಚೂರು ಜಿಲ್ಲೆಯಲ್ಲಿ ಏಮ್ಸ್ ಆಸ್ಪತ್ರೆಯ ನಿರ್ಮಾಣಕ್ಕೆ ನಿರ್ಧಾರ
3. ಪ್ರಧಾನಿಗೆ ಐದು ಅಂಶಗಳ ಮನವಿ ಮಾಡಿದ ಸಿಎಂ ಸಿದ್ದರಾಮಯ್ಯ



# ಕಾಂಗ್ರೆಸ್ ಸರ್ಕಾರಕ್ಕೆ ತಲೆನೂ ಇಲ್ಲ, ಬುಡನೂ ಇಲ್ಲ

## ▶ ರಾಜ್ಯ, ದೇಶದ ಸಮಸ್ಯೆಗಳ ಬಗ್ಗೆ ಅರಿವೇ ಇಲ್ಲದಿರುವಂತಹ ಮೊಂಡುತನ ಮಾಡುತ್ತಿದೆ

• **ಉದಯವಾಹಿನಿ, ಬೆಂಗಳೂರು**



ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ತಲೆನೂ ಇಲ್ಲ, ಬುಡನೂ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸಚಿವ ವಿ. ಸೋಮಣ್ಣ ವಾಗ್ದಾಳಿ ನಡೆಸಿದ್ದಾರೆ. ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿದ ಅವರು, ಸರ್ಕಾರಕ್ಕೆ ಗಾಂಭೀರ್ಯತೆ ಅನ್ನೋದು ಮೊದಲೇ ಗೊತ್ತಿಲ್ಲ. ರಾಜ್ಯ ಸರ್ಕಾರಕ್ಕೆ ಇಚ್ಛಾಶಕ್ತಿಯ ಕೊರತೆ ಇದೆ. ರಾಜ್ಯ ದೇಶದ ಸಮಸ್ಯೆಗಳ ಬಗ್ಗೆ ಅರಿವೇ ಇಲ್ಲದಿರುವಂತಹ ಮೊಂಡುತನದ ವ್ಯವಸ್ಥೆಯಲ್ಲಿ ಸಿದ್ದರಾಮಯ್ಯ ಸರ್ಕಾರವಿದೆ ಎಂದು ವಾಗ್ದಾಳಿ ನಡೆಸಿದರು. ಇಂತಹ ಜನರನ್ನ ಕಟ್ಟಿಕೊಂಡು ಏನು ಮಾಡೋಕೆ ಆಗಲ್ಲ. ನನ್ನ 50 ವರ್ಷದ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ವ್ಯವಸ್ಥೆಯ ಸಿದ್ದರಾಮಯ್ಯರ ಕಾಲದಲ್ಲಿ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಇದು ಹೇಸಿಗೆ ಕೆಲಸ. ಅದಕ್ಕೆ ಬಿಹಾರದ ಜನರು ಮೋದಿ ಅಭ್ಯುದಯದಲ್ಲಿ ಮತ ಹಾಕಿದ್ದಾರೆ ಎಂದರು.

**ಕಾಂಗ್ರೆಸ್ ಬಗ್ಗೆ ಮಾತನಾಡುವುದೇ ಅಪ್ರಸ್ತುತ**

ಕಾಂಗ್ರೆಸ್ ಬಗ್ಗೆ ಮಾತನಾಡುವುದೇ ಅಪ್ರಸ್ತುತವೆನಿಸಿದೆ. ಅವರ ಬಗ್ಗೆ ಮಾತನಾಡುವುದರಿಂದ ಪ್ರಯೋಜನ ಸಹ ಇಲ್ಲ. ಅಪ್ರಸ್ತುತ ವ್ಯವಸ್ಥೆಯಲ್ಲಿ ಖಜಾನೆ ಖಾಲಿಯಾಗಿದೆ. ಸಿದ್ದರಾಮಯ್ಯ ಬಳಿ ಏನೂ ಇಲ್ಲ. ಎಲ್ಲೆಲ್ಲಿ ಏನೇನೂ ಸಿಕ್ಕಿದೆ. ಯಾವುದಾವುದಕ್ಕೋ ಹೋಗ್ತಿದೆ ಎಂದರು. ಭಾರತದಲ್ಲಿ ಭಗವಂತನೇ ಬೇರೆ. ಕಾಂಗ್ರೆಸ್ ಸರ್ಕಾರವೇ ಬೇರೆಯಾಗಿದೆ. ಇವರ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲದಾಗಿದೆ ಎಂದು ಕಿಡಿಕಾರಿದರು.

**ಕಾಂಗ್ರೆಸ್ ಹೈಕಮಾಂಡ್‌ಗೆ ಗಾಂಭೀರ್ಯತೆ ಇಲ್ಲ:** ಕಾಂಗ್ರೆಸ್ ಹೈಕಮಾಂಡ್ ಸಹ ದಿನಾ ಕಪ್ಪ ಕಾಣಿಕೆ ತಗೆದುಕೊಂಡು ರಾಜ್ಯದ ಮುಖಂಡರನ್ನು ನಿಯಂತ್ರಣ ಮಾಡ್ತಿಲ್ಲ. ಕೈ ಹೈಕಮಾಂಡ್‌ಗೆ ಗಾಂಭೀರ್ಯತೆ ಇಲ್ಲದಾಗಿದೆ. ಈ ಸರ್ಕಾರದಿಂದ ಏನಾದರೂ ಅಭಿವೃದ್ಧಿ ಆಗುತ್ತದೆ ಅಂದುಕೊಂಡ್ರೆ, ಅದು ಕನಸಾಗುತ್ತೆ. ಅಧಿಕಾರ ಕುರ್ಚಿಗಾಗಿ ಇವರು ಕಿತ್ತಾಡುತ್ತಿದ್ದಾರೆ ಎಂದರು. ಮೋದಿಯವರ ದೂರದೃಷ್ಟಿಯಿಂದ ಮುಂದೆ ಆರು ರಾಜ್ಯಗಳಲ್ಲಿ ನಡೆಯುವ ಚುನಾವಣೆಯಲ್ಲೂ ಬಿಜೆಪಿ ಗೆಲುವು ಸಾಧಿಸುತ್ತದೆ. ವಿಕಸಿತ ಭಾರತ 2047 ಒಳಗೆ ಎಲ್ಲವೂ ಅಭಿವೃದ್ಧಿ ಆಗುತ್ತೆ. ತುಮಕೂರಿಗೆ ಮೆಟ್ರೋ ಹಾಗೂ ನಾಲ್ಕು ಲೈನ್ ಹೈವೆ ಸಹ ಬರುತ್ತದೆ. ಅದಕ್ಕಾಗಿ ಈಗ ಡಿಪಿಆರ್ ಸಹ ಆಗುತ್ತಿದೆ. ತುಮಕೂರು, ಕೋಲಾರ, ರಾಮನಗರ ಸೇರಿದಂತೆ ಬೆಂಗಳೂರು ಗಡಿಭಾಗದ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ರೈಲ್ವೆ ಇಲಾಖೆ ತನ್ನದೇಯಾದ ಕೊಡುಗೆ ಕೊಡುತ್ತಿದೆ ಎಂದು ಸಮರ್ಥಿಸಿಕೊಂಡರು.

**ಕಾಂಗ್ರೆಸ್ ನವರಿಗೆ ಅಭಿವೃದ್ಧಿ ಗೊತ್ತಿಲ್ಲ**

ಕಾಂಗ್ರೆಸ್ ನವರಿಗೆ ಅಭಿವೃದ್ಧಿ ಗೊತ್ತಿಲ್ಲ. ರಾಜ್ಯದ ಹಿತ ಗೊತ್ತಿಲ್ಲ. ಸಮಸ್ಯೆ ಗೊತ್ತಿಲ್ಲ, ರಾಜ್ಯವನ್ನು ಯಾವ ರೀತಿ ತೆಗೆದುಕೊಂಡು ಹೋಗಬೇಕು ಅನ್ನೋದು ಗೊತ್ತಿಲ್ಲ. ಇತಂಹ ನಿರ್ಲಿಪ್ತ ಅವ್ಯವಸ್ಥೆಯ ಸರ್ಕಾರವನ್ನ ನಾನೂ ನೋಡಿಲ್ಲ ಎಂದು ಕಿಡಿಕಾರಿದರು. ಕಾಂಗ್ರೆಸ್ ರಾಷ್ಟ್ರೀಯ ಪಕ್ಷ ಅನ್ನೋದಕ್ಕೆ ನಾಚಿಕೆ ಆಗಬೇಕು. ಕಾಂಗ್ರೆಸ್ ನವರು ದೆಹಲಿಯಲ್ಲಿ ಹೋಗಿ ಕುಳಿತುಕೊಂಡು ಇಲ್ಲದ ವೋಟ್ ಚೋರಿ ಬಗ್ಗೆ ಮಾತನಾಡ್ತಾರೆ. ರಾಹುಲ್ ಗಾಂಧಿ ಯಾವ ವಿಚಾರ ತೆಗೆದುಕೊಂಡು ಹೋರಾಟ ಮಾಡಬೇಕು ಅದನ್ನ ಮಾಡ್ತಿಲ್ಲ ಎಂದು ಅಭಿಪ್ರಾಯ ಪಟ್ಟರು.ಚುನಾವಣಾ ಆಯೋಗವನ್ನು ತೆಗೆದುಕೊಂಡು ಹೋರಾಟ ಮಾಡುತ್ತಿರುವುದು ನಿಮ್ಮ ಧೋರಣೆ ತೋರಿಸುತ್ತದೆ. ರಾಹುಲ್ ಗಾಂಧಿ ಜೀವನದಲ್ಲಿ ಅವರ ನಾಯಕತ್ವದಲ್ಲಿ ಒಂದು ಚುನಾವಣೆ ಸಹ ಗೆದ್ದಿಲ್ಲ. ರಾಜ್ಯದಲ್ಲಿ ಅಂದು ನಮ್ಮಲ್ಲಿ ತೊಂದರೆ ಆಗಿದಕ್ಕೆ ಕಾಂಗ್ರೆಸ್ ಗೆದ್ದಿದೆ. ಕಾಂಗ್ರೆಸ್ ಅವನತಿ ರಾಜ್ಯದಲ್ಲಿ ಶುರುವಾಗಿದೆ ಎಂದು ಭವಿಷ್ಯ ನುಡಿದರು.

**ಈ ದಿನದ ದರ**

| | |
|---|---|
| ಪೆಟ್ರೋಲ್: | 103.50 ₹/L |
| ಡೀಸೆಲ್ : | 90.03 ₹/L |
| ಬಂಗಾರ: | ₹12,540/Gram24ct ₹11,495/Gram22ct |
| ಬೆಳ್ಳಿ: | ₹167.00/Gram |



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

## ಧಾರ್ಮಿಕ ತತ್ತ್ವ, ಆಚರಣೆಗಳು

ಧರ್ಮ ಎತ್ತಿಹಿಡಿಯುವುದು. ಯಾವುದೇ ಧರ್ಮ ಶ್ರೇಯಸ್ಸನ್ನು ಹೇಳುವುದು. ಶ್ರೇಯಸ್ಸಿನ ಜೊತೆಗೆ ಶ್ರೇಯಸ್ಸಲ್ಲದ್ದನ್ನು ಹೇಳಿದರೆ ಶ್ರೇಯಸ್ಸಲ್ಲದ್ದು ಧರ್ಮವಲ್ಲ. ಉದಾಹರಣೆಗೆ ಬೈಬಲ್‌ನಲ್ಲಿ ದೇವರ ವಿಗ್ರಹಗಳನ್ನು ಅವುಗಳ ಆರಾಧಕರನ್ನು ಹೇಳಹೆಸರಿಲ್ಲದಂತೆ ನಾಶಪಡಿಸಬೇಕೆಂದಿದೆ. ಪ್ರತಿ ಧರ್ಮದಲ್ಲಿ ದೇವರೆಂದರೆ ಅನಂತ ಶಕ್ತಿಯುತ ವ್ಯಾಪಕತತ್ತ್ವ. ಇದು ಒಂದೇ. ಆದರೆ ಅನುಸರಿಸುವ ಮಾರ್ಗ ವಿಭಿನ್ನ. ಅರ್ಧಚಂದ್ರ ಶಿಲುಬೆ ಮಸೀದಿ ಚರ್ಚ್ ಗುಡಿಗುಂಡಾರ ಪ್ರಣವೋಪಾಸನೆ ತತ್ತ್ವಜ್ಞಾನ ದೇವ ದೇವಿ ಗುರುಮೂರ್ತಿ ಲಿಂಗ ಸಾಲಿಗ್ರಾಮ ಅರಿಷಿಣ ಕುಂಕುಮ ಗಂಧ ವಿಭೂತಿ ಅಡ್ಡನಾಮ ಉದ್ದನಾಮ ಜನಿವಾರ ಶಿವದಾರ ಆರತಿ ತೀರ್ಥ ಪ್ರಸಾದ ಪೂಜೆ ಪ್ರಾರ್ಥನೆ ಜಪ ತಪ ಧ್ಯಾನ ಭಜನೆ ಸೇವೆ ಅನುಸರಿಸುವರು. ಈ ಧಾರ್ಮಿಕ ಆಚರಣೆಗಳು ದೇಶ ಕಾಲ ವ್ಯಕ್ತಿಗನುಗುಣವಾಗಿ ವಿಭಿನ್ನ. ಶಂಕರರ ಕಾಲದಲ್ಲಿ ಅಡ್ಡನಾಮ. ರಾಮಾನುಜ ಮಧ್ವರ ಕಾಲದಲ್ಲಿ ಉದ್ದನಾಮ. ವೈದಿಕದಲ್ಲಿ ಜನಿವಾರ ವೀರಶೈವ ಲಿಂಗಾಯತರ ಕಾಲದಲ್ಲಿ ಶಿವದಾರ. ವಿಭೂತಿ ಹೇಗೆ ಹಚ್ಚಿದರೇನು ಅದು ಕಾಮಾದಿ ಸುಟ್ಟ ಸಂಕೇತ. ಎರಡು ನಾಮ ಮೂರು ನಾಮಗಳಿಗೆ ಆಯಾ ಆಚಾರ್ಯರು ಒಪ್ಪಿದ ದ್ವೈತ ವಿಶಿಷ್ಟಾದ್ವೈತ ಸಿದ್ಧಾಂತ ಸಂಕೇತ.ಕುಂಕುಮ ತ್ಯಾಗದ ಸಂಕೇತ. ಹಚ್ಚಲೇಬೇಕು ಹಚ್ಚಲೇಬಾರದೆಂದಿಲ್ಲ. ತತ್ತ್ವ ಸತ್ಯ ಎಂದೆಂದಿಗೂ ಒಂದೇ. ಧಾರ್ಮಿಕ ಆಚರಣೆಗಳು ಹಾಗಲ್ಲ, ಅವು ನಂಬಿಕೆಯ ಮೇಲೆ ನಿಂತಿವೆ. ಇವನ್ನು ತತ್ತ್ವದ ಒರೆಗಲ್ಲಿಗೆ ಉಜ್ಜಬಾರದು.

# ಜೆಡಿಎಸ್ ಕಾರ್ಯಕರ್ತರು ಪೂರ್ವ ಪಾಲಿಕೆ ಕಚೇರಿ ಕಸ ಸುರಿದು ಪ್ರತಿಭಟನೆ

• **ಉದಯವಾಹಿನಿ, ಕೆ.ಆರ್.ಪುರ**

ಸಮರ್ಪಕವಾಗಿ ಕಸ ವಿಲೇವಾರಿ ಮಾಡುವಲ್ಲಿ ಬೆಂಗಳೂರು ಪೂರ್ವ ಪಾಲಿಕೆ ವಿಫಲವಾಗಿದೆ ಎಂದು ಜೆಡಿಎಸ್ ಕಾರ್ಯಕರ್ತರು ಪೂರ್ವ ಪಾಲಿಕೆ ಕಚೇರಿ ಕಸ ಸುರಿದು ಪ್ರತಿಭಟನೆ ನಡೆಸಿದರು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಬೆಂಗಳೂರು ಕೇಂದ್ರ ಯುವ ಜನತಾದಳ ಅಧ್ಯಕ್ಷರು ಆದಿತ್ಯ. ಎನ್. ರಾಜ್, ಬೆಂ. ಪೂರ್ವ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಚತಾ ಕಾರ್ಯ ಮಾಡುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆಂದು ಆರೋಪಿಸಿದರು. ಸಮರ್ಪಕವಾಗಿ ಸ್ವಚ್ಚತಾ ಕಾರ್ಯ ಮಾಡದಿದ್ದರೆ ಮುಂದಿನ ದಿನಗಳಲ್ಲಿ ರಾಶಿಗಟ್ಟಲೆ ಕಸವನ್ನು ಸುರಿದು ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಜೆಡಿಎಸ್ ಪಕ್ಷದ ಕ್ಷೇತ್ರ ಅಧ್ಯಕ್ಷ ಓಬಳೇಶ್ ಮಾತನಾಡಿ, ಸ್ವಚ್ಚತಾ ವಾಹನಗಳು ಪ್ರತಿನಿತ್ಯ ಮನೆಗಳ ಬಳಿಹೋಗಿ ಕಸವನ್ನು ಸಂಗ್ರಹಣೆ ಮಾಡುತ್ತಿಲ್ಲ ಸಾರ್ವಜನಿಕರು ರಸ್ತೆಗಳ ಬದಿಗಳಲ್ಲಿ ಸುರಿಯುತ್ತಿರುವ ಕಸವನ್ನು ವಾಹನಗಳಲ್ಲಿ ಸಂಗ್ರಹಣೆ ಮಾಡದೆ ಸಾರ್ವಜನಿಕರ ಮನೆಗಳ ಮುಂದೆ ಸುರಿಯಲು ಮುಂದಾಗಿದ್ದಾರೆ. ಜಿಬಿಎ ಅಧಿಕಾರಿಗಳು ನೆಪ ಮಾತ್ರಕ್ಕೆ ಕೆಲವು ಕಡೆ ಸ್ಥಳ ಪರಿಶೀಲನೆ ಮಾಡಿ ಫೋಟೋ ತೆಗೆದುಕೊಂಡು ಸಮಾಜಿಕ ಮಾಧ್ಯಮದಲ್ಲಿ ಹಾಕುತ್ತಿದ್ದಾರೆಂದು ಹೇಳಿದರು. ಬೆಂ. ಕೇಂದ್ರ ಯುವ ಜನತಾದಳದ ಮಹಾ ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್ ತರೀಕೆರೆ ಮಾತನಾಡಿ, ಕೂಡಲೇ ಜಿಬಿಎ ಅಧಿಕಾರಿಗಳು ಈ ಕಾನೂನು ಬಾಹಿರ ಕ್ರಮವನ್ನು ನಿಲ್ಲಿಸಿ ಕ್ಷೇತ್ರದ ಅಭಿವೃದ್ಧಿ ಕಡೆಗೆ ಕಸ ವಿಲೇವಾರಿ ಸಮಸ್ಯೆಯನ್ನು ನೀವಾರಿಸುವಲ್ಲಿ ಪ್ರಾಮಾಣಿಕವಾಗಿ ಸಹಕರಿಸಿ ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಸೋಮಶೇಖರ್, ಮಂಜುನಾಥ್, ಶಂಕರ್ ಗೌಡ, ಶೋಭಾ, ಸುಹಾಸ್ ಗೌಡ, ಹರೀಶ್, ಸಿದ್ದಪ್ಪನಾಯಕ, ವರುಣ್, ಯುವ ಜನತಾದಳದ ಯಶವಂತ್, ದುರ್ಗೇಶ್, ಡೂಪಚೆನ್ ಗಂಗಾಧರ್ ಮಹೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

# ತುಮಕೂರು-ಬೆಂಗಳೂರು ಮೆಟ್ರೋಗೆ ತೇಜಸ್ವಿ ಸೂರ್ಯ ಅಪಸ್ವರ

## • ಮೆಟ್ರೋ ಬದಲಿಗೆ ಉಪನಗರ ರೈಲುಗಳ ಅಭಿವೃದ್ಧಿಗೆ ಒತ್ತು ನೀಡುವಂತೆ ತೇಜಸ್ವಿ ಸೂರ್ಯ ಸಲಹೆ

• **ಉದಯವಾಹಿನಿ, ಬೆಂಗಳೂರು**

ತುಮಕೂರು-ಬೆಂಗಳೂರು ಮೆಟ್ರೋ ರೈಲು ಯೋಜನೆಯ ಡಿಪಿಆರ್ ಸಿದ್ಧಪಡಿಸಲು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಮುಂದಡಿಯಿಟ್ಟಿದೆ. ಇದರ ನಡುವೆಯೇ ಬೆಂಗಲೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ವಿರೋಧ ವ್ಯಕ್ತಪಡಿಸಿದ್ದಾರೆ. ತುಮಕೂರಿನಿಂದ ಬೆಂಗಳೂರಿಗೆ ತ್ವರಿತವಾಗಿ ತ್ವರಿತ ಸಾರಿಗೆ ಯಂಥ ಸೌಲಭ್ಯವೊಂದು ಬರಬೇಕು. ಆದರೆ, ಮೆಟ್ರೋ ಬೇಡ ಎಂದಿರುವ ಸಂಸದರು ಸರ್ಕಾರಕ್ಕೊಂದು ಸಲಹೆಯನ್ನೂ ಕೊಟ್ಟಿದ್ದಾರೆ.

ಈ ಕುರಿತಂತೆ ಟ್ವೀಟ್ ಮಾಡಿರುವ ಅವರು, ತುಮಕೂರಿಗೆ ಬೆಂಗಳೂರಿಗೆ ವಿಶ್ವ ದರ್ಜೆಯ ಸಂಪರ್ಕದ ಅಗತ್ಯವಿದೆ. ನಿಸ್ಸಂದೇಹವಾಗಿ. ಆದರೆ ಮೆಟ್ರೋ ಸರಿಯಾದ ಆಯ್ಕೆಯೇ? ತುಮಕೂರಿಗೆ ಮೆಟ್ರೋ ನಿರ್ಮಿಸುವುದು ನಗರ ಯೋಜನಾ ದುಃಸ್ವಪ್ನ. ಅದನ್ನು ನಿರ್ಮಿಸಲು ಅತಿಯಾದ ವೆಚ್ಚವು ಅರ್ಥಹೀನವಾಗಿದೆ - ಇದಕ್ಕಾಗಿಯೇ ನಾವು ಉಪನಗರ ರೈಲುಗಳನ್ನು ಹೊಂದಿದ್ದೇವೆ. ಆದರೆ ಬಹಳ ದಿನಗಳಿಂದ ಬಾಕಿ ಉಳಿದಿರುವ ಉಪನಗರ ರೈಲು ಅಭಿವೃದ್ಧಿ ತುಮಕೂರಿಗೆ ಸಂಪರ್ಕವನ್ನು ಸುಧಾರಿಸುವ ಬದಲು, ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ವರ್ಷಾನುಗಟ್ಟಲೆ ತೆಗೆದುಕೊಳ್ಳುವ ಮೆಟ್ರೋ ಯೋಜನೆಗೆ ಡಿಪಿಆರ್ ಸಿದ್ಧಪಡಿಸಲು ಕೋಟಿಗಟ್ಟಲೆ ಖರ್ಚು ಮಾಡಲು ಬಯಸಿದೆ ಎಂದು ಉಲ್ಲೇಖಿಸಿದ್ದಾರೆ. ಇಲ್ಲವಾದರೆ ಹೀಗೆ ಯೋಚಿಸಿ. ಮೆಟ್ರೋದ ಸರಾಸರಿ ಕಾರ್ಯಾಚರಣೆಯ ವೇಗ ಗಂಟೆಗೆ ಸುಮಾರು 34 ಕಿ.ಮೀ. ಆಗಿದ್ದು, ಇದು ದೀರ್ಘ ಅಂತರ-ನಗರ ಪ್ರಯಾಣಗಳಿಗೆ ಬಸ್‌ನಂತೆಯೇ ಇರುತ್ತದೆ. ಕಾಂಗ್ರೆಸ್ ಸರ್ಕಾರವು ಪದೇ ಪದೇ ಮೂಲಭೂತ ಅಂಶಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಿದೆ.

ಒಂದುಕಡೆ ಕಾಂಗ್ರೆಸ್ ಸರ್ಕಾರ, ಬೆಂಗಳೂರಿನಲ್ಲಿ ಅನವಶ್ಯಕವಾಗಿರುವ ಸುರಂಗ ರಸ್ತೆಯನ್ನು ಮಾಡಲು ಹೊರಟಿದೆ. ಮತ್ತೊಂದೆಡೆ ಇಂಟರ್ ಸಿಟಿ ಮಾದರಿಯ ಮೆಟ್ರೋ ಯೋಜನೆಯ ಪ್ರಸ್ತಾಪ ಮಾಡಿದೆ ಎಂದು ಅವರು ಹೇಳಿದ್ದಾರೆ.

**ಡಿಪಿಆರ್ ಆಗಾಗಿ ಟೆಂಡರ್:** ನಮ್ಮ ಮೆಟ್ರೋ ಸೇವೆಯನ್ನು ತುಮಕೂರಿಗೆ ವಿಸ್ತರಿಸುವ ಮಹತ್ವದ ಯೋಜನೆಯನ್ನು ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್ ಕೈಗೆತ್ತಿಕೊಂಡಿದೆ.

ಈಗಾಗಲೇ, ಈ ಮಾರ್ಗದ ವಿಸ್ತೃತ ಯೋಜನಾ ವರದಿ ತಯಾರಿಸಲು ಟೆಂಡರ್ ಕರೆಯಲಾಗಿದೆ. ಈ ಮೆಟ್ರೋ ಮಾರ್ಗವು ಬೆಂಗಳೂರು ಮತ್ತು ಪ್ರಮುಖ ಕೈಗಾರಿಕಾ ಕೇಂದ್ರವಾದ ತುಮಕೂರಿನ ನಡುವಿನ ಸಂಪರ್ಕವನ್ನು ಸುಲಭಗೊಳಿಸಿ, ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಿದೆ.

ಈ ಮಹತ್ವಾಕಾಂಕ್ಷೆಯ ಯೋಜನೆಯು ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಅನುಷ್ಠಾನಗೊಳ್ಳಲಿದೆ.





**ಬೆಂಗಳೂರು ಮೆಟ್ರೋವನ್ನು ತುಮಕೂರಿನವರೆಗೆ ವಿಸ್ತರಿಸುವ ಮಹತ್ವದ ಯೋಜನೆಯ ಕಾರ್ಯಸಾಧ್ಯತಾ ವರದಿ ಸಲ್ಲಿಕೆಯಾಗಿದೆ. ಈ ಯೋಜನೆಯು ಮಾಧಾವರದಿಂದ ಶಿರಾ ಗೇಟ್‌ವರೆಗೆ ಒಟ್ಟು 56.6 ಕಿ.ಮೀ. ಮಾರ್ಗವನ್ನು ಒಳಗೊಂಡಿದ್ದು, ಇದರಲ್ಲಿ 26 ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ವಿಸ್ತರಣೆಯು ಬೆಂಗಳೂರು-ತುಮಕೂರು ನಡುವಿನ ಪ್ರಯಾಣವನ್ನು ಸುಗಮಗೊಳಿಸುವುದರ ಜೊತೆಗೆ, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಉತ್ತರ ಕರ್ನಾಟಕದ ಜನರಿಗೂ ಅನುಕೂಲ ಕಲ್ಪಿಸಲಿದೆ.**


**ತುಮಕೂರು - ಬೆಂಗಳೂರು ನಡುವೆ 26 ನಿಲ್ದಾಣ**

**ಇಂಥ ಅವೈಜ್ಞಾನಿಕವಾದ, ದುಬಾರಿಯ ಯೋಜನೆಗಳಿ ಹಣವನ್ನು ಸುರಿಯುವ ಮೂಲಕ ನಗರದ ನಾಯಕರಿಗೆ ಮೂಲಸೌಕರ್ಯಗಳನ್ನು ನೀಡುವುದು ಕಷ್ಟವಾಗುತ್ತದೆ. ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಶೀಘ್ರದಲ್ಲೇ ಇಂತಹ ತರ್ಕಬದ್ಧವಲ್ಲದ ವಿಚಾರಗಳಿಂದ ಹೊರಬರುತ್ತದೆ ಎಂದು ಆಶಿಸುತ್ತೇವೆ ಎಂದು ತೇಜಸ್ವಿ ಸೂರ್ಯ ಹೇಳಿದ್ದಾರೆ.**

# ಶ್ರೀಮದ್ಭಾಗವತ ಸಪ್ತಾಹ

• **ಉದಯವಾಹಿನಿ, ಬೆಂಗಳೂರು**

ಶ್ರೀ ದಿಗ್ವಿಜಯ ಲಕ್ಷ್ಮೀ ನರಸಿಂಹ ದೇವರ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ನವೆಂಬರ್ 17 ರಿಂದ 23ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಶ್ರೀ ಪವನಾಚಾರ್ಯ ಜಾಗೀರದಾರ್ ರವರಿಂದ ಶ್ರೀಮದ್ಭಾಗವತ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀಮದುತ್ತರಾದಿಮಠ, ನ್ಯಾಷನಲ್ ಕಾಲೇಜು ಎದುರು, ಬಸವನಗುಡಿ ಬೆಂಗಳೂರು-560004 ಸರ್ವರಿಗೂ ಆತ್ಮೀಯ ಸುಸ್ವಾಗತ



# ಸಂಪನ್ನಗೊಂಡ ಗಂಗಾ ಲಹರಿ ವಾಚನ - ವ್ಯಾಖ್ಯಾನ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾವತಿಯಿಂದ ಶ್ರೀ ಜಗನ್ನಾಥ ಪಂಡಿತರು ಸಂಸ್ಕೃತದಲ್ಲಿ ಮೂಲ ರಚನೆ ಮಾಡಿರುವ ಕೀರ್ತಿಶೇಷ ಪಂಡಿತ ಶ್ರೀ ಪಂಡರಿನಾಥಾಚಾರ್ಯ ಗಲಗಲಿ ರಾಷ್ಟ್ರಪತಿ ಪುರಸ್ಕೃತರು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರು ರವರು ಕನ್ನಡಕ್ಕೆ ಅನುವಾದಿಸಿರುವ ರಾಗ ತಾಳ ಭಾವದ ಕಾವ್ಯ ಗಂಗಾಲಹರಿಯ ಆಯ್ದ ಪದ್ಯಗಳ ವಾಚನ ವ್ಯಾಖ್ಯಾನವನ್ನು ರಾಜಾಜಿನಗರ ಒಂದನೇ ಕೆ ಬ್ಲಾಕ್, ಬಾಲಮೋಹನ್ ವಿದ್ಯಾ ಮಂದಿರ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಪಂಡಿತ ಪೂಜ್ಯ ಗಲಗಲಿ ಆಚಾರ್ಯರ ನೇರ ಶಿಷ್ಯರಾದ ಖ್ಯಾತ ವಾಗ್ಮಿ ಡಾ. ವೆಂಕಟನರಸಿಂಹಾಚಾರ್ಯ ಜೋಷಿ ,ಗುಡೇ ಬಲ್ಲೂರರವರು ವಾಚನ- ವ್ಯಾಖ್ಯಾನವನ್ನು ನಡೆಸಿಕೊಟ್ಟರು. ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಸಂಸ್ಕೃತ ಮತ್ತು ಕನ್ನಡ ಉಭಯ ಭಾಷಾ ವಿದ್ವಾಂಸರಾಗಿ, ವಾಗ್ಮಿಯಾಗಿ ಸಾರಸ್ವತ ಲೋಕಕ್ಕೆ ಮಹತ್ತರ ಕೊಡುಗೆಯನ್ನಿತ್ತ ಗಲಗಲಿ ಆಚಾರ್ಯರ ಸೇವೆಯನ್ನು ದೇಶದ ಶೈಕ್ಷಣಿಕ ವಲಯದ ಯಾವುದೇ ವಿಶ್ವವಿದ್ಯಾಲಯಗಳು ಗುರಿತಸದೇ ಇರುವುದು ದುರಾದುಷ್ಟಕರ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾರಂಭದ ಪ್ರಾಯೋಜಕರಾದ ಪುಷ್ಪಾ ಮುದಕವಿ ಮತ್ತು ಮೋಹನ ಮುದಕವಿ ಕುಟುಂಬ , ಉ.ರಾ ಬ್ರಾಹ್ಮಣ ಸಭಾದ ಅಧ್ಯಕ್ಷ ಎಸ್ .ಬಿ ರಾಜೇಶ್ , ಕಾರ್ಯದರ್ಶಿ ಭಾನುಪ್ರಕಾಶ್ ಹೆಚ್ ಪಿ , ಪ್ರೊ.ಹೆಚ್.ಎಸ್.ಲಕ್ಷ್ಮಿನಾರಾಯಣ ಭಟ್ಟರು ಮೊದಲಾದವರು ಉಪಸ್ಥಿತರಿದ್ದರು.

# ಕ್ಯಾಬ್ ಚಾಲಕನ ಜೊತೆ ಪ್ರಯಾಣಿಕನ ಜಗಳ, ಕಾರಿನ ಮೇಲೆ ನಿಂತು ಹುಚ್ಚಾಟ!

• **ಉದಯವಾಹಿನಿ, ಬೆಂಗಳೂರು**

ನಗರದ ಕೇಂದ್ರಭಾಗದಲ್ಲಿರುವ ಹೆಚ್ಚು ವಾಹನ ದಟ್ಟಣೆಯ ಪ್ರದೇಶವಾದ ಮೇಖ್ರಿ ಸರ್ಕಲ್ ನಲ್ಲಿ ಸೋಮವಾರ ದೊಡ್ಡ ಹೈಡ್ರಾಮ ನಡೆದಿದೆ. ಪ್ರಯಾಣಿಕನೊಬ್ಬ ಕ್ಯಾಬ್ ಡ್ರೈವರ್ ಮೇಲೆ ಹಲ್ಲೆನಡೆಸಿ ನಡು ರಸ್ತೆಯಲ್ಲಿ ಹುಚ್ಚಾಟ ನಡೆಸಿದ್ದಾನೆ.

ಅಂದಹಾಗೆ, ಸೂಪರ್ ಮಾರ್ಕೆಟ್‌ನಲ್ಲಿ ಮ್ಯಾನೇಜರ್ ಆಗಿದ್ದ ಸಂತೋಷ್ ಬದರಿನಾಥ, ಮೈಸೂರಿನಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕ್ಯಾಬ್ ಬುಕ್ ಮಾಡಿದ್ದ ಎನ್ನಲಾಗಿದೆ. ಮೆಕ್ರಿ ಸರ್ಕಲ್ ಬಳಿ ಚಾಲಕನ ಜೊತೆ ಮಾತನಾಡುತ್ತಾ ಜಗಳ ಮಾಡಿದ್ದಾನೆ. ಬಳಿಕ ನಡು ರಸ್ತೆಯಲ್ಲಿ ಕಾರಿನ ಮೇಲೆ ಹತ್ತಿ ಹುಚ್ಚನಂತೆ ವರ್ತಿಸಿದ್ದಾನೆ. ಸ್ಥಳದಲ್ಲಿದ್ದ ಜನರು, ಸಂಚಾರಿ ಪೊಲೀಸರು ಸಮಾಧಾನ ಮಾಡಲು ಮುಂದಾದಾಗ ಅವರ ಮೇಲೆಯೇ ಹಲ್ಲೆನಡೆಸಿದ್ದಾನೆ. ಹುಚ್ಚಾಟ ಜೋರಾಗುತ್ತಿದ್ದಂತೆ ಬೇರೆ ಯಾರ ಮೇಲೂ ಹಲ್ಲೆ ಮಾಡಬಾರದು ಎಂದು ಪೊಲೀಸರು ಕೈ ಕಾಲು ಕಟ್ಟಿ ರಸ್ತೆಯಲ್ಲಿ ಮಲಗಿಸಿದ್ದಾರೆ.ಸಂತೋಷ್ ಆರು ತಿಂಗಳಿಂದ ಕೆಲಸ ಕಳೆದುಕೊಂಡು ಮಾನಸಿಕ ಅಸ್ವಸ್ಥನಾಗಿ ವರ್ತಿಸುತ್ತಿರುವ ವಿಚಾರ ಬೆಳಕಿಗೆ ಬಂದಿದೆ. ದಾಂಪತ್ಯ ಜೀವನದಲ್ಲೂ ಸಮಸ್ಯೆ ಹೊಂದಿದ್ದ ಎನ್ನಲಾಗಿದೆ.

# ಬರೋಬ್ಬರಿ 31.83 ಕೋಟಿ ರೂ. ಕಳೆದುಕೊಂಡ ಬೆಂಗಳೂರಿನ ಮಹಿಳೆ

• **ಉದಯವಾಹಿನಿ, ಬೆಂಗಳೂರು**

6 ತಿಂಗಳಿಗೂ ಹೆಚ್ಚು ಕಾಲ ನಡೆದ ಅತ್ಯಾಧುನಿಕ ಡಿಜಿಟಲ್ ಅರೆಸ್ಟ್ ಹಗರಣದಲ್ಲಿ 57 ವರ್ಷದ ಮಹಿಳೆಯೊಬ್ಬರು ಸುಮಾರು 32 ಕೋಟಿ ರೂ.ಗಳನ್ನು ಕಳೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಸಿಬಿಐ ಅಧಿಕಾರಿಗಳಂತೆ ನಟಿಸಿದ ವಂಚಕರು, ಅವರನ್ನು ನಿರಂತರ ಸ್ಕೈಪ್ ಕಣ್ಗಾವಲಿನಲ್ಲಿ ಇರಿಸಿಕೊಂಡು ಡಿಜಿಟಲ್ ಅರೆಸ್ಟ್ ಮಾಡಿದ್ದಾರೆ. ಬಂಧಿಸುವ ಬೆದರಿಕೆಯೊಡ್ಡಿ ಎಲ್ಲಾ ಹಣಕಾಸಿನ ವಿವರಗಳನ್ನು ಹಂಚಿಕೊಳ್ಳುವಂತೆ ಮತ್ತು 187 ಬಾರಿ ಬ್ಯಾಂಕ್ ವರ್ಗಾವಣೆಗಳನ್ನು ಮಾಡಿಸಿಕೊಂಡಿದ್ದಾರೆ. ಇಂದಿರಾನಗರದ ಸಾಫ್ಟ್‌ವೇರ್ ಎಂಜಿನಿಯರ್ ತಮ್ಮ ದೂರಿನಲ್ಲಿ, ವಂಚಕರಿಂದ ಕ್ಲಿಯರೆನ್ಸ್ ಲೆಟರ್ ಪಡೆಯುವವರೆಗೆ ಆರು ತಿಂಗಳಿಗಿಂತ ಹೆಚ್ಚು ಕಾಲ ಈ ಸಂಕಷ್ಟ ಮುಂದುವರಿದಿದೆ ಎಂದು ಹೇಳಿದ್ದಾರೆ. ಇದು 2024ರ ಸೆಪ್ಟೆಂಬರ್ 15 ರಂದು DHL ಅಂಧೇರಿಯವನೆಂದು ಹೇಳಿಕೊಳ್ಳುವ ವ್ಯಕ್ತಿಯೊಬ್ಬರು ಕರೆ ಮಾಡಿ, ಅವರ ಹೆಸರಿನಲ್ಲಿ ಬುಕ್ ಮಾಡಲಾದ ಪಾರ್ಸೆಲ್‌ನಲ್ಲಿ ಕ್ರೆಡಿಟ್ ಕಾರ್ಡ್‌ಗಳು, ಪಾಸ್‌ಪೋರ್ಟ್‌ಗಳು ಮತ್ತು MDMA ಇದೆ ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸುವ ಮೊದಲೇ, ಕರೆಯನ್ನು CBI ಅಧಿಕಾರಿಗಳು ಎಂದು ಹೇಳಿಕೊಂಡವರಿಗೆ ವರ್ಗಾಯಿಸಲಾಗಿದೆ. ಎಲ್ಲಾ ಪುರಾವೆಗಳು ನಿಮ್ಮ ವಿರುದ್ಧವಾಗಿವೆ' ಎಂದು ಹೇಳಿ ಆಕೆಯನ್ನು ಬೆದರಿಸಿದ್ದಾರೆ.

# 5 ದಿನಗಳ ಹಬ್ಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಐದು ದಿನಗಳ ಕಾಲ ನಡೆಯಲಿರುವ ಬಸವನಗುಡಿ ಐತಿಹಾಸಿಕ ಕಡಲೆಕಾಯಿ ಪರಿಷೆಗೆ ಅಧಿಕೃತ ಚಾಲನೆ ದೊರೆಯಲಿದೆ. ಈಗಾಗಲೇ ಬಸವನಗುಡಿಯಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದ್ದು, ಲಕ್ಷಾಂತರ ಜನರು ಜಾತ್ರೆಯಲ್ಲಿ ಸಂಭ್ರಮಿಸುತ್ತಿದ್ದಾರೆ.

ಬಸವನಗುಡಿಯ ಬಸವಣ್ಣ ದೇವಾಲಯದಲ್ಲಿ ನಡೆಯುವ ಈ ಪರಿಷೆಯನ್ನು ಇದೇ ಮೊದಲ ಬಾರಿಗೆ 2 ದಿನದಿಂದ 5 ದಿನಗಳಿಗೆ ವಿಸ್ತರಣೆ ಮಾಡಲಾಗಿದೆ.

ಇಂದು ಬೆಳಿಗ್ಗೆ 10 ಗಂಟೆಗೆ ಕಡಲೆಕಾಯಿ ಪರಿಷೆಗೆ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಚಾಲನೆ ನೀಡಲಿದ್ದಾರೆ.

21 ಬಸವಣ್ಣಗಳನ್ನು ದೇವಸ್ಥಾನಕ್ಕೆ ಆಹ್ವಾನಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡುವುದಾಗಿ ಆಡಳಿತ ಮಂಡಳಿ ತಿಳಿಸಿದೆ.

ಈ ವರ್ಷ ಜಾತ್ರೆ ಪ್ಲಾಸ್ಟಿಕ್ ಮುಕ್ತವಾಗಿರಲಿದ್ದು, ಸಂಪ್ರದಾಯದಂತೆ ಕರ್ನಾಟಕ ಮತ್ತು ನೆರೆಯ ರಾಜ್ಯಗಳ ರೈತರು ದೊಡ್ಡ ಬಸವಣ್ಣ ದೇವಸ್ಥಾನದಲ್ಲಿ ತಮ್ಮ ಮೊದಲ ಕಡಲೆಕಾಯಿ ಸುಗ್ಗಿಯೊಂದಿಗೆ ಆಗಮಿಸಿದ್ದಾರೆ.

ಪರಿಷೆ ಹಿನ್ನೆಲೆ ಸ್ಥಳೀಯ ವ್ಯಾಪಾರಿಗಳಿಗೆ ಸ್ವಲ್ಪ ರೀತಿಯಲ್ಲಿ ಹೊಡೆತ ಬೀಳಲಿದ್ದು, ಇನ್ನೂ ಕೆಲವು ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಾಗುವ ನಿರೀಕ್ಷೆಗಳಿವೆ. ಬಸವನಗುಡಿ ವ್ಯಾಪಾರಿಗಳ ಸಂಘದ ವೆಂಕಟೇಶ್ ಅವರು ಮಾತನಾಡಿ, ಸರ್ಕಾರ 5 ದಿನಗಳ ಕಾಲ ಪರಿಷೆಯನ್ನು ಘೋಷಿಸಿದ್ದರೂ, 10-12 ದಿನಗಳ ಕಾಲ ನಮ್ಮ ವ್ಯಾಪಾರ-ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ಮಾರಾಟಗಾರರು ಮೇಳಕ್ಕೆ ಒಂದೇ ರೀತಿಯ ವಸ್ತುಗಳನ್ನು ತರುವುದರಿಂದ ನಮಗೆ ಮಾರಾಟ ಕಡಿಮೆಯಾಗುತ್ತದೆ. ಆದರೆ, ವರ್ಷಕ್ಕೊಮ್ಮೆ ಮಾತ್ರ ಜಾತ್ರೆ ನಡೆಯುವುದರಿಂದ ಸಣ್ಣ ನಷ್ಟವನ್ನು ನಾವು ಲೆಕ್ಕಿಸುವುದಿಲ್ಲ ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

**ತುಮಕೂರು - ಬೆಂಗಳೂರು ನಡುವೆ 26 ನಿಲ್ದಾಣ**

**ಜಾತ್ರೆಯಲ್ಲಿ ಸ್ಥಳೀಯ ಅಂಗಡಿಗಳಲ್ಲಿ ಮಾರಾಟ ಕಡಿಮೆಯಾದರೂ ತಿನಿಸುಗಳು, ಜ್ಯೂಸ್ ಅಂಗಡಿಗಳು, ಬೇಕರಿಗಳು, ಬೀದಿ-ಆಹಾರ ಮಾರಾಟಗಾರರು ರೆಸ್ಟೋರೆಂಟ್‌ಗಳು ಗ್ರಾಹಕರಲ್ಲಿ ತೀವ್ರ ಏರಿಕೆಯನ್ನು ಕಂಡು ಬಂದಿದೆ. ಒಂದು ಕಡೆ ವ್ಯಾಪಾರ ಕಡಿಮೆಯಾದರೂ ಮತ್ತೊಂದೆಡೆ ಅದು ಹೆಚ್ಚಾಗುತ್ತದೆ. ಜನಸಂದಣಿಯೂ ಹೆಚ್ಚಾಗುತ್ತದೆ. ಜಾತ್ರೆಗೆ ಒಮ್ಮೆ ಬಂದು ಹೋಗುವ ಜನರು ಮತ್ತೊಮ್ಮೆ ಬಂದು ಖರೀದಿ ಮಾಡುತ್ತಾರೆಂದು ಹೇಳಿದ್ದಾರೆ.**

# ಸುರಂಗ ರಸ್ತೆ: ಇಬ್ಬರು ಬಿಡ್‌ದಾರರು ಅನರ್ಹ?

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಸುರಂಗ ರಸ್ತೆ ಯೋಜನೆಗೆ ನಾಲ್ಕು ಕಂಪನಿಗಳು ಬಿಡ್ ಸಲ್ಲಿಸಿವೆಯಾದರೂ, ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ ಬಿ-ಸ್ಮೈಲ್ ಒಡ್ಡಿರುವ ಷರತ್ತಿನ ಕಾರಣಕ್ಕೆ ಎರಡು ಕಂಪನಿಗಳ ಬಿಡ್ ತಿರಸ್ಕೃತವಾಗುವ ಸಾಧ್ಯತೆ ಇದೆ. ಬಿ-ಸ್ಮೈಲ್, 'ಬಿಡ್ ಸಲ್ಲಿಸುವ ಕಂಪನಿಗಳು ಐದು ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ರಸ್ತೆ, ಸುರಂಗ, ಸೇತುವೆ, ಮೇಲ್ಸೇತುವೆ, ಮೆಟ್ರೊ, ರೈಲು ಮಾರ್ಗಗಳು ಕುಸಿದಿರಬಾರದು' ಎಂದು ಷರತ್ತು ಒಡ್ಡಿದೆ.

ಈ ಯೋಜನೆಗೆ ಅದಾನಿ ಗ್ರೂಪ್, ದಿಲಿಪ್ ಬಿಲ್ಡ್‌ಕಾನ್, ವಿಶ್ವಸಮುದ್ರ ಇಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್ ಬಿಡ್ ಸಲ್ಲಿಸಿದ್ದು, ಮೇಲಿನ ಷರತ್ತಿನ ಕಾರಣಕ್ಕೆ ಎರಡು ಕಂಪನಿಗಳು ತಾಂತ್ರಿಕ ಅರ್ಹತೆ ಕಳೆದುಕೊಳ್ಳುತ್ತವೆ. ದಿಲಿಪ್ ಬಿಲ್ಡ್‌ಕಾನ್ ಕಂಪನಿಯು ಆಂಧ್ರಪ್ರದೇಶದಲ್ಲಿ ನಿರ್ಮಿಸಿದ್ದ ಅಂಕಪಲ್ಲಿ ಮೇಲ್ಸೇತುವೆಯು 2021ರ ಜುಲೈನಲ್ಲಿ ಕುಸಿದಿತ್ತು. ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದರು. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎನ್‌ಎಚ್‌ಎಐ ರೂ.3 ಕೋಟಿ ದಂಡ ವಿಧಿಸಿತ್ತು.


ಉದಯವಾಹಿನಿ ಚಿತ್ರ

ಅದಾನಿ ಗ್ರೂಪ್, ಕೇರಳದಲ್ಲಿ ನಿರ್ಮಿಸಿದ್ದ ಅಳಿಯೂರ್‌ವೆಂಗಲಮ್ ರಾಷ್ಟ್ರೀಯ ಹೆದ್ದಾರಿ ಒಂದು ಭಾಗವು ಕುಸಿದಿತ್ತು.

ಈ ಬಗ್ಗೆ ಪರಿಶೀಲನೆ ನಡೆಸಿದ್ದ ಎನ್‌ಎಚ್ ಎಐ, ಕಂಪನಿಯನ್ನು ಒಂದು ವರ್ಷ ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಶಿಫಾರಸು ಮಾಡಿತ್ತು. ಈ ಅವಘಡಗಳ ಕಾರಣದಿಂದಾಗಿ ದಿಲಿಪ್ ಬಿಲ್ಡ್‌ಕಾನ್ ಅದಾನಿ ಗ್ರೂಪ್‌ನ ಬಿಡ್‌ಗಳು ತಿರಸ್ಕೃತವಾಗುವ ಸಾಧ್ಯತೆ ಇದೆ.

ಇದಲ್ಲದೆ ಬಿ-ಸ್ಮೈಲ್, 2024-25ನೇ ಸಾಲಿನಲ್ಲಿ ಒಟ್ಟು ಮೌಲ್ಯ ರೂ.2,192 ಕೋಟಿಯಷ್ಟಿರುವ ಕಂಪನಿಗಳು ಮಾತ್ರ ಬಿಡ್ ಸಲ್ಲಿಸಬೇಕು ಎಂದು ಇನ್ನೊಂದು ಷರತ್ತು ಹಾಕಿದೆ.

# ರಾಜ್ಯದ ಐದು ಕಡೆಗಳಲ್ಲಿ ವಿಶ್ವ ದರ್ಜೆಯ ಏರೋಸ್ಪೇಸ್, ಡಿಫೆನ್ಸ್ ಪಾರ್ಕ್ ಸ್ಥಾಪನೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಐದು ಕಡೆಗಳಲ್ಲಿ ವಿಶ್ವ ದರ್ಜೆ ಗುಣಮಟ್ಟದ ಏರೋಸ್ಪೇಸ್ ಹಾಗೂ ರಕ್ಷಣಾ ಪಾರ್ಕ್ ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮುಂದಾಗಿದೆ.

ಈ ಮೂಲಕ ಅತ್ಯಾಧುನಿಕ ತಂತ್ರಜ್ಞಾನ ಸಾಮರ್ಥ್ಯವನ್ನು ಬಲಪಡಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೋಮವಾರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಮಾಹಿತಿ ಹಂಚಿಕೊಂಡಿರುವ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ಕೌಶಲಯುಕ್ತ ಪ್ರತಿಭಾವಂತರಿಗೆ ಹೊಸ ಅವಕಾಶ ಸೃಷಿಸುವ ಮೂಲಕ ಏರೋಸ್ಪೇಸ್ ಹಾಗೂ ರಕ್ಷಣಾ ಸರಕುಗಳ ಉತ್ಪಾದನೆಯಲ್ಲಿ ರಾಜ್ಯದ ಮುಂಚೂಣಿಯನ್ನು ಬಲಪಡಿಸುವ ಗುರಿ ಹೊಂದಲಾಗಿದೆ ಎಂದಿದ್ದಾರೆ.

ಬೆಂಗಳೂರು, ಮೈಸೂರು, ಬೆಳಗಾವಿ, ತುಮಕೂರು ಮತ್ತು ಚಾಮರಾಜನಗರದಲ್ಲಿ ಇವುಗಳನ್ನು ಅಭಿವೃದ್ಧಿಪಡಿಸುತ್ತಿದ್ದು,

60,000 ಕೌಶಲ್ಯಯುಕ್ತ ಉದ್ಯೋಗದ ಸೃಷ್ಟಿ ಹಾಗೂ ರೂ.45,000 ಕೋಟಿ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶ ಹೊಂದಿರುವುದಾಗಿ ಅವರು ತಿಳಿಸಿದ್ದಾರೆ.



# ಮಹಿಳೆ, ಮಕ್ಕಳ ರಕ್ಷಣೆಗೆ ಅಕ್ಕ ಪಡೆ; ನ.19ರಿಂದ ಕಾರ್ಯಾರಂಭ

• **ಉದಯವಾಹಿನಿ, ಬೆಂಗಳೂರು**

ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣ ರಕ್ಷಣೆ ನೀಡುವ, ಸಕಾಲಿಕವಾಗಿ ಸಹಾಯ ಹಸ್ತ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ ಅಕ್ಕ ಪಡೆ ಆರಂಭಿಸಿದ್ದು, ಇದು ನವೆಂಬರ್ 19ರಿಂದ ಕಾರ್ಯಾರಂಭಮಾಡಲಿದೆ.

2 ವರ್ಷಗಳ ಹಿಂದೆ ಬೀದರ್‌ನಲ್ಲಿ ಪ್ರಾಯೋಗಿಕವಾಗಿ ಅಕ್ಕ ಪಡೆ ಆರಂಭಿಸಲಾಗಿತ್ತು. ಅಲ್ಲಿ ಯಶಸ್ವಿಯಾಗಿದ್ದರಿಂದ ಅಕ್ಕಪಡೆಯನ್ನು ರಾಜ್ಯವ್ಯಾಪಿ ವಿಸ್ತರಿಸಲಾಗುತ್ತಿದೆ. ಮೊದಲ ಹಂತದಲ್ಲಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು, ಉಡುಪಿ, ಮೈಸೂರು, ಮಂಗಳೂರು, ಬೆಳಗಾವಿ, ಬೆಂಗಳೂರು ಸೇರಿದಂತೆ ಆಯ್ದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಲಿದೆ. ನಂತರ ಇತರೆ ಜಿಲ್ಲೆಗಳಿಗೂ ವಿಸ್ತರಣೆಯಾಗಲಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಈ ಪಡೆ ಕಾರ್ಯನಿರ್ವಹಿಸಲಿದೆ. ಸಹಾನುಭೂತಿ ಮತ್ತು ಸಮುದಾಯ ಸೇವೆಯಲ್ಲಿ ಸ್ಪಂದಿಸುವ ಸುರಕ್ಷತಾ ಘಟಕವಾಗಿ ಮತ್ತು ಶೈಕ್ಷಣಿಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಅಕ್ಕ ಪಡೆಯು ಶಾಲಾ-ಕಾಲೇಜು, ಬಸ್ ನಿಲ್ದಾಣ, ಮಾಲ್‌ಗಳು, ಉದ್ಯಾನ, ದೇವಸ್ಥಾನ ಸೇರಿ ಜನದಟ್ಟಣೆ ಪ್ರದೇಶಗಳ ಬಳಿ ಗಸ್ತು ತಿರುಗಿ ಕಿಡಿಗೇಡಿಗಳ ಮೇಲೆ ನಿಗಾ ವಹಿಸಲಿದೆ.

ಯುವತಿಯರು, ವಿದ್ಯಾರ್ಥಿಗಳನ್ನು ಚುಡಾಯಿಸುವ, ಕೀಟಲೆ ಮಾಡುವ ಮತ್ತು ಅಸಭ್ಯ ವರ್ತನೆ ತೋರುವ ಪುಂಡರನ್ನು ಹಿಡಿದು ತಕ್ಕ ಪಾಠ ಕಲಿಸಲಿದೆ. ನಗರ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿಯೂ ಈ ಪಡೆ ಕಾರ್ಯನಿರ್ವಹಿಸಲಿದ್ದು, ಬೀದಿ ಕಾಮಣ್ಣರು, ಮಹಿಳಾ ಪೀಡಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.


ಉದಯವಾಹಿನಿ ಚಿತ್ರ

**ತರಬೇತಿ ಪಡೆದ ಅಕ್ಕ ಪಡೆ ಸದಸ್ಯರನ್ನು ಹೆಣ್ಣು ಮಕ್ಕಳ ಹಾಸ್ಟೆಲ್, ಬಸ್- ರೈಲು ನಿಲ್ದಾಣ, ಪ್ರೇಕ್ಷಣೆಯ ಸ್ಥಳ ಸೇರಿ ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸಲಾಗುವುದು. ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಕರೆಗಳಿಗೆ ತ್ವರಿತವಾಗಿ ಸ್ಪಂದಿಸುವುದು, ಸ್ವರಕ್ಷಣೆ ಕಾರ್ಯವಿಧಾನ ಬಗ್ಗೆ ತರಬೇತಿ ನೀಡುವುದು ಹಾಗೂ ಸಂಚಾರ ನಿಯಮ ಕುರಿತು ಜಾಗೃತಿ ಮೂಡಿಸಲಿದೆ. ಹೊಯ್ಸಳ ವಾಹನದ ಮಾದರಿಯಲ್ಲಿ ಪಡೆ ರಸ್ತೆಗಿಳಿಯಲಿದ್ದು, ಮಹಿಳೆಯರು ಮಕ್ಕಳ ಮೇಲಿನ ದೌರ್ಜನ್ಯ ತಡೆದು, ಕಾನೂನು ರಕ್ಷಣೆಯೊಂದಿಗೆ ಭಯಮುಕ್ತ ವಾತಾವರಣ ಸೃಷ್ಟಿಸಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.**

# ರೂ.500 ಕೋಟಿ ಯಾರ ಜೇಬಿಗೆ?: ಶೋಭಾ ಕರಂದ್ಲಾಜೆ ಪ್ರಶ್ನೆ

## • 7 ವರ್ಷಗಳ ಅವಧಿಗೆ 46 ಸ್ವೀಪಿಂಗ್ ಯಂತ್ರಗಳ ಬಾಡಿಗೆಗೆ 613.25 ಕೋಟಿ ರೂ. ವೆಚ್ಚಕ್ಕೆ ಸಂಪುಟ ಅಸ್ತು

• **ಉದಯವಾಹಿನಿ, ಬೆಂಗಳೂರು**

ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ರಸ್ತೆಗಳನ್ನು ಸ್ವಚ್ಛಗೊಳಿಸಲು 7 ವರ್ಷಗಳ ಅವಧಿಗೆ 46 ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರಗಳನ್ನು ಬಾಡಿಗೆಗೆ ಪಡೆಯುವ 613.25 ಕೋಟಿ ರೂ. ಮೊತ್ತದ ಯೋಜನೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಆದರೆ, ಈ ಯೋಜನೆಯಲ್ಲಿ ಸುಮಾರು 500 ಕೋಟಿ ರೂ. ಗೂ ಅಧಿಕ ಅವ್ಯವಹಾರ ನಡೆದಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಗಂಭೀರ ಆರೋಪ ಮಾಡಿದ್ದು, ಇದು ದೊಡ್ಡ ವಿವಾದಕ್ಕೆ ಕಾರಣವಾಗಿದೆ.

ರಾಜ್ಯ ರಾಜಧಾನಿಯ ಸ್ವಚ್ಛತೆ ಕಾಪಾಡಲು ಐದು ನೂತನ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 46 ರಸ್ತೆ ಗುಡಿಸುವ ಯಂತ್ರಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಪ್ರಸ್ತಾವನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ನೂತನ ಪಾಲಿಕೆಗಳೇ ಭರಿಸಲಿವೆ. ಈ ನಿರ್ಧಾರದ ಪ್ರಕಾರ, ಪ್ರತಿ ಯಂತ್ರಕ್ಕೆ ವಾರ್ಷಿಕವಾಗಿ ಸುಮಾರು 2 ಕೋಟಿ ರೂ. ವೆಚ್ಚತಗುಲಲಿದೆ.


ಉದಯವಾಹಿನಿ ಚಿತ್ರ



**ಖರೀದಿ ಬೇಡ, ಬಾಡಿಗೆಯೇ ಲೇಸು ಎಂದ ಸರ್ಕಾರ**

ಈ ಹಿಂದೆ ಬೃಹತ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸಭೆಯಲ್ಲಿ ಯಂತ್ರಗಳನ್ನು ಖರೀದಿಸಬೇಕೇ ಅಥವಾ ಬಾಡಿಗೆಗೆ ಪಡೆಯಬೇಕೇ ಎಂಬ ಬಗ್ಗೆ ಸುದೀರ್ಘ ಚರ್ಚೆ ನಡೆದಿತ್ತು. ಕರ್ನಾಟಕ ನಗರ ಮೂಲಸೌಕರ್ಯ ಮತ್ತು ಹಣಕಾಸು ನಿಗಮದ (ಕೆಯುಐಡಿಎಫ್‌ಸಿ) ವ್ಯವಸ್ಥಾಪಕ ನಿರ್ದೇಶಕ ಆರ್. ಸೆಲ್ವಮಣಿ ನೇತೃತ್ವದ ತಾಂತ್ರಿಕ ಸಮಿತಿಯು, ಯಂತ್ರಗಳನ್ನು ಬಾಡಿಗೆಗೆ ಪಡೆಯುವ ಬದಲು ನೇರವಾಗಿ ಖರೀದಿಸಿ, ನಿರ್ವಹಣೆಗೆ ಪ್ರತ್ಯೇಕ ಏಜೆನ್ಸಿ ನೇಮಿಸುವಂತೆ ಶಿಫಾರಸು ಮಾಡಿತ್ತು.

- **ಪ್ರತಿ ಯಂತ್ರಕ್ಕೆ ವಾರ್ಷಿಕ 2 ಕೋಟಿ ರೂ. ವೆಚ್ಚ, ಸಂಪೂರ್ಣ ಹಣವನ್ನು ಭರಿಸಲಿವೆ ನೂತನ 5 ಪಾಲಿಕೆಗಳು**
- **ಇದೊಂದು 500 ಕೋಟಿ ರೂ. ಹಗರಣ, ಹೆಚ್ಚುವರಿ ಹಣ ಯಾರ ಜೇಬಿಗೆ? ಎಂದು ಪ್ರಶ್ನಿಸಿದ ಶೋಭಾ ಕರಂದ್ಲಾಜೆ**
- **ಯಂತ್ರಗಳನ್ನು ಬಾಡಿಗೆಗೆ ಪಡೆಯುವ ಬದಲು ಖರೀದಿಸುವಂತೆ ತಾಂತ್ರಿಕ ಸಮಿತಿ ನೀಡಿದ್ದ ಶಿಫಾರಸು ಕಡೆಗಣನೆ**
- **ದೊಡ್ಡ ಆರಂಭಿಕ ವೆಚ್ಚ' ತಪ್ಪಿಸಲು ಬಾಡಿಗೆ ಮಾರ್ಗವನ್ನು ಆಯ್ಕೆ ಮಾಡಿಕೊಂಡಿರುವುದಾಗಿ ಸರ್ಕಾರದ ಸಮರ್ಥನೆ**

ಆದರೆ, ನಂತರ ರೈಟ್ಸ್ ಮತ್ತು ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ಸಹಾಯ ಪಡೆದ ಜಿಬಿಎ, ದೊಡ್ಡ ಪ್ರಮಾಣದ ಆರಂಭಿಕ ಬಂಡವಾಳ' ತಪ್ಪಿಸಲು ಬಾಡಿಗೆ ಮಾರ್ಗವನ್ನು ಆಯ್ಕೆ ಮಾಡಿದೆ. ಪ್ರತಿ ಯಂತ್ರಕ್ಕೆ 3 ಕೋಟಿ ರೂ. ಆರಂಭಿಕ ಹೂಡಿಕೆ ಬೇಕಾಗುತ್ತದೆ ಎಂದು ಬಿಸಿಜಿ ವರದಿ ನೀಡಿತ್ತು. ಅಂತಿಮವಾಗಿ, 'ದೊಡ್ಡ ಆರಂಭಿಕ ವೆಚ್ಚ' ತಪ್ಪಿಸುವ ಕಾರಣ ನೀಡಿ ಸಚಿವ ಸಂಪುಟ ಬಾಡಿಗೆ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದೆ.

**ಶೋಭಾ ಕರಂದ್ಲಾಜೆ ಗಂಭೀರ ಆರೋಪ**

**ಈ ಯೋಜನೆ ಕುರಿತು ತೀವ್ರ ವಾಗ್ದಾಳಿ ನಡೆಸಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಇದೊಂದು ಬೃಹತ್ ಆರ್ಥಿಕ ಹಗರಣ ಎಂದು ಆರೋಪಿಸಿದ್ದಾರೆ. ಒಂದು ಸ್ವೀಪಿಂಗ್ ಯಂತ್ರದ ಬೆಲೆ 50 ರಿಂದ 80 ಲಕ್ಷ ರೂಪಾಯಿ. 46 ಯಂತ್ರಗಳಿಗೆ ಗರಿಷ್ಠ 38 ಕೋಟಿ ರೂಪಾಯಿ ಆಗಬಹುದು. 46 ಚಾಲಕರು ಮತ್ತು 100 ಸಹಾಯಕರಿಗೆ 7 ವರ್ಷಗಳ ಸಂಬಳ ನೀಡಿದರೂ 60-70 ಕೋಟಿ ರೂ. ಮೀರುವುದಿಲ್ಲ. ಯಂತ್ರ, ಮಾನವಶಕ್ತಿ ಮತ್ತು ನಿರ್ವಹಣೆ ಸೇರಿ ಒಟ್ಟು ವೆಚ್ಚ 100 ಕೋಟಿ ರೂ. ದಾಟುವುದಿಲ್ಲ. ಆದರೆ, ಸರ್ಕಾರ 613 ಕೋಟಿ ರೂ. ಖರ್ಚು ಮಾಡುತ್ತಿದೆ. ಹಾಗಾದರೆ ಉಳಿದ 500 ಕೋಟಿ ರೂ. ಎಲ್ಲಿಗೆ ಹೋಗುತ್ತಿದೆ? ಈ ಹಣದಿಂದ ಯಾರು ಲಾಭ ಪಡೆಯುತ್ತಿದ್ದಾರೆ? ಎಂದು ಪ್ರಶ್ನಿಸಿದ್ದಾರೆ. ಈ ಪ್ರಸ್ತಾವನೆಯನ್ನು ತಕ್ಷಣವೇ ಕೈಬಿಟ್ಟು, ಪಾರದರ್ಶಕತೆ ಖಚಿತಪಡಿಸಬೇಕು ಎಂದು ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.**

# ಚಾಮುಂಡಿ ಬೆಟ್ಟದ ನಂದಿ ರಸ್ತೆ ಕಾಮಗಾರಿ ನನೆಗುದಿಗೆ

## ಚಾಮುಂಡಿಬೆಟ್ಟದ ತಡೆಗೋಡೆ ನಿರ್ಮಾಣ ಕಾಮಗಾರಿ ಗುತ್ತಿಗೆದಾರನ ನಿರ್ಲಕ್ಷ್ಯದಿಂದಾಗಿ ಮತ್ತೆ ಸ್ಥಗಿತ

• ಉದಯವಾಹಿನಿ, ಮೈಸೂರು


ಉದಯವಾಹಿನಿ ಚಿತ್ರ

ಚಾಮುಂಡಿಬೆಟ್ಟದ ವ್ಯೂವ್ ಪಾಯಿಂಟ್‌ನಿಂದ ನಂದಿವರೆಗಿನ ಭೂಕುಸಿತ ಪ್ರದೇಶದಲ್ಲಿ ನಡೆಯುತ್ತಿದ್ದ ತಡೆಗೋಡೆ ಕಾಮಗಾರಿ ಮತ್ತೆ ಸ್ಥಗಿತಗೊಂಡಿದೆ. ಈ ಕಾರ್ಯವನ್ನು ಕೈಗೆತ್ತಿಕೊಂಡಿರುವ ಗುತ್ತಿಗೆದಾರ ಪೂರ್ಣಗೊಳಿಸಿರುವ ಕಾಮಗಾರಿಗೆ ನೀಡಬೇಕಾದ ಹಣವನ್ನು ನಾನಾ ಹಂತಗಳಲ್ಲಿ ಸರಕಾರ ಬಿಡುಗಡೆಗೊಳಿಸಿದೆ.



ಆದರೆ, ಚಾಮುಂಡಿ ಬೆಟ್ಟದ ಕಾಮಗಾರಿಗೆ ಬಿಡುಗಡೆಯಾದ ಹಣವನ್ನು ತಾವೇ ಕೈಗೊಂಡಿರುವ ಮತ್ತೊಂದು ಕಾಮಗಾರಿಗೆ ಬಳಸಿಕೊಂಡಿದ್ದಾರೆ. ಹಾಗಾಗಿ ಸದ್ಯ ಚಾಮುಂಡಿ ಬೆಟ್ಟದ ತಡೆಗೋಡೆ ನಿರ್ಮಾಣ ಕಾಮಗಾರಿ ಮತ್ತೊಂದು ಬಾರಿ ಸ್ಥಗಿತಗೊಂಡಿದೆ ಎಂದು ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ಪದ್ಮನಾಭ ತಿಳಿಸಿದ್ದಾರೆ.

2 ಸ್ಥಳಗಳಲ್ಲೂ ಒಂದೇ ಸಮಯದಲ್ಲಿ ಒಪ್ಪಂದಗಳನ್ನು ತೆಗೆದುಕೊಂಡಿರುವ ಗುತ್ತಿಗೆದಾರ ಚಾಮುಂಡಿ ಬೆಟ್ಟದ ಕಾರ್ಯಕ್ಕೆ ಬದಲಾಗಿ ಮತ್ತೊಂದು ಕೆಲಸಕ್ಕೆ ಮೊದಲ ಆದ್ಯತೆ ನೀಡಿದ್ದಾರೆ. ಶೇ. 80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಇನ್ನುಳಿದ ಕಾರ್ಯವನ್ನು ಪೂರ್ಣಗೊಳಿಸಲು ಗುತ್ತಿಗೆದಾರ ವಿಳಂಬ ಮಾಡುತ್ತಿದ್ದಾರೆ. ಹಾಗಾಗಿ ಚಾಮುಂಡಿ ಬೆಟ್ಟದ ಈ ಕಾರ್ಯಕ್ಕೆ ಸಂಬಂಧಿಸಿದಂತೆ ಕಾಂಟ್ರ್ಯಾಕ್ಟ್ ರದ್ದುಮಾಡಿ ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಲು ಎರಡು ಬಾರಿ ಪತ್ರ ಬರೆದಿದ್ದಾರೆ.

ಅಲ್ಲದೇ ಇಲಾಖೆಯು ಹೊಸ ಟೆಂಡರ್ ಕರೆದು ಈ ದೀರ್ಘಕಾಲದ ಕಾರ್ಯವನ್ನು ಪೂರ್ಣಗೊಳಿಸುವ ಸಾಮರ್ಥ್ಯವಿರುವ ಹೊಸ ಕಾಂಟ್ರಾಕ್ಟರ್ ನೇಮಿಸಲು ಚಿಂತನೆ ನಡೆಸಿದೆ.

**ಕಾಮಗಾರಿ ಯಾವ ಹಂತದಲ್ಲಿದೆ:** ತಡೆಗೋಡೆ ನಿರ್ಮಾಣ ಕಾರ್ಯವನ್ನು ಎರಡು ಹಂತಗಳಾಗಿ ವಿಭಜಿಸಲಾಗಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ವಿಜ್ಞಾನಿಗಳ ಸಲಹೆ ಮೇರೆಗೆ ಈ ಎರಡೂ ಗೋಡೆಗಳನ್ನು ರೈನ್ ಫೋರ್ಸ್ಡ್ ಅರ್ಥ್ ರಿಟೈನಿಂಗ್ ಸ್ಟ್ರಕ್ಚರ್(ಆರ್‌ಇಆರ್ ಎಸ್) ತಂತ್ರಜ್ಞಾನದಿಂದ ನಿರ್ಮಿಸಲಾಗುತ್ತಿದೆ. ಐಐಎಸ್‌ಸಿ ತಂಡವು ಮಣ್ಣಿನ ಪರೀಕ್ಷೆ ಇತರ ಅಧ್ಯಯನಗಳನ್ನು ನಡೆಸಿ, ಗೀಯೋ ಟ್ರೈಲ್ ತಂತ್ರಜ್ಞಾನದ ಮೂಲಕ ಗೋಡೆ ನಿರ್ಮಾಣಕ್ಕೆ ಶಿಫಾರಸು ಮಾಡಿತ್ತು. ಮೊದಲ ಹಂತದಲ್ಲಿ 350 ಮೀಟರ್‌ನ 9.75 ಕೋಟಿ ರೂ. ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಇದರಲ್ಲಿ 310 ಮೀಟರ್‌ಗಳು ಪೂರ್ಣಗೊಂಡಿವೆ. 40 ಮೀಟರ್‌ಗಳು ಬಾಕಿಯಿವೆ. ಎರಡನೇ ಹಂತದಲ್ಲಿ 4.90 ಕೋಟಿ ರೂ. ವೆಚ್ಚದ 284 ಮೀಟರ್ ತಡೆಗೋಟೆ ನಿರ್ಮಾಣ ಕಾಮಗಾರಿಯಲ್ಲಿ 200 ಮೀ. ಪೂರ್ಣಗೊಂಡಿದೆ. 84 ಮೀಟರ್ ಬಾಕಿ ಉಳಿದಿದೆ.

**ತಡೆಗೋಡೆ ನಿರ್ಮಾಣ ಪೂರ್ಣ ಯಾವಾಗ?**

### ಮತ್ತೊಮ್ಮೆ ಚರ್ಚಿಸಲು ನಿರ್ಧಾರ

**ಪ್ರಸ್ತುತ ಗುತ್ತಿಗೆದಾರ ವಿಫಲವಾಗಿರುವ ಕಾರಣದಿಂದ ಲೋಕೋಪಯೋಗಿ ಇಲಾಖೆ ಹೊಸ ಟೆಂಡರ್‌ಗಳನ್ನು ಬಹಿರಂಗಪಡಿಸುವ ಬಗ್ಗೆ ಆಲೋಚಿಸಿದೆ. ಆದರೆ, ಒಪ್ಪಂದ ರದ್ದು ಮಾಡಿದ ನಂತರ ಹೊಸ ಟೆಂಡರ್ ಪ್ರಕ್ರಿಯೆಗೆ ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ. ಹಾಗಾಗಿ ಮೊದಲಿಗೆ ಇದೇ ಗುತ್ತಿಗೆದಾರನೊಟ್ಟಿಗೆ ಮಾತುಕತೆ ಮಾಡಿ ಶೀಘ್ರದಲ್ಲಿಯೇ ಪೂರ್ಣಗೊಳಿಸುವ ಷರತ್ತಿನ ಮೇರೆಗೆ ಕೆಲಸ ಮಾಡಲು ಅವಕಾಶ ನೀಡುವುದು, ಒಂದು ವೇಳೆ ಅದಕ್ಕೆ ಒಪ್ಪದಿದ್ದರೆ ಬದಲಿ ಟೆಂಡರ್ ಕರೆಯಲು ತೀರ್ಮಾನಿಸಿದೆ.**

# ಕೋವಿಡ್ ನಂತರ ಆರೋಗ್ಯ ಸಮಸ್ಯೆ ಹೆಚ್ಚಳ

• ಉದಯವಾಹಿನಿ, ರಾಮನಗರ

ಕೋವಿಡ್ ನಂತರ ಜನರಲ್ಲಿ ಆರೋಗ್ಯ ಸಮಸ್ಯೆ, ಹೃದಯಾಘಾತ ಪ್ರಕರಣ ಹೆಚ್ಚಾಗುತ್ತಿವೆ ಎಂದು ನಿವೃತ್ತ ಔಷಧ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಕಳವಳ ವ್ಯಕ್ತಪಡಿಸಿದರು. ರಾಜ್ಯೋತ್ಸವ ಪ್ರಯುಕ್ತ ಈಚೆಗೆ ನಗರಸಭೆ ಆವರಣದಲ್ಲಿ ಆಯೋಜಿಸಿದ್ದ ಆರೋಗ್ಯ ಹಾಗೂ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಬಹುತೇಕ ಬಡ ಹಾಗೂ ಮಧ್ಯಮ ವರ್ಗದವರ ಕುಟುಂಬದಲ್ಲಿ ರೇಷನ್‌ಗಿಂತ ಹೆಚ್ಚು ಹಣ ಚಿಕಿತ್ಸೆ ಹಾಗೂ ಔಷಧಗಳಿಗೆ ಖರ್ಚಾಗುತ್ತಿದೆ. ಸರ್ಕಾರ ಏನೇ ಯೋಜನೆ ಜಾರಿಗೆ ತಂದರೂ ಶೇ 45ರಷ್ಟು ಹಣವನ್ನು ಮಾತ್ರ ಸರ್ಕಾರದಿಂದ ನೀಡಲು ಸಾಧ್ಯ. ಉಳಿದ ಶೇ 55 ರಷ್ಟು ಹಣವನ್ನು ಜನರು ಭರಿಸುತ್ತಿದ್ದಾರೆ ಎಂದು ಸಮೀಕ್ಷೆ ಹೇಳುತ್ತವೆ.

ಜೀವ ಶೈಲಿ ಬದಲಾವಣೆ, ಆರೋಗ್ಯ ಕಾಳಜಿ ಕೊರತೆ, ಆಹಾರ ಪದ್ಧತಿ ಬದಲಾವಣೆ. ಒತ್ತಡದ ಜೀವನ ಇದಕ್ಕೆಲ್ಲ ಕಾರಣ ಎಂದು ವಿಶ್ಲೇಷಿಸಿದರು.

ನಗರಸಭೆ, ಡಾ.ಚಂದ್ರಮ್ಮ ದಯಾನಂದ ಸಾಗರ ಆಸ್ಪತ್ರೆ, ಬಿಡದಿ ಹೋಬಳಿ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಫೌಂಡೇಶನ್ ಸಹಯೋಗದಲ್ಲಿ ಆಯೋಜಿಸಿದ್ದ ಶಿಬಿರಕ್ಕೆ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಚಾಲನೆ ನೀಡಿದರು.


ಉದಯವಾಹಿನಿ ಚಿತ್ರ

ಆಟೊ, ಟೆಂಪೊ ಚಾಲಕರು ಹಾಗೂ ಶ್ರಮಿಕ ವರ್ಗದವರ ಆರೋಗ್ಯ ಹಿತದೃಷ್ಟಿಯಿಂದ ಈ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಶ್ರಮಿಕ ವರ್ಗದವರು ಕಾರ್ಯದೊತ್ತಡದ ಕಾರಣ ಆರೋಗ್ಯ ಕಾಪಾಡಿಕೊಳ್ಳಲು ನಿರ್ಲಕ್ಷ್ಯ ತೋರುವುದು ಹೆಚ್ಚು. ಆರ್ಥಿಕ ಪರಿಸ್ಥಿತಿಯೂ ಇದಕ್ಕೆ ಪ್ರಮುಖ ಕಾರಣ. ಉಚಿತ ಔಷಧ ವಿತರಣೆ ಮಾಡಿದ್ದೇವೆ ಎಂದು ಅವರು ಹೇಳಿದರು.

ನಗರಸಭೆ ಆಯುಕ್ತ ಡಾ.ಜಯಣ್ಣ. ಮಾಜಿ ಅಧ್ಯಕ್ಷೆ ಪಾರ್ವತಮ್ಮ, ಸದಸ್ಯರಾದ ನಿಜಾಮುದ್ದೀನ್ ಷರೀಫ್, ಮುತ್ತುರಾಜ್, ಮಂಜುನಾಥ್, ಜಯಲಕ್ಷ್ಮಮ್ಮ, ಬೋರೇಗೌಡ, ಗಿರಿಜಮ್ಮ, ಸಮದ್, ಟಿಪಿಎಂಸಿಎಸ್ ಅಧ್ಯಕ್ಷ ಸುರೇಶ್, ಪ್ರವೀಣ್, ಶ್ರೀನಿವಾಸ್, ಡಾ.ರಮೇಶ್, ಡಾ.ಆನಂದ್, ವೆಂಕಟೇಶ್ ಹಾಜರಿದ್ದರು.

# ಕಪ್ಪುಪಟ್ಟಿ ಧರಿಸಿ ಪ್ರತಿಭಟನೆಗೆ ನಿರ್ಧಾರ

• ಉದಯವಾಹಿನಿ, ಶಿಡ್ಲಘಟ್ಟ

ರೇಷ್ಮೆ ರೀಲರುಗಳ ಬೇಡಿಕೆ ಈಡೇರಿಸದ ಸರ್ಕಾರದ ತಾರತಮ್ಯ ನೀತಿ ಖಂಡಿಸಿ ನವೆಂಬರ್ 24ರಂದು ಹೈಟೆಕ್ ಗೂಡಿನ ಮಾರುಕಟ್ಟೆ ಉದ್ಘಾಟನೆಗೆ ಬರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸುತ್ತೇವೆ ಎಂದು ತಾಲ್ಲೂಕು ರೇಷ್ಮೆ ನೂಲು ಬಿಚ್ಚಾಣಿಕೆದಾರರ ಕಲ್ಯಾಣ ಸಂಘದ ಅಧ್ಯಕ್ಷ ಅನ್ಸರ್ ಖಾನ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹಿಂದಿನ ಸರ್ಕಾರದ ಅವಧಿಯಲ್ಲಿ ರೇಷ್ಮೆ ರೀಲರುಗಳಿಗೆ ಬಡ್ಡಿ ರಹಿತ ಮೂರು ಲಕ್ಷ ವರ್ಕಿಂಗ್ ಕ್ಯಾಪಿಟಲ್ ನೀಡುವುದಾಗಿ ಭರವಸೆ ನೀಡಲಾಗಿತ್ತು. ಈ ಅವಧಿಯಲ್ಲಿ ಆ ಮೊತ್ತವನ್ನು ರೂ.5 ಲಕ್ಷಕ್ಕೆ ಹೆಚ್ಚಿಸುವುದಾಗಿ ಘೋಷಿಸಿದರೂ, ಇಂದಿನವರೆಗೂ ಅದು ಕಾರ್ಯಗತವಾಗಿಲ್ಲ ಎಂದರು.

ರೀಲರುಗಳು ಉತ್ಪಾದಿಸುವ ಕಚ್ಚಾ ರೇಷ್ಮೆಯನ್ನು ಮಾರಾಟ ಮಾಡಲು ಸರ್ಕಾರಿ ಮಾರುಕಟ್ಟೆ ಸ್ಥಾಪಿಸಬೇಕು. ಐವತ್ತು ವರ್ಷಗಳಿಂದ ರೇಷ್ಮೆ ಕೈಗಾರಿಕೆಯಲ್ಲಿ ಯಾವುದೇ ಪ್ರಮುಖ ನವೀಕರಣವಾಗಿಲ್ಲ. ರೀಲರುಗಳಿಗೆ ಆಧುನಿಕ ಸೌಲಭ್ಯಗಳಿರುವ ರೀಲಿಂಗಾರ್ಕ್ ಮಾಡಬೇಕು.


ಉದಯವಾಹಿನಿ ಚಿತ್ರ

ರೀಲರುಗಳ ಕುಟುಂಬಗಳಲ್ಲಿ ಶೇ 80ರಷ್ಟು ಮಂದಿ ಉಸಿರಾಟ ಸಂಬಂಧಿತ ಸಮಸ್ಯೆ ಮತ್ತು ಅಸ್ತಮಾದಿಂದ ಬಳಲುತ್ತಿದ್ದಾರೆ. ಇದಕ್ಕಾಗಿ ವಿಶೇಷ ಟಿ.ಬಿ ಮತ್ತು ಶ್ವಾಸಕೋಶ ಚಿಕಿತ್ಸಾ ಆಸ್ಪತ್ರೆ ಸ್ಥಾಪನೆ ಅಗತ್ಯ. ರೇಷ್ಮೆ ಕೃಷಿಕರು ಮಾರುಕಟ್ಟೆಯ ಹೊರಗೆ ರೇಷ್ಮೆ ಗೂಡನ್ನು ಮಾರಾಟ ಮಾಡದಂತೆ ಜಾಗೃತಿ ಮೂಡಿಸಿ ಎಂದು ಒತ್ತಾಯಿಸಿದರು.

ಈಗಿರುವ ರೇಷ್ಮೆ ಗೂಡಿನ ಮಾರುಕಟ್ಟೆಗೇ ರೇಷ್ಮೆಗೂಡಿನ ಆವಕ ಕುಂಠಿತವಾಗಿದೆ. ಹೀಗಿರುವಾಗ ಹೈಟೆಕ್ ಗೂಡಿನ ಮಾರುಕಟ್ಟೆಯ ಪ್ರಯೋಜನವೇನು. ರೈತರು ಮತ್ತು ರೀಲರುಗಳು ಚೆನ್ನಾಗಿದ್ದಾಗ ಮಾತ್ರ ಮಾರುಕಟ್ಟೆಯ ವ್ಯವಸ್ಥೆಗೆ ಅರ್ಥ ಬರುತ್ತದೆ. ಹೈಟೆಕ್ ಗೂಡಿನ ಮಾರುಕಟ್ಟೆಯಲ್ಲಿ ಏನೇನು ಸೌಲಭ್ಯಗಳಿರುತ್ತವೆ. ಅಷ್ಟು ಕೋಟಿ ಹಣ ಖರ್ಚು ಮಾಡುವುದರಿಂದ ರೈತರು ಮತ್ತು ರೀಲರುಗಳಿಗೆ ಹೇಗೆ ಅನುಕೂಲವಾಗುತ್ತದೆ ಎಂಬುದನ್ನು ಇದುವರೆಗೂ ಯಾರೂ ಚರ್ಚಿಸಿಲ್ಲ ಎಂದರು. ರೈತರಿಗೆ ಇ ಹರಾಜು ಮೂಲಕ ಆಯಾ ದಿನವೇ ಹಣ ಸಿಗುವಂತಹ ವ್ಯವಸ್ಥೆ ಆಗಿದೆ. ಆದರೆ ರೀಲರುಗಳು ಉತ್ಪಾದಿಸಿದ ರೇಷ್ಮೆಗೆ ಆ ರೀತಿಯ ಹಣ ಸಿಗುವ ಸರ್ಕಾರಿ ವ್ಯವಸ್ಥೆಯಿಲ್ಲ. ಬಲಿಷ್ಠ ಮಗ್ಗದ ವ್ಯಾಪಾರಿಗಳಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿರುವ ರೀಲರುಗಳನ್ನು ರಕ್ಷಿಸುವ ಮಾರುಕಟ್ಟೆ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಿದೆ. ಆಗ ಮಾತ್ರ ಈ ಉದ್ದಿಮೆ ಉಳಿಯುತ್ತದೆ ಎಂದರು.

# ಗ್ರಾಮೀಣ ಭಾಗದ ರಸ್ತೆಗಳು: ವಾಹನಗಳ ಸಂಚಾರಕ್ಕೆ ಕಿರಿಕಿರಿ

• ಉದಯವಾಹಿನಿ, ಚಾಮರಾಜನಗರ

ನಗರ, ಪಟ್ಟಣ ಹಾಗೂ ಗ್ರಾಮಾಂತರ ಭಾಗಗಳಲ್ಲಿ ರಸ್ತೆಗಳ ಸ್ಥಿತಿ ಗಂಭೀರವಾಗಿದೆ. ಗುಂಡಿ ಬಿದ್ದ ರಸ್ತೆಗಳು ಸುಗಮ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿದ್ದು ನಿತ್ಯ ಅಪಘಾತಗಳಿಗೆ ಎಡೆ ಮಾಡಿಕೊಡುತ್ತಿವೆ. ರಸ್ತೆ ನಿರ್ವಹಣೆಯ ಹೊಣೆ ಹೊತ್ತಿರುವ ಸ್ಥಳೀಯ ಆಡಳಿತಗಳು ನಿರ್ಲಕ್ಷ್ಯ ವಹಿಸಿರುವ ಪರಿಣಾಮ ಸಾರ್ವಜನಿಕರು ಸಂಕಷ್ಟ ಎದುರಿಸುತ್ತಿದ್ದಾರೆ. ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಹಲವು ಬಡಾವಣೆಗಳು ಇಂದಿಗೂ ಡಾಂಬಾರ್ ಮುಖವನ್ನೇ ಕಂಡಿಲ್ಲ. ಕೆಲವು ವಾರ್ಡ್‌ಗಳಲ್ಲಿ ಹಲವು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ರಸ್ತೆಗಳು ಗುಂಡಿಬಿದ್ದಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲ. ನಾಗರಿಕರು ನಿತ್ಯ ಗುಂಡಿಗಳ ಮಧ್ಯೆ ವಾಹನಗಳನ್ನು ಓಡಿಸಬೇಕಾದ ಅನಿವಾರ್ಯತೆ ಇದೆ.

ಚಾಮರಾಜನಗರದಲ್ಲಿ ಸೇವಾಭಾರತಿ ಶಾಲೆಗೆ ಸಂಪರ್ಕಿಸುವ ಚೆನ್ನಾಪುರದ ಮೋಳೆ ರಸ್ತೆ ಸಂಪೂರ್ಣ ಹಾಳಾಗಿದೆ. ರಸ್ತೆಯ ಮಧ್ಯೆ ಅಡಿಯುದ್ದದ ಗುಂಡಿಗಳು ಬಿದ್ದಿವೆ. ಕುಲುಮೆ ರಸ್ತೆಯಿಂದ ಸಂತೇಮರಹಳ್ಳಿ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಸುಮಾರು ಒಂದು ಕಿ.ಮೀ ಉದ್ದದ ರಸ್ತೆ ತುಂಬೆಲ್ಲ ಗುಂಡಿಗಳು ಬಿದ್ದಿದ್ದು ಸಂಚಾರಕ್ಕೆ ಅಡ್ಡಿಯಾಗಿದೆ. ವಿಎಚ್‌ಪಿ ಶಾಲೆಯ ರಸ್ತೆಯಲ್ಲಿ 20ಕ್ಕೂ ಹೆಚ್ಚು ಹಂಪ್‌ಗಳನ್ನು ಹಾಕಲಾಗಿದ್ದು, ಒಂದೆಡೆ ಗುಂಡಿಗಳು, ಮತ್ತೊಂದೆಡೆ ಅವೈಜ್ಞಾನಿಕ ಹಂಪ್‌ಗಳಿಂದ ವಾಹನ ಸವಾರರು ಬೇಸತ್ತಿದ್ದಾರೆ. ನಿತ್ಯ ಶಾಲಾ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳು, ಕೆಲಸ ಕಾರ್ಯಗಳಿಗೆ ನಗರಕ್ಕೆ ಹೋಗುವ ಸಾರ್ವಜನಿಕರು. ಹೂವಿನ ಮಾರುಕಟ್ಟೆಗೆ ಬರುವ ವ್ಯಾಪಾರಿಗಳು ಹಾಗೂ ಗ್ರಾಹಕರು ತೊಂದರೆ ಅನುಭವಿಸುತ್ತಿದ್ದಾರೆ. ಪ್ರತಿಷ್ಠಿತ ಬಡಾವಣೆ ಎಂದು ಕರೆಸಿಕೊಳ್ಳುವ ಭ್ರಮರಾಂಭ ಲೇಔಟ್ ಸ್ಥಿತಿಯೂ ಭಿನ್ನವಾಗಿಲ್ಲ.


ಉದಯವಾಹಿನಿ ಚಿತ್ರ

ಕಿರಿದಾದ ರಸ್ತೆಯಲ್ಲಿ ಏಕಾಏಕಿ ಎದುರಾಗುವ ಗುಂಡಿಗಳು ಹಾಗೂ ಹಂಪ್‌ಗಳು ಕಿರಿಕಿರಿ ಉಂಟು ಮಾಡುತ್ತವೆ. ನಗರಕ್ಕೆ ಹೊಂದಿಕೊಂಡು ಬೆಳೆಯುತ್ತಿರುವ ಹೊಸ ಬಡಾವಣೆಗಳಲ್ಲಿ ರಸ್ತೆಗಳನ್ನೇ ನಿರ್ಮಾಣ ಮಾಡಿಲ್ಲ. ಧೀನಬಂಧು ಶಾಲೆಯ ಸುತ್ತಮುತ್ತಲಿನ ಬಡಾವಣೆಗಳು ಇದುವರೆಗೂ ಡಾಂಬಾರು ಮುಖ ಕಂಡಿಲ್ಲ.

ಹಲವು ವರ್ಷಗಳಿಂದ ಜನರು ಕಾಲ್ನಡಿಗೆಯಲ್ಲಿ ಸಾಗಿ ಅಂಕುಡೊಂಕಾದ ಕಾಲುದಾರಿಗಳು ನಿರ್ಮಾಣವಾಗಿದ್ದು ನಿತ್ಯ ನಿವಾಸಿಗಳು ಸರ್ಕಸ್ ಮಾಡುತ್ತ ವಾಹನಗಳನ್ನು ಓಡಿಸಬೇಕಿದೆ. ನಿಯಮಿತವಾಗಿ ನೀರು, ನಿವೇಶನ ಹಾಗೂ ವಸತಿ ಕಂದಾಯ ಪಡೆಯುವ ನಗರಸಭೆ ರಸ್ತೆ ನಿರ್ಮಿಸಿಕೊಡುವುದನ್ನು ಮಾತ್ರ ಮರೆತಿದೆ.

ಪ್ರಗತಿ ನಗರ, ಪ್ರಶಾಂತ್ ನಗರ, ಬುದ್ದನಗರ, ರಾಮಸಮುದ್ರ, ಭೀಮಸಮುದ್ರ, ಭಗೀರಥ ನಗರ, ಹೌಸಿಂಗ್ ಬೋರ್ಡ್ ಕಾಲೊನಿ, ಗಾಳಿಪುರ, ಸೋಮವಾರ ಪೇಟೆ ಬಡಾವಣೆಯ ರಸ್ತೆಗಳು ಗುಂಡಿಬಿದ್ದು ಹಾಳಾಗಿವೆ.

**ಗುಂಡ್ಲುಪೇಟೆಯಲ್ಲೂ ಗುಂಡಿಗಳ ಕಾರುಬಾರು:** ಗುಂಡ್ಲುಪೇಟೆ ತಾಲ್ಲೂಕಿನ ಮೇಲೆ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ.

ಹೆದ್ದಾರಿಗಳ ಮೂಲಕ ಕೇರಳ, ತಮಿಳುನಾಡು, ಬೆಂಗಳೂರು, ಮೈಸೂರು ಸೇರಿದಂತೆ ವಿವಿಧ ನಗರಗಳಿಗೆ ಸಂಚರಿಸುತ್ತಾರೆ. ಹೆದ್ದಾರಿಗಳಲ್ಲಿ ಕಳಪೆ ಕಾಮಗಾರಿ ಹಾಗೂ ಅಲ್ಲಲ್ಲಿ ಗುಂಡಿಗಳು ಬಿದ್ದಿರುವುದು ಸಂಚಾರಕ್ಕೆ ಅಡ್ಡಿಯಾಗಿದೆ. ತಾಲ್ಲೂಕಿನ ಚಿಕ್ಕತೂಪೂರು ಬಳಿ ಡಾಂಬರ್ ಮೇಲೆದ್ದಿದೆ. ತಾಲೂಕಿನ ಬೊಮ್ಮಲಾಪುರ ರಸ್ತೆ ಹಲವು ವರ್ಷಗಳಿಂದ ಡಾಂಬರು ಕಂಡಿಲ್ಲ. ಮಳೆಗಾಲದಲ್ಲಿ ಸಂಚಾರ ದುಸ್ತರವಾಗುತ್ತದೆ.

### ಕೊಳ್ಳೇಗಾಲದಲ್ಲಿ ಪ್ರಯಾಸದ ಪ್ರಯಾಣ:

**ಕೊಳ್ಳೇಗಾಲ ತಾಲ್ಲೂಕಿನಾದ್ಯಂತ ರಸ್ತೆಗಳು ಗುಂಡಿಗಳಿಂದ ಕೂಡಿದ್ದು ಪ್ರಯಾಣಿಕರು ನಿತ್ಯ ಪರದಾಡುವಂತಾಗಿದೆ. ತಾಲ್ಲೂಕಿನ ಸತ್ತೇಗಾಲ, ಉಗನಿಯ, ಪಾಳ್ಯ, ಮುಳ್ಳೂರು, ಲೊಕ್ಕನಹಳ್ಳಿ, ಗುಂಡಾಲ್ ರಸ್ತೆ ಹಾಳಾಗಿದೆ. ಅಧಿಕಾರಿಗಳಾಗಲಿ ಜನಪ್ರತಿನಿಧಿಗಳಿಗಾಗಲಿ ಪ್ರಯಾಣಿಕರ ನೋವು ಕೇಳುತ್ತಿಲ್ಲ. ಪ್ರತಿನಿತ್ಯ ಗುಂಡಿಬಿದ್ದ ರಸ್ತೆಗಳಲ್ಲಿ ಅಪಘಾತಗಳು ಸಂಭವಿಸುತ್ತಿದ್ದು ಪ್ರಾಣಹಾನಿಯಾಗುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಾಳಜಿ ವಹಿಸಿ ಸುಗಮ ಸಂಚಾರಕ್ಕೆ ರಸ್ತೆಗಳ ನಿರ್ಮಾಣ ಮಾಡಿ ಕೊಡಬೇಕು ಎಂದು ಸತ್ತೇಗಾಲ ಗ್ರಾಮದ ಚೇತನ್ ಒತ್ತಾಯಿಸುತ್ತಾರೆ.**

# ಅಂತರಗಂಗೆ ಜಾತ್ರೆ: ಭರದ ಸಿದ್ಧತೆ

• ಉದಯವಾಹಿನಿ, ಕೋಲಾರ

ದಕ್ಷಿಣ ಕಾಶಿಯೆಂದೇ ಪ್ರಸಿದ್ದಿ ಪಡೆದಿರುವ ನಗರ ಸಮೀಪದ ಅಂತರಗಂಗೆಯ ಕಾಶಿ ವಿಶ್ವೇಶ್ವರ ಸನ್ನಿಧಿಯಲ್ಲಿ ಕಾರ್ತಿಕ ಮಾಸದ ಕಡೆ ಪ್ರಯುಕ್ತ ಜಾತ್ರೆ ನಡೆಯಲಿದ್ದು, ಭರದ ಸಿದ್ಧತೆ ನಡೆದಿದೆ. ಸಾವಿರಾರು ಭಕ್ತರು ಬರುವ ಹಿನ್ನಲೆಯಲ್ಲಿ ಭಜರಂಗದಳ, ವಿಶ್ವ ಹಿಂದೂ ಪರಿಷತ್ ಸೇರಿದಂತೆ ಹಿಂದುತ್ವ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಭಾನುವಾರ ನಗರದ ಬಸ್ ನಿಲ್ದಾಣ ವೃತ್ತದಲ್ಲಿ ಬೃಹತ್ ಸ್ವಾಗತ ಕಮಾನು, ಕೇಸರಿ ಬಂಟಿಂಗ್, ಫ್ಲೆಕ್ಸ್ ಕಟ್ಟುವ ಮೂಲಕ ಇಡೀ ವೃತ್ತವನ್ನು ಕೇಸರಿಮಯಗೊಳಿಸಿದ್ದಾರೆ. ಶಿವ, ಹನುಮ, ನರಸಿಂಹಸ್ವಾಮಿಯ ಕಟೌಟ್‌ಗಳು, ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ.


ಉದಯವಾಹಿನಿ ಚಿತ್ರ

ಕಾರ್ಯಕರ್ತರು ಕಾಶಿ ವಿಶ್ವೇಶ್ವರಸ್ವಾಮಿಯ ದರ್ಶನಕ್ಕೆ ಬರುವ ಭಕ್ತರಿಗೆ ನೆರವಾಗಲು ಸಿದ್ದಗೊಂಡಿದ್ದು, ಅರ್ಚಕ ಮಂಜುನಾಥ್ ದೀಕ್ಷಿತ್ ನೇತೃತ್ವದಲ್ಲಿ ವಿಶೇಷ ಅಲಂಕಾರ, ಪೂಜೆ ನಡೆಯಲಿದೆ. ಅತ್ಯಂತ ಅದ್ದೂರಿ ಹಾಗೂ ಶ್ರದ್ಧಾ ಭಕ್ತಿಗಳಿಂದ ಆಚರಿಸುವ ಕಾಶಿ ವಿಶ್ವೇಶ್ವರ ಸ್ವಾಮಿಯ ಕಡೆ ಕಾರ್ತಿಕ ಸೋಮವಾರದ ಜಾತ್ರೆ ಕಾರ್ಯಕ್ರಮಗಳಿಗೆ ಚಾಲನೆ ನೀಡಲು ಬಜರಂಗದಳ, ವಿಹಿಂಪದ ರಾಜ್ಯ ಮತ್ತು ಜಿಲ್ಲಾ ಮುಖಂಡರು, ಮಾಜಿ ಸಂಸದ ಮುನಿಸ್ವಾಮಿ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ. ಮುಂಜಾನೆ 4 ಗಂಟೆಯಿಂದಲೇ ಉಚಿತ ಬಸ್ ಸಂಚಾರಕ್ಕೆ ಹಲವಾರು ದಾನಿಗಳು ಮುಂದೆ ಬಂದಿದ್ದು, ಭಕ್ತರಿಗೆ ಯಾವುದೇ ಸಮಸ್ಯೆಯಾಗದಂತೆ ಅಗತ್ಯ ಸಿದ್ದತೆ ಮಾಡಿಕೊಂಡಿದ್ದಾರೆ. ಬಸ್ ನಿಲ್ದಾಣ ವೃತ್ತದಲ್ಲಿ ಪೆಂಡಾಲ್ ನಿರ್ಮಿಸಿದ್ದಾರೆ. ಪ್ರಸಾದ, ಕುಡಿಯುವ ನೀರು, ರಕ್ಷಣೆ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಬಜರಂಗದಳದ ಬಾಲಾಜಿ, ಅಪ್ಪಿ ಆನಂದ್, ವಿಹಿಂಪ ಜಿಲ್ಲಾ ಕಾರ್ಯದರ್ಶಿ ಬಾಬು, ನಗರಾಧ್ಯಕ್ಷ ವಿಶ್ವನಾಥ್, ತಾಲ್ಲೂಕು ಸಂಚಾಲಕ ಶ್ರೀಧರ್, ವೆಂಕಟೇಶ್, ಕನಕೇಶ್, ಮುಖಂಡರಾದ ರವಿ, ಪವನ್, ವಿಶ್ವನಾಥ್, ವಿನಯ್, ಪೃಥ್ವಿ, ಲೋಕೇಶ್, ಸಾಯಿ ಸುಮನ್, ಸಾಯಿಮೌಳಿ, ಸಾಯಿಕುಮಾರ್, ಬದ್ರಿ, ಮಹೇಶ್, ಪ್ರವೀಣ್, ಮೌಳಿ, ಮಂಜು, ದೀಪು, ಲೋಹಿತ್, ಯಶವಂತ್, ಭರತ್, ವೆಂಕಟೇಶಬಾಬಾ, ಭವಾನಿ, ವೆಂಕಿ ಸಿದ್ಧತಾ ಕಾರ್ಯದಲ್ಲಿ ತೊಡಗಿದ್ದಾರೆ.

# ಶಾಲೆಗೆ ನೆಲೆ ಇಲ್ಲ, ಮಕ್ಕಳಿಗೆ ರಕ್ಷಣೆ ಇಲ್ಲ

## ಮಾಲೂರು ನಗರದ ಧರ್ಮರಾಯಸ್ವಾಮಿ ಸರ್ಕಾರಿ ಪ್ರಾಥಮಿಕ ಶಾಲೆಯ ಸ್ಥಿತಿ

• ಉದಯವಾಹಿನಿ, ಮಾಲೂರು

ಸೋರುವ ಕೊಠಡಿಗಳು, ಶಿಥಿಲಗೊಂಡ ಕಟ್ಟಡ, ಬಿರುಕು ಬಿಟ್ಟ ಗೋಡೆ... ಇದು ಮಾಲೂರಿನ ಧರ್ಮರಾಯಸ್ವಾಮಿ ಸರ್ಕಾರಿ ಪ್ರಾಥಮಿಕ ಶಾಲೆಯ ಸ್ಥಿತಿ. ಈ ಶಾಲೆಯಲ್ಲಿ 1 ರಿಂದ 5ನೇ ತರಗತಿವರೆಗೆ 54 ಮಕ್ಕಳು ಪ್ರಸ್ತುತ ವಿದ್ಯಾಭ್ಯಾಸ ಮಾಡುತ್ತಿದ್ದು, ಮೂರು ಮಂದಿ ಶಿಕ್ಷಕರಿದ್ದಾರೆ. ಆದರೆ, ಶಾಲೆಯೂ ಶಿಥಿಲಾವಸ್ಥೆ ತಲುಪಿದ್ದು, ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ.

ಪಟ್ಟಣದಲ್ಲಿ 1958ರಲ್ಲಿ ಆರಂಭವಾಗಿದ್ದ ಶಾಲೆಯನ್ನು ನಂತರದ ದಿನಗಳಲ್ಲಿ ದೇವಾಲಯ ಅಭಿವೃದ್ಧಿ ದೃಷ್ಟಿಯಿಂದ ಪಕ್ಕದ ಸರ್ಕಾರಿ ಜಾಗದಲ್ಲಿ ದೇವಾಲಯ ಹಾಗೂ ದಾನಿಗಳ ನೆರವಿನಿಂದ ಮೂರು ಕೊಠಡಿಗಳ ಶಾಲೆಯನ್ನು ನಿರ್ಮಿಸಲಾಯಿತು. ಆದರೆ, ಕೆಲವರು ಶಾಲೆಯಿರುವ ಜಮೀನು ನಮ್ಮದು ಎಂದು ಕೆಲವರು ದಾಖಲೆ ಸೃಷ್ಟಿಸಿದ್ದು, ಸರ್ಕಾರಿ ಶಾಲೆಗೆ ನೆಲೆಯೂ ಇಲ್ಲದಂತಾಗಿದೆ. ಹಂದಿ ಗೂಡಂತಿರುವ ಸರ್ಕಾರಿ ಶಾಲೆಯಲ್ಲಿ ಮಕ್ಕಳು ಕುಳಿತು ಪಾಠ ಕೇಳುವುದೇ ಸಾಹಸದ ಕೆಲಸವಾಗಿದೆ. ರಸ್ತೆಗಿಂತ ಒಂದು ಅಡಿ ಕೆಳ ಮಟ್ಟದಲ್ಲಿದೆ ಶಾಲಾ ಕೊಠಡಿ. ಶಾಲಾಯ ಮೇಲ್ಛಾವಣಿಯ ಸಿಮೆಂಟ್ ಶೀಟ್‌ಗಳು ಹೊಡೆದು ಹೋಗಿದ್ದು, ಮಳೆ ಬಂದರೆ ಕೊಠಡಿಯಲ್ಲಿ ನೀರು ತುಂಬಿಕೊಂಡು ಕೆರೆಯಂತಾಗುತ್ತದೆ. ಹಾಗಾಗಿ ಮಳೆ ಬಂದರೆ ಶಾಲೆಗೆ ರಜೆ ನೀಡುವಂತಾಗುತ್ತದೆ.

ಖಾಸಗಿ ಶಾಲೆಗಳ ವ್ಯಾಮೋಹ ಸೇರಿದಂತೆ ಇತರೆ ಕಾರಣಗಳಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ತಾಲ್ಲೂಕಿನ ಕೊಂಡರಹಳ್ಳಿ ಹಾಗೂ ನಕ್ಕೇನಹಳ್ಳಿ ಸರ್ಕಾರಿ ಶಾಲೆಗೆ ಮಕ್ಕಳ ಕೊರತೆಯಿಂದ ಶಾಲೆಗೆ ಬೀಗ ಜಡಿಯಲಾಗಿದೆ. ಬಡ ಮಕ್ಕಳ ಶಿಕ್ಷಣಕ್ಕೆ ಆಶಾಕಿರಣವಾಗಿದ್ದ ಸರ್ಕಾರಿ ಶಾಲೆಗಳು ಈ ರೀತಿ ಮೂಲ ಸೌಕರ್ಯಗಳಿಲ್ಲದೆ ಸೊರಗುತ್ತಿರುವುದು ಬೇಸರದ ಸಂಗತಿಯಾಗಿದೆ. ಧರ್ಮರಾಯಸ್ವಾಮಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬಹುತೇಕ ಕೂಲಿ ಕಾರ್ಮಿಕರ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಸರ್ಕಾರ ಮತ್ತು ಸಾರ್ವಜನಿಕರು ಈ ಶಾಲೆಗೆ ನಿವೇಶನ ಕಲ್ಪಿಸಿ ಉತ್ತಮ ಕಟ್ಟಡ ನಿರ್ಮಿಸಿಕೊಡಬೇಕೆಂಬುದು ಈ ಭಾಗದ ನಾಗರಿಕರ ಒತ್ತಾಯವಾಗಿದೆ.


ಉದಯವಾಹಿನಿ ಚಿತ್ರ

### ನಿವೇಶನಕ್ಕಾಗಿ ಪುರಸಭೆಗೆ ಮನವಿ

**ಸುಮಾರು ವರ್ಷಗಳಿಂದ ಶಾಲೆ ಇದೇ ಜಾಗದಲ್ಲಿ ನಡೆಯುತ್ತಿದೆ. ಮಕ್ಕಳ ಅನುಕೂಲಕ್ಕಾಗಿ ನಿವೇಶನ ಬಿಟ್ಟುಕೊಡಿ ಎಂದು ನಿವೇಶನ ಮಾಲೀಕರ ಬಳಿ ಮನವಿ ಮಾಡಲಾಯಿತು. ಆದರೆ ಅವರು ಒಪ್ಪಲಿಲ್ಲ. ಪಕ್ಕದಲ್ಲಿರುವ ಬಡಾವಣೆಯ ಸಿಎ ಸೈಟ್ ನೀಡುವಂತೆ ಪುರಸಭೆಗೆ ಮನವಿ ಮಾಡಲಾಗಿದೆ. ಸ್ಥಳೀಯ ಶಾಸಕರ ಸಹಕಾರದಿಂದ ನಿವೇಶನ ಪಡೆಯಲು ಪ್ರಯತ್ನಿಸಲಾಗುತ್ತಿದೆ. ನಿವೇಶನ ನೀಡಿದರೆ ಸರ್ಕಾರ ಮತ್ತು ದಾನಿಗಳ ನೆರವಿನಿಂದ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಾಗುವುದು.**

-ಕೆಂಪಯ್ಯ, ಬಿಇಒ

### ಶಾಲಾ ಕಟ್ಟಡ ದುರಸ್ತಿಗೆ ತೊಂದರೆ: ತನಿಖೆಗೆ ಒತ್ತಾಯ

**ಧರ್ಮರಾಯಸ್ವಾಮಿ ದೇವಾಲಯದ ಕಟ್ಟಡದಲ್ಲಿ ಉಚಿತವಾಗಿ ಶಾಲೆ ನಡೆಸಲು ಅವಕಾಶ ಕಲ್ಪಿಸಲಾಗಿತ್ತು. 20 ವರ್ಷಗಳ ಹಿಂದೆ ದೇವಾಲಯ ಅಭಿವೃದ್ಧಿಪಡಿಸುವ ಸಲುವಾಗಿ ದೇವಾಲಯ ಸಮಿತಿ ಪಕ್ಕದ ಸರ್ಕಾರಿ ಜಾಗದಲ್ಲಿ ಶಾಲೆ ನಿರ್ಮಾಣ ಮಾಡಿ ವರ್ಗಾಯಿಸಲಾಯಿತು. ಕೆಲವು ಅಕ್ರಮ ದಾಖಲೆ ಸೃಷ್ಟಿಸಿ ಸ್ಥಳವನ್ನು ಮಾಯ ಮಾಡಿ, ಶಾಲಾ ಕಟ್ಟಡ ದುರಸ್ತಿಗೆ ಅವಕಾಶ ಕಲ್ಪಿಸದೆ ತೊಂದರೆ ಮಾಡಿದ್ದಾರೆ. ಹಾಗಾಗಿ ಸರ್ಕಾರ ಸಂಪೂರ್ಣ ತನಿಖೆ ಮಾಡಬೇಕೆಂದು ಒತ್ತಾಯಿಸಿದರು.**

# ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ಪ್ರತಿಭಟನೆ


ಉದಯವಾಹಿನಿ ಚಿತ್ರ


• ಉದಯವಾಹಿನಿ, ನಂಜನಗೂಡು

ಗ್ರಾಮದ ಮುಖ್ಯ ರಸ್ತೆ ಸಂಪೂರ್ಣ ಹಾಳಾಗಿದ್ದು, ರಸ್ತೆ ಅಭಿವೃದ್ಧಿ ಪಡಿಸುವಂತೆ ಆಗ್ರಹಿಸಿ ತಾಲ್ಲೂಕಿನ ಮುಳ್ಳೂರು ಗ್ರಾಮಸ್ಥರು ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.ಮುಳ್ಳುರು ಗ್ರಾಮದಿಂದ ನಗರಕ್ಕೆ ಪಾದಯಾತ್ರೆ ಮಾಡಿದ ನೂರಾರು ಮಂದಿ ಅಂಬೇಡ್ಕರ್ ವೃತ್ತದಲ್ಲಿ ಸಂಘಟಿತರಾಗಿ ಚುನಾಯಿತ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಸಂದೇಶ್ ಮಾತನಾಡಿ, ಮುಳ್ಳೂರು ಗ್ರಾಮದ ಬೋಧಿವೃಕ್ಷ ವೃತ್ತದಿಂದ ತಿ.ನರಸೀಪುರ ಮುಖ್ಯ ರಸ್ತೆವರೆಗಿನ ಮಾರ್ಗ ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ಹೊರಳವಾಡಿ, ಕುಳ್ಳಂಕನಹುಂಡಿ ಹಾಗೂ ಮುಳ್ಳೂರು ಗ್ರಾಮಸ್ಥರು ನಿತ್ಯ ಸಂಚರಿಸುತ್ತಾರೆ. ವಾಹನ ಸವಾರರು ಅಪಘಾತಕ್ಕೀಡಾಗಿ ಗಾಯಗೊಂಡಿದ್ದಾರೆ. ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳೆದ ಎರಡೂವರೆ ವರ್ಷಗಳಿಂದಲೂ ಶಾಸಕರ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ, ಚುನಾವಣೆಗೂ ಮುನ್ನ ಗ್ರಾಮದ ಅಭಿವೃದ್ಧಿ ಭರವಸೆ ನೀಡಿದ್ದ ಶಾಸಕರು ನಮ್ಮ ಗ್ರಾಮದ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ರಸ್ತೆ ಅಭಿವೃದ್ಧಿಗೆ ಮುಂದಾಗಬೇಕು, ಇಲ್ಲವಾದಲ್ಲಿ ಚುನಾಯಿತ ಜನಪ್ರತಿನಿಧಿಗಳ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

## ಮಿನಿ ನ್ಯೂಸ್

### ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧ: ಶಾಸಕ ಎಚ್.ಎಂ.ಗಣೇಶ್ ಪ್ರಸಾದ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಗ್ರಾಮಾಂತರ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಶಂಕುಸ್ಥಾಪನೆ ನೆರವೇರಿಸಿದರು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧನಾಗಿದ್ದು ಪ್ರಾಮಾಣಿಕವಾಗಿ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು. ತಾಲ್ಲೂಕಿನ ದೇಶಿಪುರ ಗ್ರಾಮ, ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕಾಗಿ 90 ಲಕ್ಷ, ಹೊಂಗಹಳ್ಳಿ ಗ್ರಾಮದಲ್ಲಿ 30 ಲಕ್ಷ ಹಾಗು ಎಂಎಡಿಪಿ ಯೋಜನೆಯಡಿ 10 ಲಕ್ಷ ವೆಚ್ಚದ ಆಲತ್ತೂರು ಗ್ರಾಮದ ಕೊಟ್ಟಿಗೆರೆ ಓಣಿ ರಸ್ತೆಯ ಚರಂಡಿ ರಸ್ತೆಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿಗಳ ವಿಶೇಷ ಅನುದಾನದೊಂದಿಗೆ ಹೆಚ್ಚುವರಿಯಾಗಿ 1 ಕೋಟಿ 70 ಲಕ್ಷ ಹಣ ಮಂಜೂರಾದ ಹಿನ್ನೆಲೆ ಚರಂಡಿ ಮತ್ತು ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 50 ಕೋಟಿ ಹಣ ಮಂಜೂರಾಗಿದೆ, ಒಟ್ಟಾರೆಯಾಗಿ ಸಮುದಾಯ ಭವನಗಳು ಹಾಗೂ ದೇವಸ್ಥಾನದ ಕಾಮಗಾರಿಗಳನ್ನ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಮುಖಂಡರಾದ ಸೋಮಶೇಖರ್, ಜವರಾಮು, ಲೋಕೇಶ್ ಮಂಚಹಳ್ಳಿ, ಮಹದೇವಪ್ಪ ಸೇರಿದಂತೆ ಹಲವರು ಹಾಜರಿದ್ದರು.

### ನಿತ್ಯ ದೂಳಿನ ಸ್ನಾನ; ತಪ್ಪದ ಗೋಳಾಟ

• ಉದಯವಾಹಿನಿ, ಕನಕಪುರ

ಒಂದು ಕಡೆ ಕಾಂಕ್ರೀಟ್ ರಸ್ತೆ ಕಾಮಗಾರಿ, ಮತ್ತೊಂದೆಡೆ ನೀರಿನ ಪೈಪ್ ಅಳವಡಿಕೆ ಕಾಮಗಾರಿ. ಸುತ್ತಲೂ ಹರಡಿದ ಧೂಳು ಅಕ್ಷರಶಃ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಸಾರ್ವಜನಿಕರು ಹಲವು ದಿನಗಳಿಂದ ನಿತ್ಯ ಧೂಳಿನ ಸ್ನಾನ ಮಾಡುತ್ತಿದ್ದಾರೆ. ನಗರದ ಹೌಸಿಂಗ್ ಬೋರ್ಡ್ ಶಿವನಹಳ್ಳಿ ಬೈಪಾಸ್‌ನಿಂದ ಬೆಂಗಳೂರು ರಸ್ತೆಯ ತುಂಗಣಿವರೆಗೂ ಸಿಮೆಂಟ್ ಕಾಂಕ್ರೀಟ್ ರಸ್ತೆ ಕಾಮಗಾರಿ ನಡೆಯುತ್ತಿದೆ. ಜೊತೆಗೆ ಕರ್ನಾಟಕ ನಗರ ನೀರು ಸರಬರಾಜು ಹಾಗೂ ನೈರ್ಮಲೀಕರಣ ಮಂಡಳಿ ಕೆಯುಡಬ್ಲ್ಯುಎಸ್‌ಎಸ್‌ಬಿ ನಗರದಲ್ಲಿ ನೀರಿನ ಪೈಪ್ ಅಳವಡಿಸುವ ಕಾಮಗಾರಿ ಕೈಗೆತ್ತಿಕೊಂಡಿದೆ. ಈ ಎರಡೂ ಕಾಮಗಾರಿ ಏಕಕಾಲಕ್ಕೆ ನಡೆಯುತ್ತಿರುವುದರಿಂದ ಜನರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ರಸ್ತೆಯಲ್ಲಿ ತಿರಗಲು ಜನರು ಪರದಾಡುತ್ತಿದ್ದಾರೆ. ಮತ್ತೊಂದೆಡೆ ಪೈಪ್‌ಲೈನ್ ಅಳವಡಿಸಲು ನೆಲ ಅಗೆಯುತ್ತಿರುವುದರಿಂದ ಇಡೀ ವಾತಾವರಣ ಧೂಳಿನಿಂದ ತುಂಬಿದೆ. ಜನರು ಉಸಿರಾಟಕ್ಕೆ ತೊಂದರೆ ಪಡುತ್ತಿದ್ದಾರೆ.

### ಹೂಡಿಕೆ ಆಮಿಷ: ಹೋಟೆಲ್ ಸಿಬ್ಬಂದಿಗೆ ರೂ.14 ಲಕ್ಷ ವಂಚನೆ

• ಉದಯವಾಹಿನಿ, ತುಮಕೂರು

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ, ದುಪ್ಪಟ್ಟು ಲಾಭ ಗಳಿಸಬಹುದು ಎಂಬ ಆಮಿಷಕ್ಕೆ ಒಳಗಾಗಿ ತಿಪಟೂರು ತಾಲ್ಲೂಕಿನ ಕೋಡಿಹಳ್ಳಿಯ ಹೋಟೆಲ್ ಸಿಬ್ಬಂದಿ ಎಚ್.ಎಸ್.ಶಿವಕುಮಾರ್ 14 ಲಕ್ಷ ಕಳೆದುಕೊಂಡಿದ್ದಾರೆ. ಆನ್‌ಲೈನ್‌ನಲ್ಲಿ ಕೆಲಸ ಮಾಡುತ್ತಾ ಹಣ ಗಳಿಸಬಹುದು ಎಂಬ ಜಾಹೀರಾತು ವೀಕ್ಷಿಸಿದ್ದಾರೆ. ನಂತರ ಯಾವ ಕೆಲಸ ಎಂದು ಮಸೇಜ್ ಮಾಡಿದ್ದಾರೆ. ಬಳಿಕ ಅವರ ನಂಬರ್ ಅನ್ನು Wealth Group 605' ಎಂಬ ವಾಟ್ಸ್ಆ್ಯಪ್ ಗ್ರೂಪ್‌ಗೆ ಸೇರಿಸಲಾಗಿದೆ. 'ನಾವು ಹೇಳಿದಂತೆ ಹಣ ವರ್ಗಾಯಿಸಿದರೆ, ಅದನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನಿಮಗೆ ಲಾಭ ನೀಡುತ್ತೇವೆ' ಎಂದು ಆರೋಪಿಗಳು ತಿಳಿಸಿದ್ದಾರೆ.

ವಂಚಕರ ಮಾತು ನಂಬಿದ ಶಿವಕುಮಾರ್ ಹಂತ ಹಂತವಾಗಿ ಒಟ್ಟು ರೂ.14.08 ಲಕ್ಷ ವರ್ಗಾವಣೆ ಮಾಡಿದ್ದಾರೆ. ಹಣ ವಾಪಸ್ ಕೇಳಿದಾಗ 'ಇನ್ನೂ ರೂ.14 ಲಕ್ಷ ವರ್ಗಾಯಿಸಿದರೆ ಮಾತ್ರ ಪೂರ್ತಿ ಹಣ ನೀಡಲಾಗುವುದು' ಎಂದಿದ್ದಾರೆ. ಅನುಮಾನ ಬಂದು ಸ್ನೇಹಿತರ ಬಳಿ ವಿಚಾರಿಸಿದಾಗ ಮೋಸ ಆಗಿರುವುದು ಗೊತ್ತಾಗಿದೆ.

ಆಮಿಷ ನೀಡಿ, ವಿವಿಧ ಖಾತೆಗಳಿಗೆ ಹಣ ಹಾಕಿಸಿಕೊಂಡು ಮೋಸ ಮಾಡಿದವರ ವಿರುದ್ಧ ಕ್ರಮಕೈಗೊಳ್ಳುವಂತೆ ಸೈಬರ್ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಿಸಲಾಗಿದೆ.

### ನಗರದ ಪುರಸಭೆ ವಸತಿಗೃಹಗಳ ಸ್ಥಿತಿ

• ಉದಯವಾಹಿನಿ, ಬಂಗಾರಪೇಟೆ


ಸೂಕ್ತ ನಿರ್ವಹಣೆ ಇಲ್ಲದೆ ಪುರಸಭೆ ವಸತಿ ಗೃಹಗಳು ಪಾಳುಬಿದ್ದಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿವೆ. ನಗರದ ಹೃದಯ ಭಾಗದಲ್ಲಿ ಪುರಸಭೆ ಅಧಿಕಾರಿ ಮತ್ತು ಸಿಬ್ಬಂದಿ ವಾಸಿಸಲು ಹನ್ನೆರಡು ವಸತಿ ಗೃಹಗಳು ನಿರ್ಮಾಣವಾಗಿದ್ದವು. ಅದರಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿವಾಸಿಸದ ಕಾರಣ ಹಲವು ವರ್ಷಗಳಿಂದ ಪಾಳುಬಿದ್ದಿವೆ. ಹಾಗಾಗಿ ಸಂಜೆಯಾಗುತ್ತಿದ್ದಂತೆ ಜನಸಂದಣಿ ಇಲ್ಲದ, ಪಾಳು ಬಿದ್ದ ಕಟ್ಟಡಗಳಲ್ಲಿ ಮದ್ಯಪಾನ, ಜೂಜು, ಸೇವನೆ ಅಕ್ರಮ ಚಟುವಟಿಕೆ ನಡೆಸುವವರಿಗೆ ಸುರಕ್ಷಿತ ತಾಣವಾಗಿ ಬದಲಾಗಿದೆ. ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಿರುವ ವಸತಿ ಗೃಹಗಳು, ನೌಕರರು ವಾಸವಿಲ್ಲದ ಕಾರಣ ಶಿಥಿಲಾವಸ್ಥೆ ತಲುಪಿವೆ. ಗೋಡೆಗಳ ಮೇಲೆ ಬೆಳೆದಿರುವ ಗಿಡ, ಪೊದೆಗಳು ಗೃಹಗಳನ್ನು ಆವರಿಸಿದೆ. ಕಿಟಕಿ, ಬಾಗಿಲು ಮುರಿದು ಬಿದ್ದಿವೆ. ಎಲ್ಲೆಂದರಲ್ಲಿ ಗಿಡಗಂಟೆ ಬೆಳೆದು ವಿಷ ಜಂತುಗಳ ಅವಾಸ ತಾಣವಾಗಿ ಬದಲಾಗಿದೆ. ವಸತಿ ಗೃಹಗಳು ಭೂತ ಬಂಗಲೆಗಳಂತಾಗಿ ಸಾರ್ವಜನಿಕರು ಶೌಚಾಲಯ ಕಸ ಎಸೆಯಲು ಬಳಸುತ್ತಿದ್ದಾರೆ. ಹಾಗಾಗಿ ಪಾಳುಬಿದ್ದ ಸರ್ಕಾರಿ ಆಸ್ತಿಯನ್ನು ಸಾರ್ವಜನಿಕರ ಉಪಯೋಗಕ್ಕೆ ಬರುವಂತೆ ಕಟ್ಟಡ ನೆಲಸಮಗೊಳಿಸಿ ಮತ್ತೆ ಅಭಿವೃದ್ಧಿಗೊಳಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.


ಉದಯವಾಹಿನಿ ಚಿತ್ರ

ಅಂತರಾಳದಿಂದ...
EDITORIAL

# ಶಾಸನಸಭೆ: ಮಹಿಳಾ ಪ್ರಾತಿನಿಧ್ಯ ರಾಜಕೀಯ ಇಚ್ಛಾಶಕ್ತಿಯ ಕೊರತೆ

ಮಹಿಳೆಯರನ್ನು ವೋಟ್ ಬ್ಯಾಂಕ್‌ಗಳಾಗಿ ರೂಪಿಸಿಕೊಳ್ಳಲು ಸ್ಪರ್ಧೆ ನಡೆಸುತ್ತಿರುವ ರಾಜಕೀಯ ಪಕ್ಷಗಳು, ಶಾಸನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸುವ ವಿಷಯದಲ್ಲಿ ಎಡಬಿಡಂಗಿ ಧೋರಣೆ ಅನುಸರಿಸುತ್ತಿವೆ. ಮಹಿಳಾ ಮೀಸಲಾತಿ ಕಾಯ್ದೆ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಕಳವಳ ವ್ಯಕ್ತಪಡಿಸಿದೆ. ಆ ಕಳವಳವನ್ನು ಕೇಂದ್ರ ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಪ್ರಾತಿನಿಧ್ಯ ಕಡ್ಡಾಯಗೊಳಿಸುವ ಕಾಯ್ದೆ ಜಾರಿಗೆ ಬಂದು 2 ವರ್ಷವಾಗಿದ್ದರೂ, ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಜನಗಣತಿಯ ನಂತರ ನಡೆಯುವ ಕ್ಷೇತ್ರಗಳ ಪುನರ್ ವಿಂಗಡಣೆಯ ನಂತರ ಅನುಷ್ಠಾನಗೊಳ್ಳಬೇಕು ಎನ್ನುವ ನಿಬಂಧನೆಯ ಕಾರಣದಿಂದಾಗಿ, ಮುಂದಿನ ಕೆಲವು ವರ್ಷಗಳವರೆಗೆ ಮಹಿಳಾ ಮೀಸಲಾತಿ ಕಾಯ್ದೆ ಕಾಗದದ ಮೇಲಷ್ಟೇ ಉಳಿಯುವ ಸಾಧ್ಯತೆ ಹೆಚ್ಚಾಗಿದೆ. 2027ರಲ್ಲಿ ಜನಗಣತಿ ಪೂರ್ಣಗೊಳ್ಳಲಿದೆ. ಆದರೆ ಮತ್ತು ಜನಗಣತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಗೆ ಸಂಬಂಧಿಸಿದ ಸಿದ್ಧತೆಗಳು ಇನ್ನಷ್ಟೇ ಆರಂಭಗೊಳ್ಳಬೇಕಾದ ಕಾರಣದಿಂದಾಗಿ, 2029ರ ಲೋಕಸಭಾ ಚುನಾವಣೆಯ ವೇಳೆಗಾದರೂ ಕಾಯ್ದೆ ಅನುಷ್ಠಾನಗೊಳ್ಳಬಹುದೇ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ.



**ಮಹಿಳಾ ಮೀಸಲಾತಿ ಕಾಯ್ದೆಯನ್ನು ತಕ್ಷಣವೇ ಅನುಷ್ಠಾನಗೊಳಿಸಬೇಕೆಂಬ ಅರ್ಜಿಯ ಬಗ್ಗೆ ನ್ಯಾಯಮೂರ್ತಿ ಮಾಧವನ್ ಅವರೊಂದಿಗೆ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ಕಾಯ್ದೆ ವಿಳಂಬವಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವುದು ಸೂಕ್ತವಾಗಿದೆ. ದೇಶದ ಜನಸಂಖ್ಯೆಯಲ್ಲಿ ಶೇ 48ರಷ್ಟು ಮಹಿಳೆಯರಿದ್ದು, ಅವರು ದೇಶದ ಅತಿದೊಡ್ಡ ಅಲ್ಪಸಂಖ್ಯಾತರಾಗಿದ್ದಾರೆ ಎಂದು ನ್ಯಾಯಮೂರ್ತಿ ನಾಗರತ್ನ ಅವರು ಅಭಿಪ್ರಾಯಪಟ್ಟಿದ್ದಾರೆ.**

ಚುನಾವಣೆಗಳಲ್ಲಿ 3ನೇ ಒಂದು ಭಾಗದಷ್ಟು ಉಮೇದುವಾರಿಕೆಯನ್ನು ಮಹಿಳೆಯರಿಗೆ ನೀಡುತ್ತಿಲ್ಲವೇಕೆ ಎನ್ನುವ ಅವರ ಪ್ರಶ್ನೆ ರಾಜಕೀಯ ಪಕ್ಷಗಳ ಆತ್ಮಾವಲೋಕನಕ್ಕೆ ಒತ್ತಾಯಿಸುವಂತಿದೆ. ಮಹಿಳಾ ಪ್ರಾತಿನಿಧ್ಯದ ಬಗ್ಗೆ ರಾಜಕೀಯ ಪಕ್ಷಗಳ ಕಾಳಜಿ ಪ್ರಾಮಾಣಿಕವಾಗಿದ್ದಲ್ಲಿ,

ಅವು ಕಾನೂನಿನ ಅನುಷ್ಠಾನಕ್ಕೆ ಕಾಯುವ ಅಗತ್ಯವಿಲ್ಲ; ಕಾನೂನು ಕಟ್ಟುಪಾಡುಗಳ ಹಂಗಿಲ್ಲದೆಯೇ ತಮ್ಮ ಬದ್ಧತೆಯನ್ನು ಕಾರ್ಯರೂಪದಲ್ಲಿ ಪ್ರದರ್ಶಿಸುವ ಅವಕಾಶ ಪಕ್ಷಗಳಿಗಿದ್ದೇ ಇದೆ. ಆದರೆ, ರಾಜಕೀಯ ಪಕ್ಷಗಳಲ್ಲಿನ ಇಚ್ಛಾಶಕ್ತಿಯ ಕೊರತೆಯೇ ಮಹಿಳಾ ಪ್ರಾತಿನಿಧ್ಯಕ್ಕೆ ತೊಡಕಾಗಿ ಪರಿಣಮಿಸಿದೆ. ಶಾಸನಸಭೆಗಳು ಮಾತ್ರವಲ್ಲದೆ, ಬೇರೆ ಕ್ಷೇತ್ರಗಳಲ್ಲೂ ಮಹಿಳೆಯರ ಪ್ರಾತಿನಿಧ್ಯ ಸಮರ್ಪಕವಾಗಿಲ್ಲ. ಸುಪ್ರೀಂ ಕೋರ್ಟ್ ಈವರೆಗಿನ ನ್ಯಾಯಮೂರ್ತಿಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಬರೀ 11 (ಶೇ 4ರಷ್ಟು) ಹಾಗೂ ಪ್ರಸ್ತುತ ಇರುವ 34 ನ್ಯಾಯಮೂರ್ತಿಗಳಲ್ಲಿ ಓರ್ವ ಮಹಿಳೆಯಷ್ಟೇ ಇದ್ದಾರೆ. ಲೋಕಸಭೆ- ರಾಜ್ಯಸಭೆಯಲ್ಲಿ ಕ್ರಮವಾಗಿ ಶೇ 14 ಮತ್ತು ಶೇ 17ರಷ್ಟು ಮಹಿಳಾ ಸದಸ್ಯರಿದ್ದಾರೆ.

ಈ ಸರಾಸರಿ ವಿಶ್ವಮಟ್ಟದಲ್ಲಿ ಶೇ 27ರಷ್ಟಿದೆ. ಸಂಸತ್‌ನಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ, ತೃಣಮೂಲ ಕಾಂಗ್ರೆಸ್ ಮತ್ತು ಬಿಜು ಜನತಾದಳದಂತಹ ಕೆಲವು ಪಕ್ಷಗಳು ಉಳಿದ ಪಕ್ಷಗಳಿಗಿಂತಲೂ ಹೋಲಿಕೆಯಲ್ಲಿ ಉತ್ತಮವಾಗಿದ್ದರೂ, ವಿಧಾನಸಭೆಗಳಲ್ಲಿನ ಪ್ರಾತಿನಿಧ್ಯ ಕಳಪೆಯಾಗಿದೆ.

ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಪ್ರಾತಿನಿಧ್ಯ ಕಲ್ಪಿಸಿವೆ. 77ನೇ ತಿದ್ದುಪಡಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಉದ್ಯೋಗದಲ್ಲಿನ ಬಡ್ತಿಗೂ ಮೀಸಲಾತಿಯನ್ನು ವಿಸ್ತರಿಸಿದೆ. 103ನೇ ತಿದ್ದುಪಡಿ, ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ಒದಗಿಸಿದೆ. ಈ ಸವಲತ್ತುಗಳನ್ನು ಜನಗಣತಿಯ ದತ್ತಾಂಶಗಳಿಗೆ ಕಾಯದೆಯೇ ಜಾರಿಗೊಳಿಸಿರುವುದನ್ನು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ.

ಸಾಂವಿಧಾನಿಕ ತಿದ್ದುಪಡಿಯನ್ನು ಅನಿರ್ದಿಷ್ಟ ಅವಧಿಯವರೆಗೆ ಜಾರಿಗೊಳಿಸದೆ ಉಳಿಸುವುದು ಸರಿಯಲ್ಲ ಹಾಗೂ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಅಂಗೀಕಾರ ಪಡೆದಿರುವುದು ಕಾಯ್ದೆ ಜಾರಿಗೊಳ್ಳಬೇಕಾದ ತುರ್ತನ್ನು ಸೂಚಿಸುತ್ತದೆ ಎನ್ನುವುದನ್ನೂ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಸುಪ್ರೀಂ ಕೋರ್ಟ್‌ನ ಅಭಿಪ್ರಾಯಗಳು ಕೂಡ, ಮಹಿಳಾ ಪ್ರಾತಿನಿಧ್ಯ ಕಾಯ್ದೆ ವಿಳಂಬವಿಲ್ಲದೆ ಜಾರಿಯಾಗಬೇಕಾದ ಅಗತ್ಯವನ್ನು ಸೂಚಿಸುವಂತಿವೆ. ಮಹಿಳಾ ಮೀಸಲಾತಿ ವಿಳಂಬವನ್ನು ಪ್ರಶ್ನಿಸಿರುವ ಅರ್ಜಿಯು, ಪ್ರಗತಿಪರ ಕಾಯ್ದೆಯೊಂದನ್ನು ಜಾರಿಗೊಳಿಸುವ ಇಚ್ಛಾಶಕ್ತಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಸೋಗಲಾಡಿತನ ಹಾಗೂ ದ್ವಂದ್ವವನ್ನು ಬಯಲುಮಾಡುವಂತಿದೆ.

# ರಾಮಾಯಣ



## ರಾವಣನು ಸೀತಾದೇವಿಯನ್ನು ಅಶೋಕವನದಲ್ಲಿಟ್ಟಿದ್ದು

• ಹಿಂದಿನ ಸಂಚಿಕೆಯಿಂದ  120 ನೆಯ ಅಧ್ಯಾಯ

ನೀನು ಸ್ನಾನವನ್ನು ಮಾಡಿ ಸರ್ವಾಭರಣ ಭೂಷಿತೆಯಾಗಿ ದಿವ್ಯ ಗಂಧಾನುಲೇಪನಮಾಡಿಕೊಂಡು ಮನೋಹರವಾದ ವಸ್ತ್ರಗಳನ್ನುಟ್ಟು ದೇವತಾ ಯೋಗ್ಯವಾದ ಸುಗಂಧ ಪುಷ್ಪಗಳನ್ನು ಮುಡಿದು ನನ್ನ ಮನಸ್ಸಿಗೆ ಸಂತೋಷವನ್ನು ಮಾಡು. ನಿನಗೆ ಜನ್ಮಾಂತರದಲ್ಲಿ ಮಾಡಿದ ಪುಣ್ಯವು ಫಲವನ್ನು ಕೊಡುವ ಕಾಲವು ಸಮೀಪವಾಯಿತು. ನಾನು ನನ್ನ ಅಣ್ಣನಾದ ಕುಬೇರನನ್ನು ಜಯಿಸಿ ಸೂರ್ಯಪ್ರಭೆಯಂತೆ ದೇದೀಪ್ಯಮಾನವಾಗಿ ಬೆಳಗುತ್ತಿರುವ ಪುಷ್ಪಕವೆಂಬ ವಿಮಾನವನ್ನು ತೆಗೆದುಕೊಂಡು ಬಂದಿರುವೆನು. ವಾಯುವೇಗ ಮನೋವೇಗವುಳ್ಳದ್ದಾಗಿ ಅತಿವಿಶಾಲವಾಗಿ ರಮಣೀಯವಾದ ಆ ವಿಮಾನದಲ್ಲಿ ನೀನು ಮನಸ್ಸು ಬಂದಂತೆ ವಿಕಸಿತವಾದ ತಾವರೆಯಂತೆ ಮನೋಹರವಾಗಿ ಕಣ್ಗೋಳಿ ನಿನ್ನ ಮುಖವು ಕಣ್ಣೀರು ಸುರಿಸುತ್ತಿದ್ದರೆ ರಮಣೀಯವಾಗಿ ಕಾಣಿಸದು ಎಂದು ನುಡಿದನು. ಆ ಮಾತನ್ನು ಕೇಳಿ ಸೀತಾದೇವಿಯು ದುಃಖಾತಿಶಯದಿಂದ ಲಜ್ಜಿತಳಾಗಿ ಮುಖವನ್ನು ಮುಚ್ಚಿಕೊಂಡು ಕಣ್ಣೀರುಬಿಡುತ್ತ ತನ್ನ ಪ್ರಾಣಕಾಂತನಾದ ಶ್ರೀರಾಮನನ್ನು ಧ್ಯಾನಮಾಡುತ್ತ ಚಿಂತಾಕ್ರಾಂತಳಾಗಿ ಮುಖಕಾಂತಿಗುಂದಿ ಸುಮ್ಮನಿದ್ದಳು. ರಾವಣನು ಪುನಃ ಆಕೆಯನ್ನು ಕುರಿತು ಸೀತಾದೇವಿ, ಪಾತಿವ್ರತ್ಯವು ಭಂಗವಾಗುವುದೆಂಬ ಭಯವನ್ನು ಬಿಡು, ಪರಪುರುಷನ ಮುಖವನ್ನು ಹೇಗೆ ನೋಡಲಿ ಎಂಬ ಲಜ್ಜೆಯನ್ನು ಬಿಡು.

ನಿನ್ನ ಮನಸ್ಸಿಗೆ ಹರ್ಷವುಂಟಾಗುವಂತೆ ನಿನ್ನ ಮನೋಹರವಾದ ಪಾದಗಳಿಗೆ ನನ್ನ ಹತ್ತು ಶಿರಸ್ಸುಗಳಿಂದಲೂ ಸಾಷ್ಟಾಂಗವೆರಗಿ ವಂದನೆ ಮಾಡುತ್ತೇನೆ. ಶೀಘ್ರವಾಗಿ ನನ್ನಲ್ಲಿ ಕೃಪೆಮಾಡು, ನಾನು ಇನ್ನು ನೀನು ಹೇಳಿದಂತೆ ಕೇಳಿಕೊಂಡಿರುವ ಭೃತ್ಯನಾಗುತ್ತೇನೆ. ಮಹಾಪರಾಕ್ರಮಿಯಾದ ದಶಕಂಠನು ಯಾರಿಗೂ ದೈನ್ಯದಿಂದ ಶರಣು ಹೊಡೆಯುವವನಲ್ಲ ಎಂಬ ಮಾತು ಇಂದಿಗೆ ಮುಗಿಯಲಿ ಎಂದು ನುಡಿದು ಸೀತಾದೇವಿಯು ತನ್ನ ವಶವರ್ತಿಯಾದಳೆಂದೆಣಿಸಿದನು.

ಈ ಪ್ರಕಾರದಲ್ಲಿ ನುಡಿದ ರಾವಣನ ಮಾತನ್ನು ಕೇಳಿ ಸೀತಾದೇವಿಯು ಒಂದು ತೃಣವನ್ನು ಮಧ್ಯದಲ್ಲಿಟ್ಟು ಅದನ್ನು ನೋಡುತ್ತ **ಆತನನ್ನು ಕುರಿತು ಹೀಗೆ ಉತ್ತರಕೊಟ್ಟಳು:** ಎಲೈ ರಾವಣ, ಧರ್ಮಮಾರ್ಗಪ್ರವರ್ತಕನೂ ಸತ್ಯಸಂಧನೂ ಆದ ಶ್ರೀರಾಮನು ಲೋಕದಲ್ಲಿ ಕೀರ್ತಿವಂತನು. ಅವನು ಮಹಾಧರ್ಮಿಷ್ಟ; ಆಜಾನುಬಾಹು: ಇಕ್ಷ್ವಾಕುವಂಶೋದ್ಧಾರಕ : ಅತ್ಯಂತ ತೇಜಸ್ವಿಯಾದವನು: ಅವನೇ ನನಗೆ ಪತಿ ಅವನೇ ನನ್ನ ಇಷ್ಟದೇವತೆ, ಆತನು ತನ್ನ ತಮ್ಮನಾದ ಲಕ್ಷ್ಮಣನನ್ನು ಕೂಡಿಕೊಂಡು ಬಂದು ನಿನ್ನ ಪ್ರಾಣಗಳನ್ನು ಅಪಹರಿಸದೆ ಬಿಡನು. ನೀನು ಆತನ ಕಣ್ಣು ಮುಂದೆ ಬಲಾತ್ಕಾರದಿಂದ ನನ್ನನ್ನು ತರಲು ಉದ್ದೇಶಿಸಿದ್ದರೆ, ಆತನು ಜನಸ್ಥಾನದಲ್ಲಿದ್ದ ಖರನನ್ನು ಯಮಲೋಕಕ್ಕೆ ಕಳುಹಿಸಿದಂತೆ ನಿನ್ನನ್ನೂ ಯಮಲೋಕಕ್ಕೆ ಕಳುಹಿಸುತ್ತಿದ್ದನು.

**ಮುಂದುವರಿಯುವುದು...**

# ನೋಡಬನ್ನಿ ಬಸವನಗುಡಿಯ ಐತಿಹಾಸಿಕ ಕಡಲೆಕಾಯಿ ಪರಿಷೆ...

ಸುಂಕೇನಹಳ್ಳಿ ಎಂಬ ಪುಟ್ಟ ಹಳ್ಳಿ, ರೈತಾಪಿ ಜನರು ವಾಸಿಸುತ್ತಿದ್ದ ಜಾಗ. ಕಡಲೆಕಾಯಿ ಈ ಹಳ್ಳಿಗರ ಮೂಲ ಬೆಳೆಯಾಗಿತ್ತು. ಬೆಳೆ ಏನೋ ಚೆನ್ನಾಗೇ ಬೆಳೆಯುತ್ತಿದ್ದರು.


ಆದರೆ ಬೆಳೆದ ಬೆಳೆಯನ್ನು ಕಾಪಾಡಿಕೊಳ್ಳುವುದು ಕಷ್ಟದ ಕೆಲಸವಾಗಿತ್ತು. ಏಕೆಂದರೆ ದಿನ ರಾತ್ರಿ ನಂದಿಯೊಂದು ಬಂದು ಈ ಬೆಳೆಗಳನ್ನೆಲ್ಲ ತಿಂದು ಹೋಗುತ್ತಿತ್ತು. ಇದರಿಂದಾಗಿ ರೈತರಿಗೆ ಅಪಾರವಾದ ನಷ್ಟವಾಗ ತೊಡಗಿತ್ತು. ಈ ಸಮಸ್ಯೆಯನ್ನು ಸಹಿಸಲಾಗದ ಅಲ್ಲಿನ ರೈತಾಪಿ ವರ್ಗ ನಂದಿಯನ್ನು ದಯಮಾಡಿ ಬೆಳೆಯನ್ನು ನಾಶ ಮಾಡಬೇಡ, ಪ್ರತೀ ವರ್ಷ ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ನಿನಗೆ ನಾವು ಬೆಳೆದ ಮೊದಲ ಬೆಳೆಯನ್ನು ತಂದು ಅರ್ಪಿಸುತ್ತೇವೆ, ಹಾಗೇ ನಿನಗೆ ಒಂದು ಆಲಯವನ್ನೂ ಕಟ್ಟಿಸುತ್ತೇವೆ ಎಂದು ಪ್ರಾರ್ಥಿಸಿಕೊಂಡರು.

ಹೀಗೇ ಪ್ರಾರ್ಥಿಸಿಕೊಂಡ ಮಾರನೇ ದಿನದಿಂದ ನಂದಿಯ ಉಪಟಳ ನಿಂತಿತ್ತು. ಈ ವೃತ್ತಾಂತ ಬೆಂಗಳೂರು ನಿರ್ಮಾತೃ ಕೆಂಪೇಗೌಡರಿಗೂ ತಿಳಿದು ನಂದಿಯ ದೊಡ್ಡ (15 ಅಡಿ ಎತ್ತರ ಹಾಗೂ 20 ಅಡಿ ಅಗಲದ) ವಿಗ್ರಹವನ್ನೂ ಕೆತ್ತಿಸಿ ಅದಕ್ಕೊಂದು ಗೂಡಿಯನ್ನೂ ಕಟ್ಟಿಸುತ್ತಾರೆ.

ಅಂದಿನಿಂದ ಆ ದೇವಸ್ಥಾನ ದೊಡ್ಡ ಬಸವನ ಗುಡಿ ಎಂದು ಪ್ರಖ್ಯಾತವಾಯಿತು. ಈ ದೊಡ್ಡ ಬಸವಣ್ಣ ನೆಲೆನಿಂತಿರುವ ಪ್ರದೇಶವೇ ಇಂದಿನ ಬೆಂಗಳೂರಿನ ಬಸವನಗುಡಿ. ಅಂದು ಆ ರೈತಾಪಿ ವರ್ಗ ನಡೆದುಕೊಂಡ ಮಾತಿನಂತೆ ಇಂದಿಗೂ ಆ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ವಿಶೇಷವಾದ ಸಂಗತಿಯೇ. ಬೆಳೆಹಾನಿಯಾಗಿ ಹೆಚ್ಚು ಬೆಳೆ ತೆಗೆಯಲು ಆಗದೇ ಇದ್ದರೂ ಬಸವನಿಗೆ ಅರ್ಪಿಸುವ ಪದ್ಧತಿ ಮಾತ್ರ ತಪ್ಪಿಲ್ಲ. ಮಾಗಡಿ, ಮಂಡ್ಯ, ಮೈಸೂರು,




ಕೋಲಾರ, ಚಿಂತಾಮಣಿ, ತುಮಕೂರು, ಕುಣಿಗಲ್ ಹೀಗೇ ರಾಜ್ಯದ ಬೇರೆ ಬೇರೆ ಊರುಗಳಿಂದ ಬಸವನಿಗಾಗಿ ಕಡಲೆಕಾಯಿಯನ್ನು ಭಕ್ತಿಯಿಂದ ಹೊತ್ತು ತರುತ್ತಾರೆ. ಬಸವನಿಗೆ ಅರ್ಪಿಸಿದ ನಂತರ ಅಲ್ಲಲೇ ಅಂಗಡಿಗಳನ್ನು ಹಾಕಿಕೊಂಡು ಮಾರಾಟವನ್ನೂ ಮಾಡುತ್ತಾರೆ. ಈ ಮೂಲಕ ತಾವು ಬೆಳೆದ ಬೆಳೆ ತಮ್ಮ ಆರಾಧ್ಯ ದೈವನಿಗೂ ನೀಡಿ ತಮ್ಮ



ನಿತ್ಯ ಬದುಕಿಗೂ ಸ್ವಲ್ಪ ಹಣವನ್ನು ದುಡಿದುಕೊಂಡು ರೈತರು ಮರಳುತ್ತಾರೆ. ಈ ಇಡೀ ಸಂಭ್ರಮವನ್ನು 'ಕಡಲೆಕಾಯಿ ಪರಿಷೆ(ಜಾತ್ರೆ)' ಎಂದು ಕರೆಯಲಾಗುತ್ತದೆ. ಕಾರ್ತಿಕಮಾಸದ ಕಡೆಯ ಸೋಮವಾರಕ್ಕು ಕೆಲವು ದಿನಗಳ ಮುಂಚೆಯೇ ಬಸವನಗುಡಿಯನ್ನು ನವ ವಧುವಿನಂತೆ ಸಿಂಗರಿಸಲಾಗುತ್ತದೆ. ಸುತ್ತಲೂ ಮಿನುಗುವ ದೀಪಗಳು, ಅಂಗಡಿಗಳ ಸಾಲುಗಳು. ಬಸವಣ್ಣನನ್ನು ನೋಡಲು ನಿಲ್ಲುವ ಭಕ್ತರ ಸಾಲು ಒಂದು ಕಡೆಯಾದರೆ, ಕಡಲೆಕಾಯಿ ಕೊಳ್ಳಲು ಮುಗಿಬೀಳುವ ಜನ ಸಾಮೂಹ ಮತ್ತೊಂದು ಕಡೆ..

ಬಸವನಗುಡಿಯ ಈ ಐತಿಹಾಸಿಕ ಜಾತ್ರೆಯನ್ನು ಕಣ್ತುಂಬಿಕೊಳ್ಳುವುದೇ ಒಂದು ಸಂಭ್ರಮದ ವಿಷಯ. ಸುಮಾರು ಒಂದು ವಾರಕ್ಕಿಂತಲೂ ಹೆಚ್ಚು ದಿನ ಜಾತ್ರೆಯ ಸವಿಯನ್ನು ಸವಿಯಬಹುದು. ಅಪ್ಪನ ಹೆಗಲೇರಿ ಜಾತ್ರೆಯ ಸವಿಯನ್ನು ಸವಿಯುವ ಪುಟ್ಟ ಮಕ್ಕಳು, ತಮಗೆ ಬೇಕಾದ ವಸ್ತುಗಳನ್ನು ಖರೀದಿಸುವಲ್ಲಿ ಮಗ್ನರಾಗಿರುವ ಮಹಿಳಾ ಸಮೂಹ, ಬಸವಣ್ಣನನ್ನು ನೋಡಿಯೇ ಹೋಗಬೇಕೆಂದು ಸರತಿ ಸಾಲಿನಲ್ಲಿ ನಿಲ್ಲುವ ಭಕ್ತ ಸಮೂಹ.. ರಾಜ್ಯದ ವಿವಿಧ ಭಾಗಗಳಿಂದಲ್ಲದೇ ಅಂದ್ರ ಹಾಗೂ ತಮಿಳುನಾಡಿನಿಂದಲೂ ಬರುವ ವ್ಯಾಪಾರಸ್ಥರನ್ನು ನೋಡುತ್ತಿದ್ದರೆ, ವಿವಿಧತೆಯಲ್ಲಿ ಏಕತೆಯನ್ನು ಸಾರುವ ಇಂತಹ ಐತಿಹಾಸಿಕ ಉತ್ಸವಗಳೇ ಭಾರತದ ಜೀವಾಳವಲ್ಲವೇ ಎಂದು ಮತ್ತೆ ಮತ್ತೆ ಅನಿಸುತ್ತದೆ.

ನೀವು ಈ ಸಂಭ್ರಮವನ್ನು ನೋಡಿಲ್ಲದಿದ್ದರೆ ಒಮ್ಮೆ ಭೇಟಿ ಕೊಡಿ ನಮ್ಮ ಬಸವಗುಡಿಯ ಐತಿಹಾಸಿಕ ಕಡಲೆಕಾಯಿ ಪರಿಷೆಗೆ'.

# ಕಿಡ್ನಿಗಳು ಸಮಸ್ಯೆಯಿಂದ ಏನೆಲ್ಲಾ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ



ದೇಹದ ಹೊರಗಿನ ಅಂಗಾಂಗಗಳ ಬಗ್ಗೆ ನಮಗೆ ಇರುವ ಕಾಳಜಿಯು ದೇಹದ ಒಳಗಿನ ಅಂಗಗಳ ಬಗ್ಗೆ ಇರಲ್ಲ ಮುಖ್ಯವಾಗಿ ಕಿಡ್ನಿಯಲ್ಲಿ ಏನಾದರೂ ಸಮಸ್ಯೆಗಳು ಬಂದರೆ ಮಾತ್ರ ನಾವು ಜಾಗೃತರಾಗುತ್ತೇವೆ. ಯಾಕೆಂದ್ರೆ ಹೆಚ್ಚಿನ ಮಹಿಳೆಯರು ಯಾವುದೇ ರೋಗದ ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷ್ಯ ಮಾಡುತ್ತಾ ಬರುತ್ತಾರೆ, ಕೊನೆಗೆ ಇದೇ ಕಾರಣಕ್ಕೆ ರೋಗವು ಗಂಭೀರ ಸ್ವರೂಪವನ್ನು ಪಡೆಯುತ್ತದೆ.

ಇದಕ್ಕೆ ಕಿಡ್ನಿಗಳ ಸಮಸ್ಯೆಯೂ ಕೂಡ ಹೊರತಲ್ಲ ನಾವು ಈ ಹಿಂದಿನ ಲೇಖನದಲ್ಲಿ ಹಲವಾರು ಬಾರಿ ಹೇಳಿದಂತೆ, ಮನುಷ್ಯನ ದೇಹದಲ್ಲಿ ಕಂಡು ಬರುವ ಬಹು ಮುಖ್ಯ ಅಂಗಾಂಗಗಳಲ್ಲಿ ಕಿಡ್ನಿಗಳು ಅಥವಾ ಮೂತ್ರ ಪಿಂಡಗಳು ಕೂಡ ಒಂದು.

ಇದರ ಪ್ರಮುಖ ಕಾರ್ಯ ಏನೆಂದ್ರೆ, ದೇಹದಲ್ಲಿ ಕಂಡು ಬರುವ ವಿಷಕಾರಿ ಅಂಶಗಳನ್ನು ಮೂತ್ರ ವಿಸರ್ಜನೆಯ ಮೂಲಕ ಹೊರ ಹಾಕುವ ಕೆಲಸ ಇರುತ್ತದೆ. ಒಂದು ವೇಳೆ ಈ ಪ್ರಕ್ರಿಯೆಯು ಸರಿಯಾಗಿ ನಡೆಯದೇ ಹೋದರೆ, ದೇಹದಲ್ಲಿ ವಿಷಕಾರಿ ಅಂಶಗಳು ಹೊರ ಹೋಗದೆ ಹಾಗೆ ಶೇಖರಣೆಗೊಂಡು, ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿ ಬಿಡುತ್ತದೆ, ಜೊತೆಗೆ ಕಿಡ್ನಿಗಳು ಕೂಡ ಪರ್ಮನೆಂಟಾಗಿ ತಮ್ಮ ಕಾರ್ಯವನ್ನು ನಿಲ್ಲಿಸಿಬಿಡುತ್ತದೆ ಹೀಗಾಗಿ ಮೂತ್ರಪಿಂಡಗಳ ಅಥವಾ ಕಿಡ್ನಿಗಳಲ್ಲಿ ಸಮಸ್ಯೆ ಕಂಡು ಬರಬಾರದು ಎಂದರೆ, ಮೊದಲಿಗೆ ಸಾಧ್ಯವಾದಷ್ಟು ಜೀವನಶೈಲಿಯಲ್ಲಿ ಬದಲಾವಣೆ ತಂದು ಕೊಳ್ಳಬೇಕು ಜೊತೆಗೆ ಆರೋಗ್ಯಕಾರಿ ಆಹಾರ ಪದಾರ್ಥಗಳ ಸೇವನೆ ಮಾಡಬೇಕು. ಇಂದಿನ ಲೇಖನದಲ್ಲಿ ಕಿಡ್ನಿಗಳು ಸರಿಯಾಗಿ ಕಾರ್ಯನಿರ್ವಹಣೆ ಮಾಡದೇ ಇದ್ದರೆ ಏನೆಲ್ಲಾ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಅದರಲ್ಲೂ ಮಹಿಳೆಯರಲ್ಲಿ ಮೂತ್ರಪಿಂಡದ ಸೋಂಕಿನ ಲಕ್ಷಣಗಳು

**ಮಹಿಳೆಯರಲ್ಲಿ ಕಿಡ್ನಿ ಸಮಸ್ಯೆಯ ರೋಗಲಕ್ಷಣಗಳು**

**ಮಹಿಳೆಯರಲ್ಲಿ ಮೂತ್ರಪಿಂಡದ ಸೋಂಕಿನ ಲಕ್ಷಣಗಳು ಪುರುಷರಿಗಿಂತ ಸ್ವಲ್ಪ ಭಿನ್ನವಾಗಿರಬಹುದು. ಸೋಂಕು ಶ್ರೋಣಿಯ ಪ್ರದೇಶದಲ್ಲಿ ನೋವನ್ನು ಉಂಟು ಮಾಡ ಬಹುದು ಇದು ಹೊಟ್ಟೆಯ ಕೆಳಭಾಗ ಬೆನ್ನಿನ ಕೆಳಭಾಗದಲ್ಲಿ ಅನುಭವಿಸಬಹುದು. ಮೂತ್ರಪಿಂಡದ ಸೋಂಕು ಖಾಸಗಿ ಭಾಗದಿಂದ ಬಿಳಿ ಸ್ರಾವಕ್ಕೆ ಕಾರಣವಾಗಬಹುದು. ಸಮಯಕ್ಕೆ ಸರಿಯಾಗಿ ಮುಟ್ಟಾಗದಿರುವುದು ಸಹ ಇದರ ಲಕ್ಷಣವಾಗಿದೆ. ಆದರೆ ಮಹಿಳೆಯರಲ್ಲಿ ಈ ಲಕ್ಷಣಗಳು ಸ್ವಲ್ಪ ನಿಧಾನವಾಗಿ ಕಂಡುಬರುತ್ತವೆ.**

ಹೇಗಿರುತ್ತವೆ ಎನ್ನುವುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೋಡುತ್ತಾ ಹೋಗೋಣ

**ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ :** ದೇಶದಲ್ಲಿ ಲಕ್ಷಾಂತರ ಜನರು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅವರಲ್ಲಿ ಹೆಚ್ಚಿನ ಸಂಖ್ಯೆಯು 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಎನ್ನುವುದು ನಿಜಕ್ಕೂ ಆತಂಕಕಾರಿ ವಿಚಾರ. ಇನ್ನು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿರುವ ಮಹಿಳೆಯರ ಸಂಖ್ಯೆಯೂ ಕಡಿಮೆಯಿಲ್ಲ. ಮಹಿಳೆಯರಿಗೆ ಮೂತ್ರಪಿಂಡದ ಸಮಸ್ಯೆಗಳಿದ್ದಾಗ, ಪುರುಷರಲ್ಲಿರುವಂತೆಯೇ ಕೆಲವು ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎನ್ನುತ್ತಾರೆ ತಜ್ಞರು. ಇನ್ನು ನಾವು ಈಗಾಗಲೇ ಹೇಳಿದ ಹಾಗೆ ಮೂತ್ರಪಿಂಡಗಳು ರಕ್ತದಿಂದ ವಿಷಕಾರಿ ಅಂಶಗಳನ್ನು ತೆಗೆದುಹಾಕಲು ಮತ್ತು ದೇಹದಿಂದ ಹೆಚ್ಚುವರಿ ನೀರನ್ನು ತೆಗೆದುಹಾಕಲು ಕೆಲಸ ಮಾಡುತ್ತವೆ. ದೇಹದಲ್ಲಿನ ಕೆಲವು ಬದಲಾವಣೆಗಳು ಮೂತ್ರ ಪಿಂಡಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ.

**ಮಹಿಳೆಯರಲ್ಲಿ ಗರ್ಭಧಾರಣೆಯು ಮೂತ್ರಪಿಂಡಗಳ** ಮೇಲೆ ಪರಿಣಾಮ ಬೀರಲು ಪ್ರಮುಖ ಕಾರಣವಾಗಿದೆ. ಹಾರ್ಮೋನುಗಳ ಬದಲಾವಣೆಗಳು ಹೆಚ್ಚಾಗಿ ಮೂತ್ರ ಪಿಂಡಗಳ ಮೇಲೆ ಪರಿಣಾಮ ಬೀರುತ್ತವೆ. ಇದಲ್ಲದೆ ಮಹಿಳೆಯರಲ್ಲಿ ಮೂತ್ರಪಿಂಡದ ಕಾಯಿಲೆಯ ಲಕ್ಷಣ ಗಳು ವಿಭಿನ್ನವಾಗಿರ ಬಹುದು. ಆರಂಭದಲ್ಲಿಅವು ನಿಧಾನ ವಾಗಿದ್ದರೂ, ಕಾಲಾನಂತರದಲ್ಲಿ ಹೆಚ್ಚಾಗುತ್ತವೆ.



# ಮಟನ್ ಲಿವರ್ ಕರಿ ಸವಿದರೆ ರುಚಿವ್ರೋ ರುಚಿ

ಭಾನುವಾರ ಬಂತೆಂದರೆ ಹಲವರು ನಾನ್ ವೆಜ್ ಊಟದ ಮೊರೆ ಹೋಗ್ತಾರೆ. ಕೆಲವರು ಮನೆಯಲ್ಲೇ ಮಾಂಸಹಾರ ಟ್ರೈ ಮಾಡಿದ್ರೆ, ಮತ್ತೆ ಕೆಲವರು ಹೋಟೆಲ್, ರೆಸ್ಟೋರೆಂಟ್‌ನಂತಹ ಆಯ್ಕೆಗಳ ಮಾಡುತ್ತಾರೆ. ನಾನ್ ವೆಜ್ ಪ್ರಿಯರಿಗೆ ಹತ್ತು ಹಲವು ರೆಸಿಪಿಗಳು ಭಾನುವಾರದ ರಜೆಯ ಮಜಾ ಹೆಚ್ಚಿಸುತ್ತೆ. ಇನ್ನು ಈ ರಜೆಯಲ್ಲಿ ಮಟನ್ ರೆಸಿಪಿಗಳ ಸವಿಯಲು ಇಷ್ಟಪಡುವವರು ಹೆಚ್ಚು. ಆಗಾಗ ಮಾಂಸಹಾರ ಸೇವನೆಯು ನಿಮ್ಮ ದೇಹಕ್ಕೂ ಉತ್ತಮವಾಗಿರುತ್ತದೆ. ಮಟನ್‌ನಿಂದ ಮಾಡುವಂತಹ ವಿವಿಧ ರೀತಿಯ ಖಾದ್ಯಗಳು ಎಲ್ಲರ ಮನೆ ಗೆಲ್ಲುವ ಜೊತೆಗೆ ಬಾಯಲ್ಲಿ ನೀರು ತರಿಸುತ್ತವೆ. ಅದಲ್ಲೂ ಮಟನ್ ಚಾಪ್ಸ್, ಮಟನ್ ಗ್ರೇವಿ, ಮಟನ್ ಬಿರಿಯಾನಿಗಳು ಎಲ್ಲರ ಪ್ರಿಯವಾದ ಖಾದ್ಯಗಳಲ್ಲಿ ಒಂದಾಗಿವೆ. ಹಾಗೆ ಎಲ್ಲರಿಗೂ ಈ ಖಾದ್ಯ ಸವಿಯುವುದು ಅಂದರೆ ಇಷ್ಟವಾಗುತ್ತೆ. ನಾವಿಂದು ಮಟನ್ ಲಿವರ್ ಕರಿ ಕುರಿತಾಗಿ ತಿಳಿದುಕೊಳ್ಳೋಣ. ಈ ಮಟನ್ ಲಿವರ್ ಕರಿ ಎಲ್ಲಾ ಊಟದೊಂದಿಗೆ ಸವಿಯಲು ಅದ್ಭುತ ರುಚಿ ನೀಡಲಿದೆ. ಹಾಗೆ ಈ ಮಟನ್ ಲಿವರ್ ಕರಿ ಎಲ್ಲಾ ಊಟದೊಂದಿಗೆ ಅದ್ಭುತ ಹೀಗಾಗಿ ನಾವಿಂದು ಈ ರುಚಿ ರುಚಿಯ ಮಟನ್ ಲಿವರ್ ಕರಿ ಮಾಡುವ ಕುರಿತಾಗಿ ತಿಳಿದುಕೊಳ್ಳೋಣ.

ಮಟನ್ ಲಿವರ್ ಕರಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು ಮಾಡುವ ವಿಧಾನವೇನು ಮಾಡಲು ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ.

**ಮಟನ್ ಲಿವರ್ ಕರಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು:** ಮಟನ್ ಲಿವರ್ ಹಸಿ ಶುಂಠಿ ಬೆಳ್ಳುಳ್ಳಿ ಈರುಳ್ಳಿ ತೆಂಗಿನಕಾಯಿ ಹುರಿಗಡಲೆ ಕೊತ್ತಂಬರಿ ಸೊಪ್ಪು ಗಸೆಗಸೆ ಚಕ್ಕೆ ಲವಂಗ ಹಸಿ ಮೆಣಸು ಕರಿಬೇವು ಅರಶಿಣ ಖಾರದ ಪುಡಿ ದನಿಯಾ ಪುಡಿ ಎಣ್ಣೆ ಉಪ್ಪು ಮಟನ್ ಲಿವರ್ ಕರಿ ಮಾಡುವ ವಿಧಾನವೇನು ಮೊದಲು ಒಂದು ಮಿಕ್ಸಿ ಜಾರ್ ತೆಗೆದುಕೊಂಡು ಅದಕ್ಕೆ ಹಸಿ ಶುಂಠಿ, ಬೆಳ್ಳುಳ್ಳಿ, 1 ಈರುಳ್ಳಿ, 1 ಈರುಳ್ಳಿಯನ್ನು ಸಣ್ಣದಾಗಿ ಹೆಚ್ಚಿಕೊಂಡು ಹಾಕಿಕೊಳ್ಳಿ. ಹಾಗೆ ಸಣ್ಣದಾಗಿ ಹೆಚ್ಚಿರುವ ತೆಂಗಿನಕಾಯಿ, ಪುದಿನ, ಹುರಿಗಡಲೆ, ಕೊತ್ತಂಬರಿ ಸೊಪ್ಪು, ಗಸೆಗಸೆ, ಚಕ್ಕೆ, ಲವಂಗ ಹಾಗೆ ಸ್ವಲ್ಪ ನೀರು ಹಾಕಿಕೊಂಡು ನುಣ್ಣಗೆ ಪೇಸ್ಟ್ ಮಾಡಿಕೊಳ್ಳಿ. ಈ ಮಸಾಲೆಯನ್ನು ತೆಗೆದು ಬೌಲ್‌ಗೆ ಹಾಕಿಟ್ಟುಕೊಳ್ಳಿ. ಈಗ ಒಂದು ಬಾಣಲೆ ಒಲೆ ಮೇಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿಕೊಂಡು ಬಳಿಕ ಇದಕ್ಕೆ ಒಂದು ಈರುಳ್ಳಿ, ಹಸಿ ಮೆಣಸು, ಕರಿಬೇವು ಹಾಕಿ ಫ್ರೈ ಮಾಡಿಕೊಳ್ಳಿ. 1 ನಿಮಿಷ ಬಿಟ್ಟು ಇದಕ್ಕೆ ಬೌಲ್‌ನಲ್ಲಿರುವ ಮಸಾಲೆ ಪೇಸ್ಟ್ ಅನ್ನು ಹಾಕಿಕೊಂಡು 2 ನಿಮಿಷಗಳ ಕಾಲ ಫ್ರೈ ಮಾಡಿಕೊಳ್ಳಿ. ಈಗ ತೊಳೆದಿಟ್ಟಿರುವ ಮಟನ್ ಲಿವರ್ ಅನ್ನು ಇದಕ್ಕೆ ಹಾಕಿಕೊಳ್ಳಿ. ಹಾಗೆ ಮಟನ್ ಲವರ್ ಜೊತೆಗೆ ಅರಶಿಣ, ರುಚಿಗೆ ತಕ್ಕಷ್ಟು ಉಪ್ಪು ಕೂಡ ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಹಾಗೆ 15 ನಿಮಿಷ ಮುಚ್ಚಳ ಮುಚ್ಚಿ ಹಾಗೆಯೇ ಬಿಡಿ. ನಂತರ ಇದಕ್ಕೆ ದನಿಯಾ ಪುಡಿ, ಖಾರದ ಪುಡಿ ಸಹ ಹಾಕಿಕೊಳ್ಳಿ. ನಂತರ ಮಿಕ್ಸ್ ಮಾಡಿ ಸ್ವಲ್ಪವೇ ನೀರು ಹಾಕಿಕೊಂಡು ಮಿಕ್ಸ್ ಮಾಡಿಕೊಂಡು ಕುದಿಯಲು ಬಿಡಿ. ನಿಮಗೆ ಗಟ್ಟಿ ಬೇಕಿದ್ದರೆ ನೀರು ಕಡಿಮೆ ಹಾಕಿಕೊಳ್ಳಿ. ನಂತರ ಮುಚ್ಚಳ ಮುಚ್ಚಿ 5 ನಿಮಿಷ ಕುದಿಸಿಕೊಳ್ಳಿ. ಕೊನೆಯದಾಗಿ ಸಣ್ಣದಾಗಿ ಕೊತ್ತಂಬರಿ ಸೊಪ್ಪು ಹಾಕಿಕೊಂಡು ಮಿಕ್ಸ್ ಮಾಡಿಕೊಂಡರೆ ನಿಮ್ಮ ಮುಂದೆ ಮಟನ್ ಲಿವರ್ ಕರಿ ರೆಡಿಯಾಗುತ್ತದೆ, ನೀವು ಕೂಡ ಮನೆಯಲ್ಲಿ ಇದನ್ನು ಟ್ರೈ ಮಾಡಿ ನೋಡಿ. ಅದರಲ್ಲೂ ಭಾನುವಾರದ ಬಾಡೂಟಕ್ಕೆ ಇದು ಉತ್ತಮ ರುಚಿ ನೀಡಲಿದೆ.



# ಹೆಸರುಕಾಳುಲ್ಲಿ ವಿಟಮಿನ್ ಬಿ12 ಹೇರಳ

**ವಿಟಮಿನ್ ಬಿ 12 ಹೀರಿಕೊಳ್ಳುವಲ್ಲಿ ಹೆಸರುಕಾಳಿನ ಪಾತ್ರ**

**ಹೆಸರುಕಾಳಿನಲ್ಲಿರುವ ನಾರಿನಾಂಶ ಮತ್ತು ಇತರ ಪೋಷಕಾಂಶಗಳು ಕರುಳಿನ ಆರೋಗ್ಯವನ್ನು ಉತ್ತೇಜಿಸುತ್ತವೆ. ವಿಟಮಿನ್ ಬಿ 12 ಹೀರಿಕೊಳ್ಳಲು ಆರೋಗ್ಯಕರ ಕರುಳು ಅತ್ಯಗತ್ಯ. ಇದಲ್ಲದೆ, ಹೆಸರುಕಾಳಿನಲ್ಲಿರುವ ಕಬ್ಬಿಣ ಮತ್ತು ಫೋಲೇಟ್ ವಿಟಮಿನ್ ಬಿ 12 ಕೊರತೆಯಿಂದ ಉಂಟಾಗುವ ರಕ್ತಹೀನತೆಯ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.**

ದೇಹಕ್ಕೆ ಎಲ್ಲಾ ಬಗೆಯ ಪೋಷಕಾಂಶಗಳು ಅತ್ಯಗತ್ಯವಾಗಿ ಬೇಕಾಗಿರುತ್ತದೆ ಅದರಲ್ಲೂ ವಿಟಮಿನ್ ಬಿ12ನಂತಹ ಪೋಷಕಾಂಶಗಳ ಕೊರತೆ ಉಂಟಾದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹೆಸರುಕಾಳು ತುಂಬಾನೇ ನೆರವಿಗೆ ಬರುತ್ತದೆ. ಪ್ರಮುಖವಾಗಿ ಈ ಕಾಳಿನಲ್ಲಿ ಕಂಡು ಬರುವ ಫೋಲೇಟ್, ವಿಟಮಿನ್ ಬಿ9 ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವಲ್ಲಿ ನೆರವಿಗೆ ಬರುತ್ತದೆ.

ಮನುಷ್ಯ ಆರೋಗ್ಯವಂತನಾಗಿ ಜೀವನ ನಡೆಸಬೇಕು ಎಂದರೆ, ಆರೋಗ್ಯಕ್ಕೆ ಅವಶ್ಯಕವಾಗಿರುವ ಪೋಷಕಾಂಶಗಳು ದಿನಕ್ಕೆ ಇಂತಿಷ್ಟು ಪ್ರಮಾಣದಲ್ಲಿ ಸಿಗುತ್ತಿರಬೇಕು. ಪ್ರಮುಖವಾಗಿ ವಿಟಮಿನ್‌ಗಳು, ಪ್ರೋಟೀನ್ ಅಂಶಗಳು, ಕ್ಯಾಲ್ಸಿಯಂ ಮೆಗ್ನೇಷಿಯಂ ಹಾಗೂ ಇನ್ನಿತರ ಖನಿಜಾಂಶಗಳು ದಿನನಿತ್ಯ ಸೇವನೆ ಮಾಡುವ ಆಹಾರ ಪದಾರ್ಥಗಳಿಂದ ಸಮೃದ್ಧವಾಗಿ ಸಿಗಬೇಕು. ಒಂದು ವೇಳೆ ದೇಹಕ್ಕೆ ಸಿಗಲೇಬೇಕಾದ ಯಾವುದೇ ಬಗೆಯ ಪೋಷಕಾಂಶಗಳಲ್ಲೂ ಕೂಡ ಕೊರತೆ ಕಾಣಿಸಿಕೊಂಡರೆ, ಅದರಿಂದ ಕೂಡ ಬೇರೆ ರೀತಿಯ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಅದರಲ್ಲೂ ವಿಟಮಿನ್ ಬಿ12 ಪೋಷಕಾಂಶಗಳಲ್ಲಿ ಕೊರತೆ ಕಾಣಿಸಿಕೊಳ್ಳದಂತೆ ನೋಡಿಕೊಳ್ಳಬೇಕು

**ವಿಟಮಿನ್ ಬಿ12 ಕೊರತೆಯ ಲಕ್ಷಣಗಳು :**



ವಿಟಮಿನ್ ಬಿ12 ಎನ್ನುವ ಈ ಪೋಷಕಾಂಶವು ಮಾನವನ ಮೆದುಳಿನ ಮತ್ತು ನರವ್ಯವಸ್ಥೆಗೆ ಸಂಬಂಧಪಟ್ಟ ಕಾರ್ಯನಿರ್ವಹಣೆಗೆ, ಜೊತೆಗೆ ದೇಹದಲ್ಲಿ ಕೆಂಪು ರಕ್ತಕಣಗಳ ರಚನೆಗೆ ಮುಖ್ಯವಾಗಿ ಬೇಕಾಗಿರುವ ಪೋಷಕಾಂಶಗಳಾಗಿವೆ. ಒಂದು ವೇಳೆ ಈ ಪ್ರಮುಖ ಪೋಷಕಾಂಶಗಳಲ್ಲಿ ಕೊರತೆ ಕಾಣಿಸಿಕೊಂಡರೆ, ಆಯಾಸ.

ವೀಕ್ ನೆಸ್, ರಕ್ತಹೀನತೆ, ನರಗಳ ಹಾನಿ, ದೃಷ್ಟಿ ಮಂಜಾಗುವುದು, ಬಾಯಿ ಹುಣ್ಣುನಂತಹ ಲಕ್ಷಣಗಳಿಗೆ ಕಾರಣವಾಗಬಹುದು. ಆದರೆ ಚಿಂತಿಸುವ ಅಗತ್ಯ ವಿಲ್ಲ. ಸರಿಯಾದ ಆಹಾರದಿಂದ ಈ ಕೊರತೆಯನ್ನು ಸರಿಪಡಿಸಬಹುದು.

**ವಿಟಮಿನ್ ಬಿ 12 ಕೊರತೆಗೆ ಹೆಸರು ಕಾಳು:** ಹೌದು, ಸರಿಯಾದ ಆಹಾರವನ್ನು ಅನುಸರಿಸುವ ಮೂಲಕ ವಿಟಮಿನ್ ಬಿ 12 ಕೊರತೆಯನ್ನು ಸುಲಭವಾಗಿ ನಿವಾರಿಸಬಹುದು.

ಪ್ರಾಣಿ ಮೂಲದ ಉತ್ಪನ್ನಗಳು ಅತ್ಯುತ್ತಮ ಮೂಲಗಳಾಗಿದ್ದರೂ, ನಿರ್ದಿಷ್ಟ ರೀತಿಯ ಬೇಳೆಕಾಳು ಕೂಡ ಈ ಪ್ರಮುಖ ಪೋಷಕಾಂಶದ ಕೊರತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ. ಹಾಗಾದ್ರೆ, ಅಂತಹ ಬೇಳೆಕಾಳು ಯಾವುದು ಗೊತ್ತಾ?, ಅದೇ ಹೆಸರು ಕಾಳು! ಹೌದು ಈ ಹೆಸರುಕಾಳುಗಳು, ದೇಹದಲ್ಲಿ ವಿಟಮಿನ್ ಬಿ 12 ಕೊರತೆ ಆಗದಂತೆ ನೋಡಿಕೊಳ್ಳುತ್ತದೆ.

**ಹೆಸರುಕಾಳು ಮತ್ತು ವಿಟಮಿನ್ ಬಿ12 ನಡುವಿನ ಸಂಪರ್ಕ:** ಮೊದಲಿಗೆ ಹೆಸರುಕಾಳಲ್ಲಿ ವಿಟಮಿನ್ ಬಿ12 ನೇರವಾಗಿ ಇರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ, ಆದರೆ ಅವು ದೇಹವು ವಿಟಮಿನ್ ಬಿ12 ಅನ್ನು ಹೀರಿಕೊಳ್ಳಲು ಮತ್ತು ಬಳಸಲು ಸಹಾಯ ಮಾಡುತ್ತದೆ. ಹೆಸರುಕಾಳು ಫೋಲೇಟ್ (ವಿಟಮಿನ್ ಬಿ9) ನಲ್ಲಿ ಸಮೃದ್ಧವಾಗಿದೆ, ಇದು ವಿಟಮಿನ್ ಬಿ12 ನೊಂದಿಗೆ ಕಾರ್ಯನಿರ್ವಹಿಸುತ್ತದೆ.



ಕೆಂಪು ರಕ್ತ ಕಣಗಳ ಉತ್ಪಾದನೆ ಮತ್ತು ಹೋಮೋಸಿಸ್ಟೈನ್ ಮಟ್ಟವನ್ನು ನಿಯಂತ್ರಿಸಲು ಫೋಲೇಟ್ ಮತ್ತು ವಿಟಮಿನ್ ಬಿ12 ನ ಸರಿಯಾದ ಸಮತೋಲನ ಅತ್ಯಗತ್ಯ. ಹೆಸರುಕಾಳು ಫೋಲೇಟ್ ಅನ್ನು ಮರುಪೂರಣಗೊಳಿಸುವ ಮೂಲಕ ವಿಟಮಿನ್ ಬಿ12 ಕಾರ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

**ಹೆಸರು ಬೇಳೆಯ ಇತರ ಪ್ರಯೋಜನಗಳು:** ಹೆಸರು ಕಾಳುಗಳು ಪೌಷ್ಟಿಕಾಂಶದ ಶಕ್ತಿ ಕೇಂದ್ರಗಳಾಗಿವೆ. ಅವು ಪ್ರೋಟೀನ್, ಫೈಬರ್, ಕಬ್ಬಿಣ, ಪೊಟ್ಯಾಸಿಯಮ್, ಮೆಗ್ನೀಸಿಯಮ್ ಮತ್ತು ವಿಟಮಿನ್ ಬಿ ಸಂಕೀರ್ಣದಲ್ಲಿ ಸಮೃದ್ಧವಾಗಿವೆ. ಅವು ಉರಿಯೂತ ಮತ್ತು ಆಕ್ಸಿಡೇಟಿವ್ ಒತ್ತಡದಿಂದ ದೇಹವನ್ನು ರಕ್ಷಿಸುವ ಉತ್ಕರ್ಷಣ ನಿರೋಧಕ ಗುಣಗಳನ್ನು ಸಹ ಹೊಂದಿವೆ. ಹೆಸರು ಬೇಳೆ ಜೀರ್ಣಿಸಿಕೊಳ್ಳಲು ಸುಲಭ ಜೀರ್ಣಾಂಗ ವ್ಯವಸ್ಥೆಗೆ ಪ್ರಯೋಜನಕಾರಿ ಎಂದು ಪರಿಗಣಿಸಲಾ ಗುತ್ತದೆ.

**ಇದನ್ನು ಆಹಾರದಲ್ಲಿ ಹೇಗೆ ಸೇರಿಸಿಕೊಳ್ಳುವುದು:** ನಿಮ್ಮ ಆಹಾರದಲ್ಲಿ ಹೆಸರುಕಾಳನ್ನು ಸೇರಿಸಿಕೊಳ್ಳುವುದು ತುಂಬಾ ಸುಲಭ. ನೀವು ದಾಲ್ ತಯಾರಿಸಬಹುದು, ಖಿಚಡಿಗೆ ಸೇರಿಸಬಹುದು ಅಥವಾ ಮೊಳಕೆ ಯೊಡೆದ ಹೆಸರುಕಾಳನ್ನು ಸಲಾಡ್ ಆಗಿ ತಿನ್ನಬಹುದು. ಹೆಸರುಕಾಳಿನ ನೀರು ಆರೋಗ್ಯಕ್ಕೂ ಪ್ರಯೋಜನಕಾರಿ. ಇದನ್ನು ಸೂಪ್ ಅಥವಾ ಹಸರುಕಾಳಿನ ದೋಸೆ ಮಾಡಿಯೂ ಕೂಡ ಸೇವನೆ ಮಾಡಬಹುದು

### ಮಳೆಗಾಲ ಮುಗಿದು ಒಂದೂವರೆ ತಿಂಗಳು ಕಳೆದರೂ ರಸ್ತೆಗಳ ದುರಸ್ತಿ ಕೆಲಸ ಕೈಗೆತ್ತಿಕೊಳ್ಳದ ಆಡಳಿತ ವ್ಯವಸ್ಥೆಗೆ ಹಿಡಿಶಾಪ

# ದುಸ್ಥಿತಿಯ ರಸ್ತೆ ಜಿಲ್ಲೆಗೆ ಶಾಪ; ತಾಣಗಳತ್ತ ಬರಲು ಪ್ರವಾಸಿಗರ ಹಿಂದೇಟು

• ಉದಯವಾಹಿನಿ ಕಾರವಾರ

ಮಳೆಗಾಲದಲ್ಲಿ ಕೆಸರುಮಯವಾಗಿದ್ದ ರಸ್ತೆಗಳಲ್ಲಿ ಸಂಚರಿಸಲು ಕಷ್ಟವಾಗುತ್ತಿತ್ತು. ಈಗ ಮುಂದೆ ವಾಹನ ಹೋದರೆ ಹಿಂದಿನ ವಾಹನಕ್ಕೆ ದಾರಿ ಕಾಣದಷ್ಟು ದೂಳು ಆವರಿಸಿಕೊಳ್ಳುತ್ತಿದೆ. ಸುಸಜ್ಜಿತ ಆಸ್ಪತ್ರೆ ಇಲ್ಲದ ಜಿಲ್ಲೆಯಲ್ಲಿ ರಸ್ತೆಗಳ ಸ್ಥಿತಿಯೂ ನಿಕೃಷ್ಟವಾಗಿದೆ.

ಇದು ಜಿಲ್ಲೆಯ ಪ್ರತಿ ತಾಲ್ಲೂಕುಗಳ ಜನರ ಬಾಯಲ್ಲಿ ನಿತ್ಯ ಕೇಳಿಬರುವ ಮಾತು. ನಾಲ್ಕಾರು ಜನ ಸೇರಿದ ಕಡೆಯಲ್ಲಿ ಈಗ ಹದಗೆಟ್ಟ ರಸ್ತೆಗಳದ್ದೇ ಚರ್ಚೆ ನಡೆಯುತ್ತಿದೆ. ಮಳೆಗಾಲ ಮುಗಿದು ಒಂದೂವರೆ ತಿಂಗಳು ಕಳೆದರೂ ರಸ್ತೆಗಳ ದುರಸ್ತಿ ಕೆಲಸ ಕೈಗೆತ್ತಿಕೊಳ್ಳದ ಆಡಳಿತ ವ್ಯವಸ್ಥೆಗೆ ಹಿಡಿಶಾಪ ಹಾಕುತ್ತಿದ್ದಾರೆ. ಪ್ರವಾಸಿಗರು ಹೆಚ್ಚು ಭೇಟಿ ನೀಡುವ ಗೋಕರ್ಣ, ದಾಂಡೇಲಿ ಸಂಪರ್ಕಿಸುವ ಮಾರ್ಗಗಳು ಹೊಂಡಗುಂಡಿಗಳಿಂದ ತುಂಬಿವೆ.

ಜಿಲ್ಲಾ ಕೇಂದ್ರ ಕಾರವಾರ ನಗರದಲ್ಲೇ ರಸ್ತೆಗಳ ಸ್ಥಿತಿ ಹದಗೆಟ್ಟಿದೆ. ಕಾರವಾರ-ಕೈಗಾ ರಸ್ತೆಯು ನಗರ ವ್ಯಾಪ್ತಿಯಲ್ಲಿ ಸಂಪೂರ್ಣ ಹದಗೆಟ್ಟಿದ್ದು, ಸಾಲುಸಾಲು ಪ್ರತಿಭಟನೆ ನಡೆದ ಬಳಿಕವೂ ರಸ್ತೆ ದುರಸ್ತಿ ಕೆಲಸ ನಡೆದಿಲ್ಲ. ಗ್ರಾಮೀಣ ಭಾಗದಲ್ಲೂ ರಸ್ತೆಗಳ ಡಾಂಬರು ಕಿತ್ತು ಹೋಗಿದ್ದು, ಸಂಚಾರ ದುಸ್ತರವಾಗಿದೆ.'ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳೇ ಕೆಟ್ಟ ಸ್ಥಿತಿಗೆ ತಲುಪಿದೆ.

ಅತಿವೃಷ್ಟಿಯಿಂದ ರಸ್ತೆ ಹಾಳಾಗಿದೆ ಎಂದು ಅಧಿಕಾರಿಗಳು ಹಾರಿಕೆ ಉತ್ತರ ನೀಡುತ್ತಿದ್ದಾರೆ. ಹೊಸ ರಸ್ತೆ ನಿರ್ಮಿಸಲು ತಡವಾಗಬಹುದಾದರೂ ತಾತ್ಕಾಲಿಕ ದುರಸ್ತಿಯನ್ನಾದರೂ ಮಾಡಿ ಕೊಡಿ ಎಂಬ ಬೇಡಿಕೆಗೆ ಸ್ಪಂದಿಸುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪ. ಶಿರಸಿ ನಗರವೂ ಸೇರಿದಂತೆ ತಾಲ್ಲೂಕಿನ ಬಹುತೇಕ ರಸ್ತೆಗಳು ಹದಗೆಟ್ಟಿವೆ. ಮಳೆಗಾಲದಲ್ಲಿ ಗುಂಡಿಗಳಿಗೆ ಹೆದರಿದ್ದ ಜನರು ದೂಳಿಗೆ ಹೈರಾಣಾಗಿದ್ದಾರೆ. ಹೆದ್ದಾರಿ, ಗ್ರಾಮೀಣ ರಸ್ತೆ ಸೇರಿ 250 ಕಿ.ಮೀಗೂ ಹೆಚ್ಚಿನ ರಸ್ತೆ ಸಂಪೂರ್ಣ ಹದಗೆಟ್ಟಿದೆ. ನಗರ ಭಾಗದ ರಸ್ತೆಯಂಚಿನ ತಿನಿಸಿನ ಅಂಗಡಿಗಳು ಸಂಪೂರ್ಣ ಮಣ್ಣಿನ ಕಣದಿಂದ ತುಂಬಿ ವ್ಯಾಪಾರವೂ ಕುಸಿಯುತ್ತಿದೆ ಎನ್ನುತ್ತಾರೆ ಹೋಟೆಲ್ ಉದ್ಯಮಿ ನಾಗರಾಜ ನಾಯ್ಕ.


☛ಉದಯವಾಹಿನಿ ಚಿತ್ರ

**ಆಡಳಿತ ವ್ಯವಸ್ಥೆಗೆ ಹಿಡಿಶಾಪ ಹಾಕುತ್ತಿದ್ದಾರೆ**

> **ಹಳಿಯಾಲದಲ್ಲಿ ಕಬ್ಬು ನುರಿಯುವ ಪ್ರಕ್ರಿಯೆ ಆರಂಭಕ್ಕೆ ಮೊದಲು ಗ್ರಾಮೀಣ ರಸ್ತೆ ಸಕ್ಕರೆ ಕಾರ್ಖಾನೆ ರಸ್ತೆ ಸರಿಪಡಿಸುವ ಕೆಲಸ ನಡೆಯಬೇಕು. ಇಲ್ಲವಾದಲ್ಲಿ ಈ ಮಾರ್ಗಗಳು ಸಂಚಾರಕ್ಕೆ ಯೋಗ್ಯವಲ್ಲದಷ್ಟು ಹದಗೆಡುತ್ತವೆ.**
> **-ಅಶೋಕ ಮೇಟಿ ಹಳಿಯಾಳ ರೈತ ಮುಖಂಡ**

ಹಳಿಯಾಳದಿಂದ ಯಲ್ಲಾಪುರಕ್ಕೆ ಸಂಪರ್ಕಿಸುವ ರಾಜ್ಯ ಹೆದ್ದಾರಿ ಇಲ್ಲಿನ ಎಂಜಿನಿಯರಿಂಗ್ ಕಾಲೇಜಿನಿಂದ ಕೆಸರೊಳ್ಳಿ ಗ್ರಾಮದವರೆಗೆ ಸಂಪೂರ್ಣ ಹದಗೆಟ್ಟಿದೆ. ಕಳೆದ ಒಂದು ವಾರದಿಂದ ಸ್ಥಳೀಯ ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸುವ ವಾಹನಗಳ ದಟ್ಟಣೆಯಿಂದ ಪಟ್ಟಣದ ರಸ್ತೆಗಳು ಹಾಳಾಗುತ್ತಿವೆ.

ಕಲಘಟಗಿ ಭಾಗಕ್ಕೆ ತೆರಳುವ ರಸ್ತೆಗಳಲ್ಲಿ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಎಂಜಿನಿಯರ್ ಸಂಜು ನಾಯಕ ಹೇಳಿದರು.

ಗೋಕರ್ಣ ಭಾಗದ ಬಹುತೇಕ ರಸ್ತೆಗಳು ಸಂಪೂರ್ಣ ಹದಗೆಟ್ಟಿದೆ. ಡಾಂಬರು ರಸ್ತೆಗಳು ಹೊಂಡಮಯವಾಗಿವೆ. ಮಾದನಗೇರಿಯಿಂದ ಗೋಕರ್ಣದ ವರೆಗಿನ ರಸ್ತೆಯಂತೂ ಕಲ್ಲು, ಜಲ್ಲಿಗಳಿಂದ ಕೂಡಿದ ಹೊಂಡಮಯ ರಸ್ತೆಯಾಗಿ ಮಾರ್ಪಟ್ಟಿದೆ. ಮಾದನಗೇರಿಯಿಂದ ಗೋಕರ್ಣದವರೆಗೆ 10ಕಿ.ಲೋ ಮೀ. ಕ್ರಮಿಸಲು 30 ನಿಮಿಷಕ್ಕೂ ಹೆಚ್ಚು ಸಮಯ ಬೇಕಾಗುತ್ತಿದೆ ಎಂಬುದು ವಾಹನ ಸವಾರರ ದೂರು. ಪ್ರತಿಬಾರಿ ಮಳೆಗಾಲ ಮುಗಿದ ನಂತರ ಹೊಂಡ ಮುಚ್ಚುವ ಕೆಲಸ ನಡೆಯುತ್ತಿತ್ತು. ಈ ಬಾರಿ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ' ಎಂದು ಸ್ಥಳೀಯ ವಾಹನ ಚಾಲಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಯಲ್ಲಾಪುರ ತಾಲ್ಲೂಕಿನಲ್ಲಿ ಹೆಚ್ಚಿನ ಗ್ರಾಮೀಣ ರಸ್ತೆಗಳು ಹಾಳಾಗಿವೆ. ಮಾವಿನಮನೆ ಗ್ರಾಮ ಪಂಚಾಯಿತಿಯ ಬಾರೆ ಕ್ರಾಸಿನಿಂದ ಮಲವಳ್ಳಿಗೆ ಹೋಗುವ ರಸ್ತೆ, ಬಾಸಲಿನಿಂದ ತಡಕೇಬೈಲ್ ವರೆಗಿನ ರಾಜ್ಯ ಹೆದ್ದಾರಿ, ಮಾಗೋಡು ಕ್ರಾಸ್‌ನಿಂದ ಶಿಂಬಳಗಾರ ಕ್ರಾಸ್‌ವೆಗಿನ ರಸ್ತೆ, ಮಾಗೋಡು ಫಾಲ್ಸ್ ಹತ್ತಿರದ ರಸ್ತೆ ಅತಿಯಾಗಿ ಹಾಳಾಗಿದೆ. ಹಳಿಯಾಳ-ಜೊಯಿಡಾ-ದಾಂಡೇಲಿ ರಾಜ್ಯ ಹೆದ್ದಾರಿ ಅಲ್ಲಲ್ಲಿ ಗುಂಡಿಗಳಿಂದ ಆವೃತವಾಗಿದ್ದು ಪ್ರವಾಸಿಗರು ಸಂಚರಿಸಲು ಹಿಂದೇಟು ಹಾಕುವ ಸ್ಥಿತಿ ಉಂಟಾಗಿದೆ. ಹಳೆ ದಾಂಡೇಲಿಯ ಡಿಪೋವರೆಗಿನ ರಸ್ತೆ ದುರಸ್ತಿಗೆ ಆಗ್ರಹಿಸಿ ಸ್ಥಳೀಯರು ಹಲವಾರು ಬಾರಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದಾರೆ ಆದರೆ, ರಸ್ತೆ ದುರಸ್ತಿ ಆಗಿಲ್ಲ.

ರಸ್ತೆಗಳೂ ಹಾಳಾಗಿದ್ದರೂ ಈವರೆಗೆ ದುರಸ್ತಿಪಡಿಸುವ ಕೆಲಸ ಆರಂಭಿಸಿಲ್ಲ. ಹದಗೆಟ್ಟ ರಸ್ತೆಗಳಿಂದ ನಿತ್ಯ ರಸ್ತೆ ಅಪಘಾತ ಸಂಭವಿಸುತ್ತಿದೆ. ಪ್ರವಾಸಿಗರು ದಾಂಡೇಲಿಯತ್ತ ಬರಲು ಕೆಟ್ಟ ಸ್ಥಿತಿಯ ರಸ್ತೆಗಳ ಕಾರಣದಿಂದ ಹಿಂದೇಟು ಹಾಕುತ್ತಿದ್ದಾರೆ' ಎಂಬುದು ಅಟಲ್ ಅಭಿಮಾನಿ ಸಂಘದ ಅಧ್ಯಕ್ಷ ವಿಷ್ಣು ನಾಯರ ಆರೋಪ.

> **ಗೋಕರ್ಣಕ್ಕೆ ಬರುವ ರಸ್ತೆ ಹೊಂಡದಿಂದಲೇ ತುಂಬಿದೆ. ರಸ್ತೆ ಯಾವುದು ಹೊಂಡ ಎಲ್ಲಿದೆ ಎಂದು ಗುರುತಿಸುವುದೇ ದೊಡ್ಡ ಕೆಲಸವಾಗುತ್ತಿದೆ.**
> **-ಸಾಯಿಪ್ರಕಾಶ ರೆಡ್ಡಿ ಪ್ರವಾಸಿಗ**

**ಪಟ್ಟಣದಲ್ಲಿ ಸಂಚಾರ ದಟ್ಟಣೆ ಹೆಚ್ಚು**

**ಹೊನ್ನಾವರ ತಾಲ್ಲೂಕಿನ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಚತುಷ್ಪಥ ಕಾಮಗಾರಿ ನಿಧಾನಗತಿಯಲ್ಲಿ ಸಾಗಿರುವುದು ಪಟ್ಟಣದಲ್ಲಿ ಸಂಚಾರ ದಟ್ಟಣೆ ಹೆಚ್ಚುವಂತೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿ 69ರಲ್ಲಿ ಬರುವ ಗೇರುಸೊಪ್ಪ ಸಮೀಪದ ಸೂಳೆಮುರ್ಕಿ ತಿರುವು ಅಪಾಯಕಾರಿಯಾಗಿದ್ದು ಅಪಘಾತ ಹೆಚ್ಚಿದೆ. ದಾಂಡೇಲಿ ನಗರದ ಪ್ರಮುಖ ರಸ್ತೆಗಳು ಗುಂಡಿ ಬಿದ್ದು ಸಂಚರಿಸಲು ಆಗದಷ್ಟು ಹಾಳಾಗಿ ಹೋಗಿವೆ.**

## ನ್ಯಾಯಾಲಯ ಹಾಲ್, ಕಛೇರಿ ಕೋಣೆ ಕಾಮಗಾರಿ

• ಉದಯವಾಹಿನಿ,ಚಿಂಚೋಳಿ

ನ್ಯಾಯಾಲಯ ಹಾಲ್,ಮತ್ತು ಕಛೇರಿ ಕೋಣೆಗಳು ಗುಣಮಟ್ಟದಿಂದ ಕಾಮಗಾರಿ ನಡೆಸಿ ಶೀಘ್ರದಲ್ಲೇ ನ್ಯಾಯಾಲಯಕ್ಕೆ ಹಸ್ತಾಂತರ ಮಾಡಬೇಕು ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಗುರುಗೌಡ ಪಾಟೀಲ ಹೇಳಿದರು.

ನಗರದ ನ್ಯಾಯಾಲಯದಲ್ಲಿ ಹಿರಿಯ ಶ್ರೇಣಿ ನ್ಯಾಯಾಲಯದ ಮೇಲೆ ಮೊದಲ ಹಂತದ ಕಾಮಗಾರಿ ನಿರ್ಮಿಸಲು ನ್ಯಾಯಾಂಗ ಇಲಾಖೆ ವತಿಯಿಂದ ಬಿಡುಗಡೆಯಾದ 1.33ಕೋಟಿ ರೂ.ಗಳ ಕಾಮಗಾರಿಗೆ ಅಡಿಗಲ್ಲು ನೇರವೇರಿಸಿ ಮಾತನಾಡಿದ ಅವರು,ಮೇಲಿನ ಹಳೆಯ ಗೋಡೆಗಳು ತೆರವುಗೊಳಿಸಿ ನೂತನವಾಗಿ ಗುಣಮಟ್ಟದ ಕಾಮಗಾರಿ ನಡೆಸಿ ಯಾವುದೇ ದೂರುಗಳು ಬರದಂತೆ ಕಾಮಗಾರಿ ನಡೆಸಬೇಕು ಮತ್ತು ಶೀಘ್ರದಲ್ಲೇ ಕಾಮಗಾರಿ ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ಹಸ್ತಾಂತರಿಸಬೇಕು ಇದರಿಂದ ಕಾರ್ಯಕಲಾಪಗಳು ಸುಗಮವಾಗಿ ನಡೆಸಲು ಅನುಕೂಲವಾಗುತ್ತದೆ ಎಂದು ಅಧಿಕಾರಿಗಳಿಗೆ ಗುತ್ತಿಗೆದಾರರಿಗೆ ಸೂಚಿಸಿದರು. ಪ್ರದಾನ ಸಿವಿಲ್ ನ್ಯಾಯಾಧೀಶ ದತ್ತುಕುಮಾರ ಜವಳಕರ್ ಮಾತನಾಡಿ ನ್ಯಾಯಾಲಯ ಹಾಲ್ ಮತ್ತು ಕಛೇರಿ ಕೋಣೆಗಳು ಅಧಿಕಾರಿಗಳು ಮತ್ತು ಗುತ್ತಿಗೆದಾರರು ಕಾಮಗಾರಿ ಮಾಡುವುದು ಚನ್ನಾಗಿ ಗುಣಮಟ್ಟದಿಂದ ಕೂಡಿರಬೇಕು,ಕ್ರೀಯಾಯೋಜನೆಯಂತೆ ಕೆಲಸ ಬೇಗ ಮಾಡಿ ಮುಗಿಸಬೇಕು ಎಂದರು.


☛ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕರು ಶಾಂತಕುಮಾರ ಪಾಟೀಲ,ವಕೀಲರ ಸಂಘದ ಅಧ್ಯಕ್ಷ ಶಶಿಕಾಂತ ಅಡಕಿ, ಶ್ರೀಮಂತ ಕಟ್ಟಿಮನಿ, ಸುದರ್ಶನ ಬಿರಾದಾರ, ವಿಶ್ವನಾಥ ಬೆನಕಿನ್,ಮಲ್ಲಿಕಾರ್ಜುನ, ದೇವೀಂದ್ರಪ್ಪ ಜಾಬೀನ್,ಸೂರ್ಯಕಾಂತ,ಸುನೀಲ ಸೋಲಾಪುರ, ಶ್ರೀನಿವಾಸ ಬಂಡಿ,ವಸಂತಕುಮಾರ ರಾಠೋಡ,ಅನೇಕರಿದ್ದರು.

## ಇದ್ದೂ ಇಲ್ಲದಂತಾದ ಎಪಿಎಂಸಿ ಉಪಮಾರುಕಟ್ಟೆ

• ಉದಯವಾಹಿನಿ ಅಳವಂಡಿ

ಜಿಲ್ಲೆಯಲ್ಲಿ ದೊಡ್ಡ ಹೋಬಳಿ ಕೇಂದ್ರವಾದ ಅಳವಂಡಿಯಲ್ಲಿ ಹಲವು ವರ್ಷಗಳ ಹಿಂದೆಯೇ ಸ್ಥಾಪನೆಯಾದ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ (ಎಪಿಎಂಸಿ ಉಪ ಮಾರುಕಟ್ಟೆ) ಇದ್ದೂ ಇಲ್ಲದಂತಾಗಿದೆ.

ಅಳವಂಡಿ ಗ್ರಾಮದಲ್ಲಿ ಎಪಿಎಂಸಿ ಉಪ ಮಾರುಕಟ್ಟೆ ಇದ್ದರೂ ಕೂಡ ಇಲ್ಲಿಯವರೆಗೂ ಯಾವುದೇ ವ್ಯಾಪಾರ ವಹಿವಾಟು ನಡೆದಿಲ್ಲ. ಇದು ಸುಮಾರು 4 ಎಕರೆ ಪ್ರದೇಶವನ್ನು ಹೊಂದಿದೆ. ಎರಡು ಗೋದಾಮು ಹಾಗೂ ದವಸ ಧ್ಯಾನ ಹರವಲು ಒಂದು ಕಟ್ಟೆ ನಿರ್ಮಾಣ ಮಾಡಿದ್ದಾರೆ. ಉಳಿದ ಜಾಗವು ಸಂಪೂರ್ಣ ಮುಳ್ಳಿನ ಕಂಟಿಗಳಿಂದ ಕೂಡಿದೆ. ವರ್ತಕರಿಗೆ ನಿವೇಶನ ಹಂಚಿಕೆ, ಮಳಿಗೆಗಳ ನಿರ್ಮಾಣ, ಮೂಲಸೌಕರ್ಯ, ಅಭಿವೃದ್ಧಿ ಹಾಗೂ ಸಿಬ್ಬಂದಿ ನಿಯೋಜನೆ ಸೇರಿದಂತೆ ಹಲವು ಕಾರ್ಯಗಳು ಕುಂಠಿತಗೊಂಡಿರುವುದರಿಂದ ಎಪಿಎಂಸಿ ಬಯಲು ಶೌಚದ ತಾಣವಾಗಿ ಮಾರ್ಪಟ್ಟಿದೆ.

ಎಪಿಎಂಸಿಯಲ್ಲಿ ಮುಳ್ಳಿನ ಕಂಟಿಗಳ ಬೆಳೆದು ನಿಂತಿವೆ. ಅದೇ ಮುಳ್ಳಿನ ಕಂಟಿಗಳು ಮರೆಯಲ್ಲಿ ಜನರು ಶೌಚಕ್ಕೆ ಹೋಗುತ್ತಿದ್ದಾರೆ. ಇದರಿಂದ ದುರ್ನಾತ, ಸೊಳ್ಳೆ ಉತ್ಪತ್ತಿ ಜಾಸ್ತಿಯಾಗಿದೆ. ಹಗಲು ಹಾಗೂ ರಾತ್ರಿ ವೇಳೆಯಲ್ಲಿ ಕುಡುಕರ ಹಾವಳಿ ಕೂಡ ಹೆಚ್ಚಾಗಿದೆ. ರಾತ್ರಿಯಂತೂ ಹೇಳತೀರದು. ಎಪಿಎಂಸಿ ಬಯಲು ಜಾಗದಲ್ಲಿ ಬಿಸಾಕಿದ ಖಾಲಿ ಬಾಟಲ್‌ಗಳು ಮತ್ತು ಪ್ಲಾಸ್ಟಿಕ್ ಪೌಚಗಳು ಇವೆ.


☛ಉದಯವಾಹಿನಿ ಚಿತ್ರ

ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಸೂಕ್ತವಾದ ಮಾರುಕಟ್ಟೆ ಇಲ್ಲದಂತಾಗಿದೆ. ಹಾಗಾಗಿ ಅಧಿಕಾರಿಗಳು ರೈತರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂಬುದು ಹೋಬಳಿ ರೈತರ ಒತ್ತಾಯವಾಗಿದೆ. ಎಪಿಎಂಸಿ ಆರಂಭವಾದರೆ ಇಲ್ಲಿನ ಹೋಬಳಿ ರೈತರಿಗೆ ಅನುಕೂಲವಾಗಲಿದೆ. ಆದರೆ ಎಪಿಎಂಸಿ ಇದೆಯೋ ಎಂಬ ಮಾಹಿತಿ ಕೂಡ ಇಲ್ಲಿನ ರೈತ ಸಮುದಾಯಕ್ಕೆ ಇಲ್ಲದಂತಾಗಿದೆ.

ಇದನ್ನು ನಿವಾರಿಸಲು ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಬೇಕಿದೆ ಎಂದು ಇಲ್ಲಿನ ಸಾರ್ವಜನಿಕರು ಆಗ್ರಹಿಸಿದ್ದಾರೆ.

**ಗ್ರಾಹಕರಿಗೆ ತೊಂದರೆ**

**ಹೋಬಳಿ ವಿವಿಧ ಗ್ರಾಮಗಳ ರೈತರು ತಾವು ಬೆಳೆದ ಪ್ರತಿ ಉತ್ಪನ್ನಗಳನ್ನು ಮಾರಾಟ ಮಾಡಲು ದೂರದ ಕೊಪ್ಪಳ, ಗದಗ, ಮುಂಡರಗಿ ಸೇರಿದಂತೆ ಅನೇಕ ಪಟ್ಟಣಗಳಿಗೆ ಹೋಗುವ ಅನಿವಾರ್ಯತೆ ರೈತರಿಗೆ ಎದುರಾಗಿದ್ದು, ಇದರಿಂದ ರೈತರು, ವ್ಯಾಪಾರಸ್ಥರಿಗೆ ಹಾಗೂ ಗ್ರಾಹಕರಿಗೆ ತೊಂದರೆಯಾಗಿದೆ.**

## ಪಟೇಲರ ಕನಸು ನನಸಾಗಿಸುವ ಜವಾಬ್ದಾರಿ: ಕಾರಜೋಳ



☛ಉದಯವಾಹಿನಿ ಚಿತ್ರ

• ಉದಯವಾಹಿನಿ, ದಾವಣಗೆರೆ

ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಬಾಯ್ ಪಟೇಲರು ಭಾರತವನ್ನು ಒಂದುಗೂಡಿಸಿದ್ದಾರೆ. ಇದೀಗ ಅವರ ಕನಸುಗಳನ್ನು ಒಂದು ನನಸಾಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ' ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಹೇಳಿದರು. ಇಲ್ಲಿನ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಬಿಜೆಪಿ ಜಿಲ್ಲಾ ಘಟಕದಿಂದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ 150ನೇ ಜನ್ಮ ದಿನಾಚರಣೆ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಏಕತಾ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು. ಭಾರತದ ಏಕೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದ್ದ ವಲ್ಲಭಬಾಯ್ ಪಟೇಲರ ಜನ್ಮದಿನದ ಸ್ಮರಣಾರ್ಥವಾಗಿ ದೇಶಾದ್ಯಂತ ಕಾರ್ಯಕ್ರಮ ನಡೆಸಲಾಗುತ್ತಿದೆ' ಎಂದು ಹೇಳಿದರು. ಯುವ ಜನರು ದೇಶದ ಏಕತೆ, ಐಕ್ಯತೆ ಮತ್ತು ಘನತೆಯನ್ನು ಎತ್ತಿ ಹಿಡಿಯುವ ಮೂಲಕ ಭಾರತ ವಿಶ್ವದ ಹಿರಿಯಣ್ಣ ನಾಗಬೇಕು ಎಂಬ ಕನಸನ್ನು ಹೊತ್ತು ಕೆಲಸ ಮಾಡಬೇಕಿದೆ' ಎಂದರು.

ಪಟೇಲರು ಸ್ವಾತಂತ್ರ್ಯ ನಂತರ ಹರಿದು ಹಂಚಿ ಹೋಗಿದ್ದ 565 ಸಂಸ್ಥಾನಗಳ ರಾಜ, ಮಹಾ ರಾಜರನ್ನು ಒಪ್ಪಿಸಿ ಭಾರತದೊಂದಿಗೆ ವಿಲೀನಗೊಳಿಸಿದರು. ವಿಲೀನಕ್ಕೆ ಒಪ್ಪದವರನ್ನು ಬಗ್ಗು ಬಡಿದು ದೇಶಕ್ಕೆ ಅರ್ಥಪೂರ್ಣವಾದ ಸ್ವಾತಂತ್ರ್ಯವನ್ನು ತಂದುಕೊಟ್ಟರು' ಎಂದರು. ಎಲ್ಲರೂ ಒಗ್ಗೂಡಿ ದೇಶವನ್ನು ಕಟ್ಟುವುದೇ ಏಕತಾ ಪಾದಯಾತ್ರೆಯ ಮೂಲ ಉದ್ದೇಶವಾಗಿದೆ. ವಿಶೇಷವಾಗಿ ಯುವಜನರು ಈ ಬಗ್ಗೆ ಹೆಚ್ಚು ತಿಳಿದುಕೊಂಡು ದೇಶದ ಅಭಿವೃದ್ಧಿಗೆ ಕಟಿ ಬದ್ಧರಾಗಬೇಕು. ದೂರ ದೃಷ್ಟಿಯೊಂದಿಗೆ ಕೇಂದ್ರ ಸರ್ಕಾರ ಈ ಕಾರ್ಯಕ್ರಮ ಆಯೋಜಿಸಿರುವುದು ಅರ್ಥಪೂರ್ಣವಾಗಿದೆ' ಎಂದು ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಪಿ.ನಾಗರಾಜಪ್ಪ ಹೇಳಿದರು.

ಎಸ್.ಎ.ರವೀಂದ್ರನಾಥ್, ಎಂ.ಪಿ.ರೇಣುಕಾಚಾರ್ಯ, ವಿಧಾನ ಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಾಜಶೇಖರ್, ಮಾಜಿ ಶಾಸಕ ಎನ್.ಬಸವರಾಜ್ ನಾಯ್ಕ ಇತರರು ಉಪಸ್ಥಿತರಿದ್ದರು.

## 16ನೇ ಶತಮಾನದಲ್ಲಿ ಕನಕದಾಸರು ಜಾತಿ ವ್ಯವಸ್ಥೆ ಅಂಕುಡೊಂಕು ತಿದ್ದಲು ತಮ್ಮ ಕೀರ್ತನೆಗಳ ಮೂಲಕ ಶ್ರಮಿಸಿದರು

• ಉದಯವಾಹಿನಿ, ಚಿಂಚೋಳಿ

16ನೇ ಶತಮಾನದಲ್ಲಿ ಭಕ್ತ ಕನಕದಾಸರು ಸಮಾಜದಲ್ಲಿರುವ ಅಂಕುಡೊಂಕುಗಳು ಜಾತಿ ವ್ಯವಸ್ಥೆ ಹೋಗಲಾಡಿಸಲು ಅವರ ಕೀರ್ತನೆಗಳ ಮೂಲಕ ಶ್ರಮಿಸಿದರು ಎಂದು ಗೋಪಾಲ ಗಾರಂಪಳ್ಳಿ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಹಸರಗುಂಡಗಿ ಗ್ರಾಮದಲ್ಲಿ ದಾಸ ಶ್ರೇಷ್ಠ ಭಕ್ತ ಕನಕದಾಸರ 538ನೇ ಜಯಂತ್ಯೋತ್ಸವ ಕಾರ್ಯಕ್ರಮ ಮಾತನಾಡಿದ ಅವರು, ಹಾಲುಮತ ಸಮಾಜ ಅತ್ಯಂತ ಶ್ರೇಷ್ಠ ಸಮಾಜವಾಗಿದ್ದು ಕನಕದಾಸರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು ಸಮಾಜದ ಬಾಂಧವರು ಪಾಲಕರು ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದರು.

ವಕೀಲ ಹಣಮಂತ ಹಿರೇಮನಿ ಐನೋಳ್ಳಿ ಮಾತನಾಡಿ ಪಾಲಕ ಪೋಷಕರು ಮಕ್ಕಳ ಕೈಯಲ್ಲಿ ಮೊಬೈಲ್ ಕೊಡದೆ ಪುಸ್ತಕ ಕೊಡಿ ಮಕ್ಕಳ ಕಲಿಕೆಯ ಕಡೆ ಹೆಚ್ಚಿನ ಗಮನಹರಿಸಿ,ದಾಸ ಶ್ರೇಷ್ಠ ಭಕ್ತ ಕನಕದಾಸರು ಸಮಾಜದಲ್ಲಿರುವ ಹಿಂದಿನ ಕಾಲದಲ್ಲಿನ ಜಾತಿ ವ್ಯವಸ್ಥೆಯನ್ನು ತಮ್ಮ ಕೀರ್ತನೆಗಳ ಮೂಲಕ ಸಮಾಜಕ್ಕೆ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದರು,ಕನಕದಾಸರು ಒಂದೇ ಜಾತಿಗೆ ಸೀಮಿತವಾಗಿಲ್ಲ ಈಡಿ ಮಾನವ ಕೂಲಕ್ಕೆ ಸೀಮೀತರಾಗಿದ್ದಾರೆ ಎಂದರು. ರಾಜಶೇಖರ ನಿಪ್ಪಾಣಿ, ಶ್ರೀಮಂತ ಚೇಂಗಟಾ, ಅಶೋಕ ಕೋರಿ,ಶಾಂತಕುಮಾರ ಲಾಲಸಿರಿ, ವೀರಶೇಟ್ಟಿ ಚಿಂಚೋಳಿ, ಜಗನ್ನಾಥ ಭೂತಾಳಿ,ಮಾಪಣ್ಣ ಖಾಶೆಂಪೂರ, ಸೂರ್ಯಕಾಂತ ಬೀರನಳ್ಳಿ, ಗುಂಡಪ್ಪ ಸಾಲೆಬೀರನಳ್ಳಿ, ಶಿವಶರಣ ಚಿಂಚೋಳಿ, ಬಕ್ಕಪ್ಪ ಬೇಮಳಗಿ, ಜಗದೇವಿ ಗೋಪಳ್ಳಿ, ಕುರುಬ ಸಮಾಜದ ಅಧ್ಯಕ್ಷ ಹಣಮಂತ ಪೂಜಾರಿ ಚಂದನಕೇರಾ, ಸಂಗಮೇಶ ಕನಕಟ್ಟಿ, ಮಾರುತಿ ಗಂಜಗಿರಿ,ಅಮೃತ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು,


☛ಉದಯವಾಹಿನಿ ಚಿತ್ರ

## ರೈತರ ತಲಾ ಆದಾಯ ಕಡಿಮೆವಿದ್ದು, ಹೆಚ್ಚಳಕ್ಕೆ ರೈತರು ನೀರಾವರಿಗೆ ಒತ್ತು ನೀಡಬೇಕು

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಾ ಸೇರಿದಂತೆ ಜಿಲ್ಲೆಯಾದ್ಯಂತ ರೈತರ ತಲಾ ಆದಾಯ ಅತ್ಯಂತ ಕಡಿಮೆಯಿದೆ, ಆದಾಯ ಹೆಚ್ಚಳವಾಗಬೇಕಾದರೆ ರೈತರು ನೀರಾವರಿಗೆ ಒತ್ತು ನೀಡಿ ಹೊಸ ಹೊಸ ಬೆಳೆಗಳನ್ನು ಬೆಳೆಸಲು ಮುಂದಾಗಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಅಣವಾರ ಸಲಹೆ ನೀಡಿದರು.

ತಾಲ್ಲೂಕಿನ ಅಣವಾರ ಗ್ರಾಮದ ಹನುಮಾನ ದೇವಾಲಯ ಸಮಿತಿ ವತಿಯಿಂದ ಹಮ್ಮಿಕೊಂಡ 15ನೇ ಕಾರ್ತಿಕ ದೀಪೋತ್ಸವ ಹಾಗೂ 2025ನೇ ಸಾಲಿನ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು,ನನಗೆ ನನ್ನ ಹುಟ್ಟೂರಿನಲ್ಲಿ ನೀವು ನೀಡಿದ ಸೇವಾರತ್ನ ಪ್ರಶಸ್ತಿ ನನಗೆ ಈವರೆಗೆ ಸಂದಿರುವ ಸನ್ಮಾನ ಮತ್ತು ಪ್ರಶಸ್ತಿಗಳಲ್ಲಿಯೇ ಅತ್ಯಂತ ದೊಡ್ಡದು,ನನ್ನ ಮೇಲೆ ಮಾತೃಭೂಮಿಯ ಋಣವಿದೆ ಅದನ್ನು ತೀರಿಸಲು ಜಿಲ್ಲೆಯಲ್ಲಿ ರೈತರ ಸೇವೆ ಮಾಡುತ್ತಿದ್ದೇನೆ ಎಂದರು.

ಕಲಬುರಗಿಯ ಸಬ್ ಇನ್ಸ್‌ಪೆಕ್ಟರ್ ಯಶೋಧಾ ಕಟಕೆ ಮಾತನಾಡಿ ಪ್ರತಿಯೊಬ್ಬರು ಸತ್ಯದ ದಾರಿಯಲ್ಲಿ ಸಾಗಬೇಕು ಸುಳ್ಳು ಹೇಳುವುದು,ಚಾಡಿ ನಿಂದನೆಗಳಿಂದ ದೂರವಿರಬೇಕು, ಭಕ್ತಿ ಮತ್ತು ಅಧ್ಯಾತ್ಮ ಮಾನವ ಜೀವನದ ಸಾರ್ಥಕತೆಗೆ ಅತಿ ಅಗತ್ಯ,ಭಕ್ತಿ ಪರಿಶುದ್ಧವಾಗಿರಬೇಕು ಅದು ನೀರಿನ ಝರಿಯಂತೆ ಸದಾ ಹರಿಯುತ್ತಿರಬೇಕು,ಪೂಜೆ, ಧ್ಯಾನ, ಜಪತಪ,ಭಜನೆ ಭಕ್ತಿ ಮಾರ್ಗವಾದರೆ,ಅಧ್ಯಾತ್ಮ ಜ್ಞಾನ, ಏಕಾಗ್ರತೆ, ನಿಸ್ವಾರ್ಥಭಾವ, ಸಾಮಾಜಿಕ ಕಾಳಜಿ ಧರ್ಮ ಸಂಸ್ಕಾರ ಬೆಳೆಸುತ್ತದೆ. ಮಕ್ಕಳಿಗೆ ತಂದೆ ತಾಯಿಗಳೇ ನಿಜವಾದ ಹೀರೋಗಳು, ಸಿನಿಮಾಗಳ ನಟರು ಹೋರೋಗಳಲ್ಲ,ಗಡಿಕಾಯುವ ಯೋಧರು,ಸಮರ್ಪಣಾಭಾವದಿಂದ ಜ್ಞಾನಧಾರೆ ಎರೆಯುವ ಶಿಕ್ಷಕರು,ನಮಗೆಲ್ಲರಿಗೂ ಅನ್ನ ನೀಡುವ ರೈತರು ಹೀರೋಗಳು ಎಂದರು.


☛ಉದಯವಾಹಿನಿ ಚಿತ್ರ

**ಸೇವಾರತ್ನ ಪ್ರಶಸ್ತಿ**

**ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಅಣವಾರ ಮತ್ತು ನಿವೃತ್ತ ವೈದ್ಯಾಧಿಕಾರಿ ಪೋಲಕಪಳ್ಳಿಯ ಡಾ.ಜಗದೀಶ್ಚಂದ್ರ ಬುಳ್ಳಾ ಅವರಿಗೆ 2025ನೇ ಸಾಲಿನ ಸೇವಾರತ್ನ ಪ್ರಶಸ್ತಿಯನ್ನು ಕರುಣೇಶ್ವರ ಶಿವಾಚಾರ್ಯರು ಮತ್ತು ಅಭಿನವ ರಾಚೋಟೇಶ್ವರ ಶಿವಾಚಾರ್ಯರು, ಅಣವಾರ ಗ್ರಾಮದ ಮಾರುತೇಶ್ವರ ದೇವಾಲಯ ಸಮಿತಿ ಗ್ರಾಮಸ್ಥರು ಪ್ರದಾನ ಮಾಡಿದರು.**

ಪತ್ರಕರ್ತ ಜಗನ್ನಾಥ ಶೇರಿಕಾರ ಮಾತನಾಡಿ ಜಿಲ್ಲೆಯ ರೈತರಿಗೆ ಬೆಳೆ ಹಾನಿಯ ಪರಿಹಾರದ ಜತೆಗೆ ಬೆಳೆ ವಿಮೆಯ ಪರಿಹಾರ ಧನ ಗರಿಷ್ಠ ಪ್ರಮಾಣದಲ್ಲಿ ಕೊಡಿಸುವುದರೊಂದಿಗೆ ಜಿಲ್ಲೆಯಲ್ಲಿ ರೈತರ ಆದಾಯ ಹೆಚ್ಚಿಸಲು ಅವಿರತ ಪ್ರಯತ್ನಿಸುತ್ತಿರುವ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಮತ್ತು ಮೂರು ದಶಕಗಳಿಂದ ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆ ಸಲ್ಲಿಸುತ್ತಿರುವ ಜನರ ನೆಚ್ಚಿನ ವೈದ್ಯ ಡಾ.ಜಗದೀಶ್ಚಂದ್ರ ಬುಳ್ಳಾ ಅವರಿಗೆ ಸೇವಾರತ್ನ ಪ್ರಶಸ್ತಿ ನೀಡುವ ಮೂಲಕ ಅಣವಾರ ಗ್ರಾಮಸ್ಥರು ಇತರೆ ಗ್ರಾಮಗಳಿಗೆ ಮಾದರಿಯಾಗಿದ್ದಾರೆ, ಸಮದ್ ಪಟೇಲ್ ಹಾಗೂ ಡಾ.ಜಗದೀಶ್ಚಂದ್ರ ಬುಳ್ಳಾ ಇಬ್ಬರು ಇಂದಿನ ಸಮಾಜಕ್ಕೆ ಮಾದರಿಯಾಗಿದ್ದಾರೆ,ಮಕ್ಕಳಿಗೆ ಇವರೇ ಪ್ರೇರಣೆಯಾಗಲಿದ್ದಾರೆ ಎಂದರು. ನಿಡಗುಂದಾದ ಕಂಚಾಳಕುಂಟಿ ನಂದೀಶ್ವರ ಮಠದ ಷ.ಬ್ರ.ಪೂಜ್ಯ ಕರುಣೇಶ್ವರ ಶಿವಾಚಾರ್ಯರು ಹಾಗೂ ಚಂದನಕೇರಾದ ಬೃಂಗಿ ಪಾಚೇಶ್ವರ ಕಟ್ಟಿಮಠದ ಪೂಜ್ಯ ಷ.ಬ್ರ. ಅಭಿನವ ರಾಚೋಟೇಶ್ವರ ಶಿವಾಚಾರ್ಯರು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ ಶಿವನನ್ನು ಒಲಿಸಿಕೊಳ್ಳಲು ಅಧ್ಯಾತ್ಮ ಮತ್ತು ಭಕ್ತಿ ಎರಡೂ ಬೇಕು, ಜೀವನದ ಅಂಧಕಾರ ಕಳೆಯಲು ಜ್ಞಾನದ ದೀಪಬೆಳಗುವಂತೆ ನೀವು ಅಂತಕರಣದ ದೀಪ ಬೆಳಗಿ ಧರ್ಮ ಕಾರ್ಯದಲ್ಲಿ ತೊಡಗಬೇಕು ಎಂದರು. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ರಾಚೋಟಿ,ಬಸವಂತರೆಡ್ಡಿ, ಶರಣಬಸಪ್ಪ ಮಡಿವಾಳ,ವಿಶ್ವನಾಥರೆಡ್ಡಿ, ಸುರೇಶ ಬಟಗೇರಿ, ಶಂಕರ ತೊಟ್ನಳ್ಳಿ, ಚಾಂದಪಟೇಲ ಇದ್ದರು.

## ಯರಬಳ್ಳಿ ಪಿಎಂಶ್ರೀ ಶಾಲೆ ಪೋಷಕರ ಮಹಾಸಭೆ

### ಪೋಷಕರ ಸಭೆಗಳು ಶಾಲೆ ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರಲಿ: ತಿಪ್ಪೇಸ್ವಾಮಿ. ಎಸ್

• ಉದಯವಾಹಿನಿ ಚಿತ್ರದುರ್ಗ

ಶಿಕ್ಷಕರು ಮತ್ತು ಪೋಷಕರು ಇಬ್ಬರೂ ಮಕ್ಕಳ ಬದುಕಿನ ಚಕ್ಕಡಿಯ ಎರಡು ಚಕ್ರಗಳಿದ್ದಂತೆ ಪೋಷಕರ ಮತ್ತು ಶಿಕ್ಷಕರ ಸಭೆಗಳು ಕೇವಲ ವಾದವಿವಾದಗಳಿಗೆ ಸೀಮಿತವಾಗದೆ ಆರೋಗ್ಯಪೂರ್ಣ ಚರ್ಚೆಗಳ ಮೂಲಕ ಮಕ್ಕಳ ಸಮಗ್ರ ಬೆಳವಣಿಗೆಗೆ ಸಹಾಯಕ ಸವಾಗುವಂತಿರಬೇಕು ಎಂದು ಯರಬಳ್ಳಿ ಸರ್ಕಾರಿ ಪಿಎಂಶ್ರೀ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ತಿಪ್ಪೇಸ್ವಾಮಿ ಟಿ. ಅಭಿಪ್ರಾಯ ಪಟ್ಟಿದ್ದಾರೆ.

ಹಿರಿಯೂರು ತಾಲ್ಲೂಕು ಯರಬಳ್ಳಿ ಗ್ರಾಮದ ಸರ್ಕಾರಿ ಪಿಎಂಶ್ರೀ ಶಾಲೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಕ್ಕಳ ದಿನಾಚರಣೆ ಹಾಗೂ ಶಿಕ್ಷಕರು ಪೋಷಕರ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ಪೋಷಕರಾದವರು ಮನೆಯಲ್ಲಿ ಮಕ್ಕಳಿಗೆ ಶೈಕ್ಷಣಿಕ ಮತ್ತು ಭಾವನಾತ್ಮಕ ಬೆಂಬಲ ಒದಗಿಸುವ ಮೂಲಕ ಮಕ್ಕಳು ಆತ್ಮವಿಶ್ವಾಸ, ಸಕಾರಾತ್ಮಕ ವ್ಯಕ್ತಿತ್ವ ಸಮಾಜಿಕ ಕೌಶಲ್ಯಗಳನ್ನು ಬೆಳೆಸಲು ಹಾಗೂ ಶಿಕ್ಷಕರು ಶಾಲೆಯಲ್ಲಿ ಮಕ್ಕಳ ಜ್ಞಾನ, ಶಿಸ್ತು ಮತ್ತು ಸಮಾಜಮುಖಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಮೂಲಕ ಮಕ್ಕಳ ಸಮಗ್ರ ಅಭಿವೃದ್ಧಿಗೆ ನೆರವಾಗುವ ಮೂಲಕ ಮಕ್ಕಳ ಬದುಕನ್ನು ರೂಪಿಸಬೇಕಿದೆ ಎಂದು ಹೇಳಿದರು.

**ಸೌಲಭ್ಯಗಳ ಕುರಿತು ಮಾಹಿತಿ**

ಇದಕ್ಕೂ ಮೊದಲು ಸಭೆಯ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಯರಬಳ್ಳಿ ಗ್ರಾಮ ಪಂಚಾಯತಿ ಪಿಡಿಒ ಮಂಜುನಾಥ್ ಯರಬಳ್ಳಿ ಪಿಎಂಶ್ರೀ ಶಾಲೆ ಇತರೆ ಯಾವುದೇ ಶಾಲೆಗೆ ಹೋಲಿಸಿಕೊಂಡರು ಇಲ್ಲಿ ಮಕ್ಕಳಿಗೆ ಭೌತಿಕ, ಭಾವನಾತ್ಮಕ , ಸಾಮಾಜಿಕ ಭದ್ರತೆಯನ್ನು ನೀಡುವಲ್ಲಿ ಶಾಲಾ ಶಿಕ್ಷಕ ವೃಂದ ಯಶಸ್ವಿಯಾಗಿದೆ ಮಕ್ಕಳಿಗೆ ಆತ್ಮವಿಶ್ವಾಸ ಮತ್ತು ಹೊಸದನ್ನು ಕಲಿಯುವ ಪ್ರೇರಣೆಯನ್ನು ಉಂಟುಮಾಡುವಂತೆ ವಾತಾವರಣ ಸೃಷ್ಟಿಸಲಾಗಿದೆ ತಾಲ್ಲೂಕಿನ ಸಾಕಷ್ಟು ಸರ್ಕಾರಿ ಶಾಲೆಗಳಲ್ಲಿ ಕಲಿಕೆಯ ಎಲ್ಲಾ ಸೌಲಭ್ಯಗಳಿದ್ದರೂ ಮಕ್ಕಳ ಸಂಖ್ಯೆ ವಿರಳವಾಗಿವೆ ಯರಬಳ್ಳಿ ಸರ್ಕಾರಿ ಶಾಲೆಯಲ್ಲಿ 350ಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಶಾಲೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ದೈಹಿಕ ಶಿಕ್ಷಕ ರಾಜಪ್ಪ ಅವರ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭಗೊಂಡ ಸಭೆಗೆ ಸ.ಶಿ. ಶ್ರೀಮತಿ ವಿಜಯಮ್ಮ ಎಲ್ಲರನ್ನೂ ಸ್ವಾಗತಿಸಿದರು, ಆಂಗ್ಲಭಾಷಾ ಶಿಕ್ಷಕ ಮಂಜುನಾಥ್ ಶಾಲೆಯಲ್ಲಿ ದೊರೆಯುತ್ತಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು, ಸಭೆಯಲ್ಲಿ ಸಹ ಶಿಕ್ಷಕರಾದ ದರ್ಶನ್, ಮಾರುತಿ, ಶಾರದಮ್ಮ, ಅನಸೂಯಮ್ಮ, ಶಂಷಾದ್ ಬೇಗಂ, ಲಿಂಗರಾಜ್, ಯೋಗ ಶಿಕ್ಷಕ ರವಿ ಕೆ.ಅಂಬೇಕರ್ ಭಾಗವಹಿಸಿದ್ದರು.

ಇದೇ ಸಂಧರ್ಭದಲ್ಲಿ ಸಭೆಯಲ್ಲಿ ಎಲ್ಲರಿಗೂ ಭಾರತ ಸಂವಿಧಾನದ ಪೀಠಿಕೆ ಬಂಧಿಸಲಾಯಿತು, ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು.


☛ಉದಯವಾಹಿನಿ ಚಿತ್ರ

> **ಗ್ರಾಮಸ್ಥರು ಹಾಗೂ ಮಕ್ಕಳ ಪೋಷಕರ ಸಹಕಾರದಿಂದ ಇಂದು ಯರಬಳ್ಳಿ ಸರ್ಕಾರಿ ಪಿಎಂಶ್ರೀ ಶಾಲೆ ಉತ್ತಮ ಮಾದರಿ ಶಾಲೆಯಾಗಿ ಹೆಸರು ಗಳಿಸಿದೆ ಪೋಷಕರ ಸಭೆಯಲ್ಲಿ ಶಾಲೆಯ ಎಲ್ಲಾ ಮಕ್ಕಳ ತಂದೆ ತಾಯಿಯರು ತಪ್ಪದೆ ಭಾಗವಹಿಸಬೇಕು ಪ್ರತಿಯೊಬ್ಬ ಪೋಷಕನೂ ಸಭೆಗೆ ಕಡ್ಡಾಯವಾಗಿ ಹಾಜರಾಗುವಾಗ ತಮ್ಮ ಮಕ್ಕಳೊಂದಿಗಡ ಚರ್ಚಿಸಿ ಪೂರ್ವ ತಯಾರಿ ಮಾಡಿಕೊಂಡು ಬಂದು ಮಕ್ಕಳ ಬಗ್ಗೆ ಸೂಕ್ತ ಪ್ರಶ್ನೆಗಳನ್ನು ಕೇಳಬೇಕು. ಇದರಿಂದ ಪೋಷಕ-ಶಿಕ್ಷಕರ ನಡುವೆ ಸಮನ್ವಯ ಸುದೃಢವಾಗುತ್ತದೆ ಆಗ ಮಕ್ಕಳು ಹಾಗೂ ಶಾಲೆಯ ಪ್ರಗತಿಗೆ ದಾರಿದೀಪವಾಗುತ್ತದೆ.**
> **-ಶ್ರೀಮತಿ ಸವಿತ, ಶಾಲೆಯ ಮುಖ್ಯ ಶಿಕ್ಷಕಿ**

## ಮಿನಿ ನ್ಯೂಸ್

### ದಲಾಯಿ ಲಾಮಾ ಸ್ವಾಗತಕ್ಕೆ ಸಿದ್ಧತೆ

• ಉದಯವಾಹಿನಿ ಮುಂಡಗೋಡ

ತಾಲ್ಲೂಕಿನ ಟಿಬೆಟಿಯನ್ ಕ್ಯಾಂಪ್‌ಗೆ ಡಿ.12ರಂದು ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರು ಆಗಮಿಸುವ ನಿಮಿತ್ತ ಬೌದ್ಧ ಗುರುವಿನ ಸ್ವಾಗತಕ್ಕೆ ಕ್ಯಾಂಪ್‌ನಲ್ಲಿ ಭರದ ಸಿದ್ಧತೆ ನಡೆದಿದೆ.

ಇಲ್ಲಿಯ ಟಿಬೆಟಿಯನ್ ಕ್ಯಾಂಪ್‌ನಲ್ಲಿ ದಲೈ ಲಾಮಾ ಅವರು ಒಂದೂವರೆ ತಿಂಗಳು ವಾಸ್ತವ್ಯ ಹೂಡಲಿದ್ದು, ಕ್ಯಾಂಪ್ ನಂ.6ರ ಕಾಂಪೌಂಡ್ ಗೋಡೆಗೆ ಬಣ್ಣ. ಉದ್ಯಾನಕ್ಕೆ ಹೊಸ ರೂಪ, ಕಾರಂಜಿ ನಿರ್ಮಾಣ ಸೇರಿದಂತೆ ವಿವಿಧ ಕಾರ್ಯಗಳಿಂದ 'ಮಿನಿ ಟಿಬೇಟ್' ಸಿದ್ದಗೊಳ್ಳುತ್ತಿದೆ. ಅರುಣಾಚಲ, ಹಿಮಾಚಲ, ಲಡಾಖ್ ಭಾಗದ ಬೌದ್ಧ ಅನುಯಾಯಿಗಳು ಈಗಾಗಲೇ ಕ್ಯಾಂಪ್‌ಗೆ ಆಗಮಿಸುತ್ತಿದ್ದು, ವಲಸೆ ಹೋದ ಸ್ಥಳೀಯ ಟಿಬೆಟಿಯನ್‌ರು ಮರಳಿ ಬರುತ್ತಿದ್ದಾರೆ. **ಕೂಲಿ ಕಾರ್ಮಿಕರಿಗೆ ಕೈ ತುಂಬ ಕೆಲಸ:** ಟಿಬೆಟಿಯನ್ ಕ್ಯಾಂಪ್‌ನಲ್ಲಿ ಪೇಂಟರ್, ಕಾರ್ಪೆಂಟರಿ, ಕಟ್ಟಡ ಕಾರ್ಮಿಕರಿಗೆ ಬೇಡಿಕೆ ಹೆಚ್ಚಿದ್ದು, ನಿಗದಿತ ಅವಧಿಯೊಳಗೆ ಕೆಲಸ ಮುಗಿಸಲು ಹಗಲು ರಾತ್ರಿ ಕೆಲಸ ಮಾಡುವ ಅನಿವಾರ್ಯತೆಯಿದೆ' ಎಂದು ಕಾರ್ಮಿಕ ಪೂರೈಕೆದಾರ ಮಂಜುನಾಥ ಹೇಳಿದರು.

### ಶಿಕ್ಷಣದ ಜೊತೆಗೆ ಕಲೆ ಮೈಗೂಡಿಸಿಕೊಳ್ಳಿ

• ಉದಯವಾಹಿನಿ ಕುಮಟಾ

ವ್ಯಕ್ತಿಯ ಜೀವನವನ್ನು ಬದಲಾಯಿಸಿ ಹೊಸದೊಂದು ಲೋಕ ಕೊಂಡೊಯ್ಯುವ ಸಾಮರ್ಥ್ಯವನ್ನು ಕಲೆ ಹೊಂದಿದೆ. ಜೀವನದಲ್ಲಿ ಶಿಕ್ಷಣದೊಂದಿಗೆ ಕಲೆ ಮೈಗೂಡಿಸಿಕೊಂಡರೆ ಜೀವನಕ್ಕೆ ಹೊಸ ಅರ್ಥ ದೊರೆಯುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಉಮಾಶ್ರೀ ಹೇಳಿದರು.

ಪಟ್ಟಣದ ಸರಸ್ವತಿ ಪದವಿ ಪೂರ್ವ ಕಾಲೇಜಿನಲ್ಲಿ ಸವಿಧಾತ್ರಿ ಅಕಾಡೆಮಿ ಹಾಗೂ ಕೊಂಕಣ ಎಜುಕೇಶನ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಕಲಾಂಜಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಂಜಾಟದ ಬದುಕಿಗೆ ಖುಷಿ ಕೊಡುವ ಉತ್ತಮ ಕಲಾವಿದ ಒಂದು ರೀತಿಯಲ್ಲಿ ಮಾನಸಿಕ ವೈದ್ಯ ಎಂದರು.

ರಂಗಕರ್ಮಿ ಕಾಸರಗೋಡು ಚಿನ್ನ ಮಾತನಾಡಿ, ಶಾಲಾ-ಕಾಲೇಜು ಪರೀಕ್ಷೆಗಳಲ್ಲಿ ಉತ್ತೀರ್ಣರಾಗದ ಎಷ್ಟೋ ಜನರು ಕಲೆಯಲ್ಲಿ ಉನ್ನತ ಸಾಧನೆ ಮಾಡಿದ ನಿದರ್ಶನಗಳಿವೆ. ಬದುಕಿನ ಪ್ರತಿ ತಿರುವಿನಲ್ಲೂ ಯಶಸ್ಸಿಗೆ ಹೊಸ ಮಾರ್ಗ ಹೊಳೆಯುತ್ತವೆ' ಎಂದರು.

### ಬಡವರ ಕಷ್ಟಕ್ಕೆ ಸ್ಪಂದಿಸಿದ ಬಿ.ನಾಗೇಂದ್ರ

• ಉದಯವಾಹಿನಿ ಬಳ್ಳಾರಿ

ಇತ್ತೀಚಿಗೆ ಹಾಸನ ತಾಲ್ಲೂಕಿನ ಮೊಸಳೆ ಹೊಸಳ್ಳಿ ಸರ್ಕಾರಿ ಕಾಲೇಜ್ ವಿದ್ಯಾರ್ಥಿಗಳು ಗಣೇಶ ವಿಸರ್ಜನೆ ನೋಡುವ ಸಂದರ್ಭದಲ್ಲಿ ನಡೆದ ಭೀಕರವಾದ ದುರ್ಘಟನೆಯಲ್ಲಿ ಬಳ್ಳಾರಿಯ ಅಂತಿಮ ವರ್ಷದ ಇಂಜಿನಿಯರಿಂಗ್ ಪದವಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಯಾದ ಕೆ.

ಪ್ರವೀಣ್ ಕುಮಾರ್ ಮೃತ ಹೊಂದಿರುವ ವಿಷಯವನ್ನು ತಿಳಿದು ಬಳ್ಳಾರಿ ಗ್ರಾಮಾಂತರ ಶಾಸಕರಾದ ಬಿ. ನಾಗೇಂದ್ರರವರ ಸೂಚನೆಯ ಮೇರೆಗೆ ಅವರ ಆಪ್ತರು ನೊಂದವರ ಕುಟುಂಬಕ್ಕೆ ತೆರಳಿ ಸಾಂತ್ವಾನವನ್ನು ತಿಳಿಸಿ,ಸರ್ಕಾರವು ಮತ್ತು ಶಾಸಕರು ತಮ್ಮ ಕಷ್ಟಕ್ಕೆ ಇರುವುದಾಗಿ ಧೈರ್ಯವನ್ನು ತುಂಬಿದ್ದರು, ಅದರಂತೆ ಸರ್ಕಾರದಿಂದ ಶಾಸಕರು ತ್ವರಿತವಾಗಿ ಪರಿಹಾರವನ್ನು ಈಗಾಗಲೇ ನೊಂದ ಕುಟುಂಬಕ್ಕೆ ಒದಗಿಸಿ ಕೊಟ್ಟಿದ್ದಾರೆ.

ಮಾಜಿ ಸಚಿವರಾದ ಹಾಗೂ ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಶಾಸಕರಾದ ಮಾನ್ಯ ಬಿ. ನಾಗೇಂದ್ರರವರ ಸೂಚನೆಯ ಮೇರೆಗೆ ಮಹಾನಗರ ಪಾಲಿಕೆ ಸದಸ್ಯರು ಮತ್ತು ಕಾಂಗ್ರೆಸ್ ಮುಖಂಡರುಗಳು ನೊಂದ ಬಡ ಕುಟುಂಬದವರ ಮನೆಗೆ ತೆರಳಿ ಕಷ್ಟಸುಖಗಳ ವಿಚಾರಿಸಿ ಮೃತಪಟ್ಟ ವಿದ್ಯಾರ್ಥಿಯ ತಾಯಿಯಾದ ಕೆ. ಸುಶೀಲಮ್ಮನವರಿಗೆ ಬಳ್ಳಾರಿ ಗ್ರಾಮಾಂತರ ಶಾಸಕರಾದ ಬಿ. ನಾಗೇಂದ್ರ ರವರು ನೀಡಿರುವ ಒಂದು ಲಕ್ಷ ರೂಪಾಯಿ ಹಣವನ್ನು ಅವರು ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಾಡಿದರು.

### ವೈದ್ಯಕೀಯ ಕಾಲೇಜ ಹೋರಾಟ: ಸಿಎಂ ಬಳಿ ನಿಯೋಗ ಹೋಗಲು ನಿರ್ಧಾರ

• ಉದಯವಾಹಿನಿ ವಿಜಯಪುರ

ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆಗೆ ಆಗ್ರಹಿಸಿ ನಗರದ ಅಂಬೇಡ್ಕರ್ ವೃತ್ತದಲ್ಲಿ ಹೋರಾಟ ಸಮಿತಿ ಕೈಗೊಂಡ ಧರಣಿ ಸತ್ಯಾಗ್ರಹ ಸೋಮವಾರ 61ನೇ ದಿನಕ್ಕೆ ಕಾಲಿಟ್ಟಿದ್ದು, ನ.19ರಂದು ಮುಖ್ಯಮಂತ್ರಿ ಬಳಿ ಈ ಸಂಬಂಧ ನಿಯೋಗ ಕರೆದುಕೊಂಡು ಹೋಗಲು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ನಿಗದಿ ಮಾಡಿದ್ದಾರೆ. ಹೋರಾಟ ಸಮಿತಿ ಮುಖಂಡರು, ಜಿಲ್ಲಾ ಉಸ್ತುವಾರಿ ಎಂ.ಬಿ.ಪಾಟೀಲ ಅವರನ್ನು ವಿಜಯಪುರದ ಅವರ ನಿವಾಸದಲ್ಲಿ ಭೇಟಿ ಮಾಡಿ ಮುಖ್ಯಮಂತ್ರಿ ಅವರ ಹತ್ತಿರ ನಿಯೋಗ ಕರೆದುಕೊಂಡು ಹೋಗಲು ಸುದೀರ್ಘವಾಗಿ ಚರ್ಚೆ ಮಾಡಲಾಯಿತು. ಈ ವೇಳೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ನ. 19ರಂದು ನಿಯೋಗ ಕರೆದುಕೊಂಡು ಹೋಗಲು ದಿನ ನಿಗದಿ ಮಾಡಿದ್ದಾರೆ.

### ಕೃಷ್ಣಮೃಗಗಳ ಸಾವು, ಲೋಪ ದೃಢಪಟ್ಟರೆ ಸಿಬ್ಬಂದಿ ವಿರುದ್ಧ ಕ್ರಮ: ರಂಗಸ್ವಾಮಿ

• ಉದಯವಾಹಿನಿ ಬೆಳಗಾವಿ

ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 31 ಕೃಷ್ಣಮೃಗಗಳ ಸಾವಿನ ಪ್ರಕರಣದಲ್ಲಿ ವೈದ್ಯರು ಮತ್ತು ಸಿಬ್ಬಂದ ನಿರ್ಲಕ್ಷ್ಯ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಪ್ರಾಣಿಗಳ ಒಳಾಂಗಗಳ ಪರೀಕ್ಷೆ ವರದಿ ಮತ್ತು ತನಿಖಾ ವರದಿಗೆ ಕಾಯುತ್ತಿದ್ದೇವೆ. ಸಿಬ್ಬಂದಿ ಲೋಪವೆಸಗಿರುವುದು ದೃಢಪಟ್ಟರೆ, ಅವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ಹೇಳಿದರು. ಕಿರು ಮೃಗಾಲಯಕ್ಕೆ ಭೇಟಿ ನೀಡಿ, ಪ್ರಕರಣದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ನಂತರ ಅವರು ಮಾತನಾಡಿದರು.

ಅಳಿವಿನಂಚಿನಲ್ಲಿ ಇರುವ ಕೃಷ್ಣಮೃಗಗಳಂಥ ಪ್ರಬೇಧಗಳನ್ನು ಸಂರಕ್ಷಿಸಲು ಮತ್ತು ಅವುಗಳ ಸಂಖ್ಯೆ ಹೆಚ್ಚಿಸಲು ಮೃಗಾಲಯದಲ್ಲಿ ಇರಿಸಲಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಅವು ಮೃತಪಟ್ಟಿರುವುದು ಸ್ವೀಕಾರಾರ್ಹವಲ್ಲ. ಬ್ಯಾಕ್ಟೀರಿಯಾ ಸೋಂಕಿನಿಂದ ಅವು ಸಾವನ್ನಪ್ಪಿವೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಪರೀಕ್ಷಾ ವರದಿಗೆ ನಾವು ಕಾಯುತ್ತಿದ್ದೇವೆ' ಎಂದರು. ಮೃಗಾಲಯದಲ್ಲಿನ ವೈದ್ಯಕೀಯ ತಂಡವು ಪ್ರಾಣಿಗಳ ಆರೋಗ್ಯವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಆದರೆ, ಇಲ್ಲಿ ಅದು ನಡೆದಿಲ್ಲ ಎಂಬಂತೆ ತೋರುತ್ತಿದೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ ಪನ್ವಾರ್ ಕೂಡ ಭಾನುವಾರ ಕಿರು ಮೃಗಾಲಯಕ್ಕೆ ಭೇಟಿ ನೀಡಿದ್ದು, ವರದಿ ಸಲ್ಲಿಸಲಿದ್ದಾರೆ. ಒಳಾಂಗಗಳ ಪರೀಕ್ಷೆ ವರದಿ ಮತ್ತು ಸದಸ್ಯ ಕಾರ್ಯದರ್ಶಿ ವರದಿಯ ಆಧರಿಸಿ, ವರದಿಯಲ್ಲಿ ಅಧಿಕಾರಿಗಳ ವಿರುದ್ಧ ದೋಷಾರೋಪ ಮಾಡಿದ್ದರೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರ ಗಮನಕ್ಕೆ ತರುತ್ತೇನೆ ಎಂದರು.

## ವಿಮಾನದಲ್ಲಿ 'ವಯಸ್ಕರ' ವಿಡಿಯೋ ವೀಕ್ಷಿಸಿದ ಅಮೆರಿಕದ ಸಂಸದ

**ವಾಷಿಂಗ್ಟನ್:** ವರ್ಷಗಳ ಹಿಂದೆ, ನಮ್ಮಲ್ಲಿ ವಿಧಾನಸಭೆಯಲ್ಲಿ ಕೆಲವು ಪಕ್ಷಗಳ ಶಾಸಕರು ನೀಲಿ ಚಿತ್ರ ವೀಕ್ಷಿಸಿದ್ದನ್ನು ನಾವೆಲ್ಲಾ ಕೇಳಿದ್ದೇವೆ. ಆದರೆ, ದೂರದ ಅಮೆರಿಕದಲ್ಲಿಯೂ ಇಂಥದ್ದೇ ಘಟನೆಯೊಂದು ನಡೆದಿದೆ. ಅಲ್ಲಿನ ಸಂಸದರೊಬ್ಬರು ನೀಲಿ ಚಿತ್ರ ವೀಕ್ಷಿಸಿ ಸಿಕ್ಕಿಬಿದ್ದಿದ್ದಾರೆ. ಆದರೆ, ಅವರು ಸದನದಲ್ಲಿ ಅದನ್ನು ವೀಕ್ಷಿಸಿಲ್ಲ. ವಿಮಾನದಲ್ಲಿ ಪ್ರಯಾಣಿಸುವಾಗ ನೀಲಿ ಚಿತ್ರವನ್ನು ವೀಕ್ಷಿಸಿ ಸಿಕ್ಕಿಬಿದ್ದಿದ್ದಾರೆ. ಆದರೆ, ಸಿಕ್ಕಿಹಾಕ್ಕೊಂಡ ಕೂಡಲೇ ಅವರು ತಮ್ಮ ತಪ್ಪನ್ನು ಅಮೆರಿಕದ ಎಲಾನ್ ಮಸ್ಕ್ ಅವರ ಮೇಲೆ ಎತ್ತಾಕಿದ್ದಾರೆ. ಅದು ಹೇಗೆ? ಅದಕ್ಕೂ ಇದಕ್ಕೂ ಏನು ಸಂಬಂಧ ಇಲ್ಲಿದೆ ಉತ್ತರ.

**ಎಲ್ಲಿ ಆಗಿದ್ದು ಈ ಘಟನೆ?:** ಇತ್ತೀಚೆಗೆ, ಡೆಮಾಕ್ರಟಿಕ್ ಸಂಸದರಾದ ಬ್ರಾಡ್ ಅವರು ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ತಮ್ಮ ಆಸನದಲ್ಲಿ ಕುಳಿತು ಅವರು ತಮ್ಮಲ್ಲಿದ್ದ ಐ-ಪ್ಯಾಡ್‌ನಲ್ಲಿ ಏನನ್ನೋ ನೋಡುತ್ತಾ ಕುಳಿತಿದ್ದರು. ಅವರ ಪಕ್ಕದಲ್ಲಿದ್ದ ಪ್ರಯಾಣಿಕ ಸಂಸದರು ಏನು ಮಾಡುತ್ತಿದ್ದಾರೆಂದು ಇಣುಕಿ ನೋಡಿದ್ದಾನೆ. ಆಗ ಅವರು ಅಶ್ಲೀಲ ಚಿತ್ರಗಳನ್ನು ನೋಡುತ್ತಿರುವುದು ಗೊತ್ತಾಗಿದೆ. ಕೂಡಲೇ ತಮ್ಮ ಮೊಬೈಲನ್ನು ತೆಗೆದುಕೊಂಡು ಮೆಲ್ಲಗೆ ಸಂಸದರು ಅಶ್ಲೀಲ ಫೋಟೋಗಳನ್ನು ನೋಡುತ್ತಿರುವುದನ್ನು ಚಿತ್ರೀಕರಿಸಿದ್ದಲ್ಲದೆ, ಟ್ವಿಟರ್ ನಲ್ಲಿ ಆ ವಿಡಿಯೋಗಳನ್ನು ಅಪ್ಲೋಡ್ ಕೂಡ ಮಾಡಿದ್ದಾನೆ.

ಕ್ಯಾಲಿಫೋರ್ನಿಯಾದ ಕಾಂಗ್ರೆಸ್ಸಿಗ ಬ್ರಾಡ್ ಶೆರ್ಮನ್ ಇಂದು ವಿಮಾನ ಪ್ರಯಾಣದ ಸಮಯದಲ್ಲಿ ತಮ್ಮ ಐಪ್ಯಾಡ್‌ನಲ್ಲಿ ಅಶ್ಲೀಲ ಚಿತ್ರಗಳನ್ನು ನೋಡುವುದು ಸೂಕ್ತವೆಂದು ಏಕೆ ಭಾವಿಸಿದರು? ಅವರ ಜಿಲ್ಲೆಗೆ ಇದಕ್ಕಿಂತ ಉತ್ತಮ ಪ್ರಾತಿನಿಧ್ಯ ಬೇಕು' ಎಂದು ಆತ ತನ್ನ ಪೋಸ್ಟ್‌ನಲ್ಲಿ ಪ್ರಶ್ನೆ ಮಾಡಿದ್ದಾನೆ. ಆತನ ಈ ಪೋಸ್ಟ್ ಒಡನೆಯೇ ವೈರಲ್ ಆಗಿದೆ.

ರಾಜಕಾರಣಿಯೊಬ್ಬರು ಸಾರ್ವಜನಿಕ ಸ್ಥಳದಲ್ಲಿ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿದ್ದಾರೆಂದರೆಂದರೆ, ಅದರಲ್ಲೂ ಫೋಟೋ ಸಮೇತ ಸಾಕ್ಷಿ ಸಿಕ್ಕಿದೆ ಎಂದರೆ ಮಾಧ್ಯಮಗಳು ಸುಮ್ಮನಿರುತ್ತಾವೆಯೇ ವಾಷಿಂಗ್ಟನ್ ಪೋಸ್ಟ್ ಸೇರಿದಂತೆ ನಾನಾ ಮಾಧ್ಯಮಗಳು ಇದನ್ನು ಚಾಚೂ ತಪ್ಪದೇ ವರದಿ ಮಾಡಿವೆ. ಇದು ಸಂಸದರ ಕಿವಿಗೂ ಬಿದ್ದು ಅವರು ಕಕ್ಕಾಬಿಕ್ಕಿಯಾಗಿದ್ದಾರೆ. ತಮ್ಮ ಪಕ್ಕದಲ್ಲಿ ಯಾವನಿದ್ದ ಅಂತ ಸ್ವಲ್ಪ ನೆನಪಿಸಿಕೊಂಡು ಮನಸ್ಸಿನಲ್ಲಿ ಚೆನ್ನಾಗಿ ಬೈದುಕೊಂಡಿದ್ದಾರೆ. ಆದರೆ, ಈ ಬಗ್ಗೆ ತಮ್ಮನ್ನು ಸಂಪರ್ಕಿಸಿದ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಸೀದಾ ಆ ತಪ್ಪನ್ನು ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಮೇಲೆ ಎತ್ತಿಹಾಕಿದ್ದಾರೆ.

ಅಸಲಿಗೆ, ನಾನು ಟ್ವೀಟರ್ ನೋಡುತ್ತಿದ್ದೆ. ಉದ್ಯಮಿ ಎಲಾನ್ ಮಸ್ಕ್ ಟ್ವಿಟರ್ ಕಂಪನಿಯನ್ನು ಖರೀದಿಸಿದ ಮೇಲೆ ಅಲ್ಲಿ ಇಲ್ಲಸಲ್ಲದ್ದೆಲ್ಲಾ ಕಾಣಿಸುತ್ತದೆ. ನಾವು ಕೇಳದೇ ಇರುವಂಥದ್ದನ್ನೆಲ್ಲಾ ಅಲ್ಲಿ ತೋರಿಸಲಾಗುತ್ತದೆ. ನಾನೇನೂ ಬೇಕು ಅಂತ ನೋಡಲಿಲ್ಲ ಎಂದು ಹೇಳಿದ್ದಾರೆ.

● ನಾವು ಇದನ್ನು ವಿರೋಧಿಸುತ್ತೇವೆ ಮತ್ತು ನಮಗೆ ಯಾರ ಉಪನ್ಯಾಸ ಹಾಗೂ ಧೃಡಿಕರಣ ಬೇಡ ಎಂದ ನೆತನ್ಯಾಹು

# ವಿಶ್ವಸಂಸ್ಥೆಯಲ್ಲಿ ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆ ಪ್ರಸ್ತಾವನೆ

**ಟೇಲ್ ಅವೀವ್:** ಇಸ್ರೇಲ್ ಹಾಗೂ ಗಾಜಾ ನಡುವಿನ 2 ವರ್ಷಗಳ ಕಾಲದ ಯುದ್ಧ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆಯಲ್ಲಿ ಅಂತ್ಯಗೊಂಡಿದ್ದು, ಯುದ್ಧದ ನಂತರದ ಬೆಳವಣಿಗೆಯಂತೆ ಅಮೆರಿಕಾ ಗಾಜದಲ್ಲಿ ಪುನಶ್ಚೇತನದ ಕ್ರಮವಾಗಿ ಗಾಜಾದಲ್ಲಿ ಪ್ಯಾಲೆಸ್ತೀನ್ ಸ್ವಾತಂತ್ರ್ಯಕ್ಕೆ ಅವಕಾಶ ನೀಡುವ ಅಮೆರಿಕಾದ ಪ್ರಸ್ತಾವನೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಸಲ್ಲಿಸಿರುವುದನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರೋಧಿಸಿದ್ದಾರೆ.

ಈಗಾಗಲೇ ಈ ಕುರಿತು ವಿಶ್ವಸಂಸ್ಥೆಯಲ್ಲಿ ಮತದಾನ ನಡೆಸಲು ಸಿದ್ಧತೆ ನಡೆಸಲಾಗುತ್ತಿದ್ದು, ಈ ಬೆನ್ನಲ್ಲೇ ನೆತನ್ಯಾಹು ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆಗೆ ಯಾವುದೇ ಪ್ರಯತ್ನವನ್ನು ವಿರೋಧಿಸುವುದಾಗಿ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಈ ವಿಷಯದಲ್ಲಿ ನಮಗೆ ಯಾರ ಉಪನ್ಯಾಸವೂ ಬೇಡ ಎಂದು ಖಾರವಾಗಿ ಕುಟುಕಿದ್ದಾರೆ.

**ಬೆಂಜಮಿನ್ ನೆತನ್ಯಾಹು ವಿರೋಧ**

ನೆತನ್ಯಾಹು ಅವರ ಈ ನಿಲುವು, ದೀರ್ಘಕಾಲದಿಂದಲೂ ಅವರು ಹೊಂದಿರುವ ಅಭಿಪ್ರಾಯಕ್ಕೆ ಅನುಗುಣವಾಗಿದೆ. ಹಮಾಸ್‌ಗೆ ಬಹುಮಾನ ನೀಡಿದಂತಾಗುತ್ತದೆ ಮತ್ತು ಅಂತಿಮವಾಗಿ ಇಸ್ರೇಲ್ ಗಡಿಯಲ್ಲಿ ದೊಡ್ಡ ಹಮಾಸ್ ಆಡಳಿತದ ರಾಜ್ಯ ಸ್ಥಾಪನೆಗೆ ಕಾರಣವಾಗುತ್ತದೆ ಎಂದು ಅವರು ಈ ಹಿಂದೆ ಹಲವು ಬಾರಿ ವಾದಿಸಿದ್ದರು. ಈ ಪ್ರಸ್ತಾವನೆಗೆ ಇಸ್ರೇಲ್ ನಲ್ಲಿ ವಿರೋಧ ಕೇಳಿ ಬರುತ್ತಿದ್ದು, ಇಸ್ರೇಲ್‌ನ ತೀವ್ರ-ಬಲಪಂಥೀಯ ಸಚಿವರಾದ ಇಟಮಾರ್ ಬೆನ್-ಗ್ವಿರ್ ಮತ್ತು ಬೆಜಲೆಲ್ ಸ್ಮೋಟ್ರಿಚ್ ಅವರು, ಪ್ಯಾಲೆಸ್ತೀನ್ ರಾಷ್ಟ್ರದ ಪ್ರಸ್ತಾವನೆಯನ್ನು ಖಂಡಿಸುವಂತೆ ನೆತನ್ಯಾಹು ಅವರನ್ನು ಒತ್ತಾಯಿಸಿದ್ದು, ಪ್ರಧಾನಿ ಕ್ರಮ ತೆಗೆದುಕೊಳ್ಳದಿದ್ದರೆ ಆಡಳಿತ ಮೈತ್ರಿಕೂಟದಿಂದ ಹೊರಬರುವುದಾಗಿ ಬೆನ್-ಗ್ವಿರ್ ಎಚ್ಚರಿಕೆ ಸಹ ನೀಡಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

**ಟ್ರಂಪ್ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಅಂತದ್ದೇನಿದೆ?:** ಇನ್ನು, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಡಿಸಿದ 20-ಅಂಶಗಳ ಯೋಜನೆಯಲ್ಲಿ, ಪ್ಯಾಲೆಸ್ತೀನ್ ಪ್ರಾಧಿಕಾರದಲ್ಲಿ ಸುಧಾರಣೆಗಳು ನಡೆದರೆ, ಪ್ಯಾಲೆಸ್ತೀನ್ ಜನತೆಯ ಆಕಾಂಕ್ಷೆಯಾದ ಪ್ಯಾಲೆಸ್ತೀನ್ ಸ್ವಯಂ-ನಿರ್ಣಯ ಮತ್ತು ರಾಜ್ಯತ್ವಕ್ಕೆ ಒಂದು ವಿಶ್ವಾಸಾರ್ಹ ಮಾರ್ಗ ತೆರಯಬಹುದು ಎಂಬುದು ಕದನವಿರಾಮ ಒಪ್ಪಂದಲ್ಲಿನ ಷರತ್ತಿನಲ್ಲಿದೆ. UNSC, ಗಾಜಾದಲ್ಲಿ ಅಂತರರಾಷ್ಟ್ರೀಯ ಸ್ಥಿರೀಕರಣ ಪಡೆ ಸ್ಥಾಪಿಸುವ ಅಮೆರಿಕಾದ ಪ್ರಸ್ತಾವನೆಯ ಮೇಲೆ ಮತ ಚಲಾಯಿಸಲಿದೆ. ಈಗಾಗಲೇ ಇಸ್ರೇಲ್ ಸೇರಿದಂತೆ ರಷ್ಯಾ, ಚೀನಾ ಮತ್ತು ಕೆಲವು ಅರಬ್ ದೇಶಗಳು ಈ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿವೆ.

**ಪ್ರಕ್ರಿಯೆಯಲ್ಲಿ ಇಸ್ರೇಲ್ ಹೊರಗಿಡಬೇಕೆಂದು ಪ್ಯಾಲೆಸ್ತೀನ್ ಒತ್ತಾಯ:** ಇನ್ನು, ವಿಶ್ವಸಂಸ್ಥೆಯಲ್ಲಿ ಅಮೆರಿಕಾ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ವಿದೇಶಿಗರ ಹಾಗೂ ಪ್ರಮುಖವಾಗಿ ಇಸ್ರೇಲ್‌ನ ಯಾವುದೇ ಹಸ್ತಕ್ಷೇಪ ಹಾಗೂ ನಿಯಂತ್ರಣ ಇರಬಾರದು ಎಂದು ಹೇಳಿರುವ ಹಮಾಸ್ ಮತ್ತು ಪ್ಯಾಲೆಸ್ತೀನಿಯರು,



- ವಿಶ್ವಸಂಸ್ಥೆಗೆ ಅಮೆರಿಕಾ ಸಲ್ಲಿಸಿರುವ ಪ್ಯಾಲೆಸ್ತೀನ್ ರಾಷ್ಟ್ರದ ರಚನೆ ಪ್ರಸ್ತಾವನೆಗೆ ಇಸ್ರೇಲ್ ವಿರೋಧ
- ನಾವು ಇದನ್ನು ವಿರೋಧಿಸುತ್ತೇವೆ ಮತ್ತು ನಮಗೆ ಯಾರ ಉಪನ್ಯಾಸ ಹಾಗೂ ಧೃಡಿಕರಣ ಬೇಡ ಎಂದ ನೆತನ್ಯಾಹು
- ಮತದಾನ ಪ್ರಕ್ರಿಯೆಯಲ್ಲಿ ಇಸ್ರೇಲ್ ದೇಶವನ್ನು ಹೊರಗಿಬೇಕೆಂದು ವಿಶ್ವಸಂಸ್ಥೆಯನ್ನು ಒತ್ತಾಯಿಸಿರುವ ಪ್ಯಾಲೆಸ್ತೀನ್

ಅಮೆರಿಕಾದ ಪ್ರಸ್ತಾವನೆಯು ಗಾಜಾದ ಮೇಲೆ ಅಂತರರಾಷ್ಟ್ರೀಯ ನಿಯಂತ್ರಣ ಹೇರುವ ಪ್ರಯತ್ನವಾಗಿದೆ ಮತ್ತು ಇದು ಇಸ್ರೇಲ್ ಪರವಾಗಿದೆ ಎಂದು ಆಂತಕ ವ್ಯಕ್ತಪಡಿಸಿದ್ದಾರೆ.

ಈ ಪ್ರಸ್ತಾವನೆಯಿಂದ ಪ್ಯಾಲೆಸ್ತೀನಿಯರು ಒಳ್ಳೆಯದಾಗುವುದಿದ್ದರೆ ಈ ಪ್ರಕ್ರಿಯೆಯಲ್ಲಿ ಇಸ್ರೇಲ್ ಸೇರಿರಬಾರದು ಮತ್ತು ಇದು ನೇರವಾಗಿ ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿರಬೇಕು ಎಂದು ಒತ್ತಾಯಿಸಿವೆ.

**ಈಗಾಗಲೇ ಪ್ಯಾಲೆಸ್ತೀನ್ ರಾಷ್ಟ್ರವನ್ನು ಗುರುತಿಸಿರುವ ಹಲವು ದೇಶಗಳು:** ಆದರೆ ಗಾಜದಲ್ಲಿ ಇಸ್ರೇಲ್‌ನ ಆಕ್ರಮಣ ತೀವ್ರವಾಗುತ್ತಿದ್ದಂತೆ ಯುದ್ಧದಲ್ಲಿ ಅಮಾಯಕರು ಬಲಿಯಾಗುವ ಸಂಖ್ಯೆಯ ಹೆಚ್ಚಳದಿಂದ ಇಸ್ರೇಲ್ ಗಾಜಾದಲ್ಲಿ ನರಮೇಧ ನಡೆಸುತ್ತಿದೆ ಹಲವು ದೇಶಗಳು ಎಂದು ಆರೋಪಿಸಿದ್ದವು. ಈ ಬೆನ್ನಲ್ಲೆ, ಯುಕೆ, ಆಸ್ಟ್ರೇಲಿಯಾ ಮತ್ತು ಕೆನಡಾ ದೇಶಗಳು ಔಪಚಾರಿಕವಾಗಿ ಪ್ಯಾಲೆಸ್ತೀನ್ ರಾಷ್ಟ್ರವನ್ನು ಗುರುತಿಸಿದ ನಂತರ, ಪ್ಯಾಲೆಸ್ತೀನ್ ರಾಷ್ಟ್ರಕ್ಕಾಗಿ ಅಂತರರಾಷ್ಟ್ರೀಯ ಒತ್ತಡ ಹೆಚ್ಚಾಯಿತು. ವೆಸ್ಟ್ ಬ್ಯಾಂಕ್‌ನಲ್ಲಿ ನೆಲೆಸಿರುವವರ ದಾಳಿಗಳ ಬಗ್ಗೆಯೂ ಇಸ್ರೇಲ್ ಪ್ರಧಾನಿ ತೀವ್ರ ಅಂತರರಾಷ್ಟ್ರೀಯ ಒತ್ತಡವನ್ನು ಎದುರಿಸುತ್ತಿದ್ದಾರೆ.

### ನಮಗೆ ಯಾರ ಉಪನ್ಯಾಸವೂ ಬೇಕಿಲ್ಲ ಎಂದ ನೆತನ್ಯಾಹು

**ಈ ಕುರಿತು ಮಾತನಾಡಿರುವ ಅವರು ವಿಶ್ವಸಂಸ್ಥೆಯಲ್ಲಿ ಸಲ್ಲಿಸಿರುವ ಈ ಪ್ರಸ್ತಾವನೆಯು ಹಮಾಸ್ ಗೆ ಬಹುಮಾನ ನೀಡಿದಂತಾಗುತ್ತದೆ ಮತ್ತು ಅಂತಿಮವಾಗಿ ಇಸ್ರೇಲ್ ಗಡಿಯಲ್ಲಿ ದೊಡ್ಡ ಹಮಾಸ್ ಆಡಳಿತದ ರಾಜ್ಯ ಸ್ಥಾಪನೆಗೆ ಕಾರಣವಾಗುತ್ತದೆ. ಯಾವುದೇ ಕಾರಣಕ್ಕೂ ಪ್ಯಾಲೆಸ್ತೀನ್ ರಾಜ್ಯಕ್ಕೆ ನಮ್ಮ ವಿರೋಧ ಬದಲಾಗಿಲ್ಲ. ಗಾಜಾದಲ್ಲಿ ಹಮಾಸ್ ಬಂಡುಕೋರರನ್ನು ನಿಶ್ಯಸ್ತ್ರಗೊಳಿಸಲಾಗುತ್ತದೆ ಮತ್ತು ಗಾಜಾವನ್ನು ಸೇನಾಮುಕ್ತಗೊಳಿಸಲಾಗುತ್ತಾದೆ, ಅದು ಸುಲಭವಾದ ಮಾರ್ಗ ಅಥವಾ ಕಠಿಣ ಮಾರ್ಗ ಯಾವುದಾದರೂ ಆಗಿರಬಹುದು. ಈ ವಿಷಯದಲ್ಲಿ ನನಗೆ ಯಾರಿಂದಲೂ ದೃಢೀಕರಣಗಳು, ಟ್ವೀಟ್‌ಗಳು ಅಥವಾ ಉಪನ್ಯಾಸಗಳು ಅಗತ್ಯವಿಲ್ಲ ಎಂದು ಹೇಳುವ ಮೂಲಕ ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆಗೆ ತಮ್ಮ ಖಂಡನೆಯನ್ನು ವ್ಯಕ್ತಪಡಿಸಿದ್ದಾರೆ.**

## ಬಿಹಾರ ಮರುಚುನಾವಣೆಗೆ ರಾಬರ್ಟ್ ವಾದ್ರಾ ಒತ್ತಾಯ



**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಉದ್ಯಮಿ ಪ್ರಿಯಾಂಕಾ ಗಾಂಧಿಯವರ ಪತಿ ರಾಬರ್ಟ್ ವಾದ್ರಾ ಪ್ರಶ್ನಿಸಿದ್ದಾರೆ. ಬಿಹಾರ ಚುನಾವಣೆಯನ್ನು ''ಸರಿಯಾಗಿ'' ನಡೆಸಲಾಗಿಲ್ಲ ಎಂದು ಅವರು ಆರೋಪಿಸಿ ಮರು ಚುನಾವಣೆ ನಡೆಸಬೇಕೆಂದು ಅವರು ಒತ್ತಾಯಿಸಿದ್ದಾರೆ. ಎರಡು ದಿನಗಳ ಧಾರ್ಮಿಕ ಪ್ರವಾಸಕ್ಕಾಗಿ ಮಧ್ಯಪ್ರದೇಶದಲ್ಲಿರುವ ರಾಬರ್ಟ್ ವಾದ್ರಾ, ಜನರು ಚುನಾವಣಾ ಆಯೋಗದ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಬಿಹಾರ ಚುನಾವಣಾ ಫಲಿತಾಂಶಗಳಿಂದ ಸಾರ್ವಜನಿಕರು ಅತೃಪ್ತರಾಗಿದ್ದಾರೆ ಎಂದಿರುವ ರಾಬರ್ಟ್ ವಾದ್ರಾ, ಎನ್‌ಡಿಎಯನ್ನು ಹೆಸರಿಸದೆ, ಚುನಾವಣಾ ಆಯೋಗವು ಅದಕ್ಕೆ ಸಹಾಯ ಮಾಡಿದೆ ಮತ್ತು ಫಲಿತಾಂಶಗಳು ಆ ಸಹಾಯದ ಫಲಿತಾಂಶವಾಗಿದೆ ಎಂದು ಅವರು ಆರೋಪಿಸಿದ್ದಾರೆ. ಬಿಹಾರದ ಜನರು ಫಲಿತಾಂಶಗಳಿಂದ ಸಂತೋಷವಾಗಿಲ್ಲ. ಏನೇ ನಡೆದರೂ ಅದು ಚುನಾವಣಾ ಆಯೋಗದ ಸಹಾಯದಿಂದ ನಡೆದಿದೆ. ಬಿಹಾರದಲ್ಲಿ ಮತ್ತೆ ಚುನಾವಣೆ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ರಾಬರ್ಟ್ ವಾದ್ರಾ ಅವರು ಜನತೆ ರಾಹುಲ್ ಮತ್ತು ಪ್ರಿಯಾಂಕಾ ನಂಬಿಕೆ ಇಟ್ಟಿದ್ದಾರೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಸಂಸದ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮುಂದಿನ ಕೆಲವು ದಿನಗಳಲ್ಲಿ ಜನರನ್ನು ಭೇಟಿ ಮಾಡಲಿದ್ದಾರೆ ಎಂದು ರಾಬರ್ಟ್ ವಾದ್ರಾ ಹೇಳಿದರು. ಯುವಜನರು ರಾಹುಲ್ ಗಾಂಧಿ ಅವರೊಂದಿಗೆ ಸೇರಲಿದ್ದಾರೆ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಅಭಿಯಾನವನ್ನು ಪ್ರಾರಂಭಿಸಲಾಗುವುದು ಎಂದು ಅವರು ಹೇಳಿದ್ದಾರೆ.

## ಭಾರತ -ಅಮೆರಿಕ ನಡುವೆ ಹೊಸ ಎಲ್‌ಪಿಜಿ ಒಪ್ಪಂದ

**ನವದೆಹಲಿ:** ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಮಾತುಕತೆಗಳಲ್ಲಿ ಸಕಾರಾತ್ಮಕ ಪ್ರಗತಿಯ ಲಕ್ಷಣಗಳೊಂದಿಗೆ, ಎರಡೂ ದೇಶಗಳು ಇಂಧನ ವಲಯದಲ್ಲಿ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿವೆ, ಇದು ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ದಾರಿ ಮಾಡಿಕೊಡುತ್ತದೆ.

ಭಾರತೀಯ ಸಾರ್ವಜನಿಕ ವಲಯದ ತೈಲ ಕಂಪನಿಗಳು ಅಮೆರಿಕದಿಂದ ದ್ರವೀಕೃತ ಪೆಟ್ರೋಲಿಯಂ ಅನಿಲ ಗಾಗಿ ಒಂದು ವರ್ಷದ ದೀರ್ಘಾವಧಿಯ ಒಪ್ಪಂದಕ್ಕೆ ಸಹಿ ಹಾಕಿವೆ ಎಂದು ಕೇಂದ್ರ, ಪೆಟ್ರೋಲಿಯಂ ಮತ್ತು ನೈಸರ್ಗಿಕ



### ಹೊಸ ತಿರುವು

**ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಇದನ್ನು ಭಾರತಕ್ಕೆ ಐತಿಹಾಸಿಕ ಎಂದು ಬಣ್ಣಿಸಿದ್ದಾರೆ. ಈ ಒಪ್ಪಂದದ ಅಡಿಯಲ್ಲಿ, ಭಾರತೀಯ ತೈಲ ಕಂಪನಿಗಳು ಅಮೆರಿಕದಿಂದ 2.2 ಮಿಲಿಯನ್ ಟನ್ ಎಲ್‌ಪಿಜಿಯನ್ನು ಆಮದು ಮಾಡಿಕೊಳ್ಳಲಿದ್ದು, ಇದು ಭಾರತದ ಒಟ್ಟು ಆಮದಿನ ಶೇಕಡಾ 10 ರಷ್ಟನ್ನು ಪ್ರತಿನಿಧಿಸುತ್ತದೆ. ಈ ಒಪ್ಪಂದವು ವಾಣಿಜ್ಯ ದೃಷ್ಟಿಕೋನದಿಂದ ಮಹತ್ವದ್ದಾಗಿದೆ, ಆದರೆ ಭಾರತದ ಇಂಧನ ಕಾರ್ಯತಂತ್ರದಲ್ಲಿ ಹೊಸ ತಿರುವು ನೀಡುತ್ತದೆ.**

ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ಈ ಒಪ್ಪಂದದಡಿಯಲ್ಲಿ, ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಒಟ್ಟಾಗಿ ಯುಎಸ್ ಗಲ್ಫ್ ಕರಾವಳಿಯಿಂದ ವರ್ಷಕ್ಕೆ ಸುಮಾರು 2.2 ಮಿಲಿಯನ್ ಟನ್ (ಎಂಟಿಪಿಎ) ಎಲ್‌ಪಿಜಿಯನ್ನು ಆಮದು ಮಾಡಿಕೊಳ್ಳುತ್ತವೆ, ಇದು ಭಾರತದ ವಾರ್ಷಿಕ ಎಲ್‌ಪಿಜಿ ಆಮದಿನ ಸುಮಾರು 10 ಪ್ರತಿಶತದಷ್ಟಿದೆ.

ಪ್ರಮುಖ ಉತ್ಪಾದಕರೊಂದಿಗೆ ಮಾತುಕತೆ ನಡೆಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ತಂಡಗಳು ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದವು ಎಂದು ಸಚಿವರು ಹೇಳಿದ್ದಾರೆ. ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಕೈಗೆಟುಕುವ ಬೆಲೆಯಲ್ಲಿ ಎಲ್‌ಪಿಜಿ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಕಳೆದ ವರ್ಷ ಜಾಗತಿಕ ಬೆಲೆಗಳಲ್ಲಿ 60% ಹೆಚ್ಚಳದ ಹೊರತಾಗಿಯೂ, ಗ್ರಾಹಕರ ಬೆಲೆಗಳನ್ನು ಸಿಲಿಂಡಿರ್‌ಗೆ ರೂ.500- ರೂ. 550 ರಲ್ಲಿ ಇರಿಸಲು ಮೋದಿ ಸರ್ಕಾರ ರೂ.40,000 ಕೋಟಿಗೂ ಹೆಚ್ಚು ಖರ್ಚು ಮಾಡಿದೆ.

## ನ.20ರಂದು 10ನೇ ಬಾರಿಗೆ ಬಿಹಾರ್ ಸಿಎಂ ಆಗಿ ನಿತೀಶ್ ಪ್ರಮಾಣ

**ಪಾಟ್ನಾ:** ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಪ್ರಚಂಡ ಗೆಲುವು ಸಾಧಿಸಿ ವಿರೋಧ ಪಕ್ಷಗಳನ್ನು ಧೂಳೀಪಟ ಮಾಡಿರುವ ಎನ್‌ಡಿಎ, ಬಿಹಾರದಲ್ಲಿ ಇದೇ 20ರಂದು ಸರ್ಕಾರ ರಚನೆ ಮಾಡಲಿದ್ದು, ಮುಖ್ಯಮಂತ್ರಿ ಯಾಗಿ 10ನೇ ಬಾರಿಗೆ ನಿತೀಶ್ ಕುಮಾರ್ ಅಧಿಕಾರ ಸ್ವೀಕರಿಸಲಿದ್ದಾರೆ.


ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ನಡೆಯಲಿರುವ ವರ್ಣರಂಜಿತ ಸಮಾರಂಭದಲ್ಲಿ ಜೆಡಿಯು ಮುಖಂಡ ನಿತೀಶ್ ಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವರು. ಜೊತೆಗೆ ಬಿಜೆಪಿ ಹಾಗು ಎಲ್‌ಜೆಪಿಯಿಂದ ತಲಾ ಒಬ್ಬರು ಉಪಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ತಿಳಿದುಬಂದಿದೆ. ಪ್ರಮಾಣವಚನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರಮೋದಿ ಆಗಮಿಸಲಿದ್ದು, ಬಿಜೆಪಿ ಹಾಗೂ ಎನ್‌ಡಿಎ ಆಡಳಿತವಿರುವ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಕೂಡ ಭಾಗವಹಿಸಲಿದ್ದಾರೆ. ಮೂಲಗಳ ಪ್ರಕಾರ ಬಿಜೆಪಿಗೆ ಸಚಿವ ಸಂಪುಟದಲ್ಲಿ 15ರಿಂದ 16 ಸ್ಥಾನ, ಜೆಡಿಯುಗೆ 14 ಸ್ಥಾನ, ಎಲ್‌ಜೆಪಿಗೆ 3, ಆರ್‌ಎಲ್‌ಎಂ ಮತ್ತು ಎಚ್‌ಎಎಂಗೆ ತಲಾ ಒಂದು ಸ್ಥಾನ ದೊರಕುವ ಸಂಭವವಿದೆ. ನಿತೀಶ್‌ಕುಮಾರ್ ಅವರನ್ನೇ ಮುಂದಿನ ಮುಖ್ಯಮಂತ್ರಿ ಮಾಡಲು ಎನ್‌ಡಿಎ ಮಿತ್ರಪಕ್ಷಗಳು ಸರ್ವಸಮತದ ಒಪ್ಪಿಗೆಯನ್ನು ಸೂಚಿಸಿವೆ. ಈ ವಿಷಯದಲ್ಲಿ ಯಾವುದೇ ಒಬ್ಬ ಶಾಸಕರೂ ಕೂಡ ಅಪಸ್ವರ ತೆಗೆದಿಲ್ಲ. ಮಂಗಳವಾರ ಔಪಚಾರಿಕವಾಗಿ ಶಾಸಕಾಂಗ ಸಭೆ ನಡೆಯಲಿದ್ದು, ನಿತೀಶ್‌ಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಿದ್ದಾರೆ.

ನಂತರ ಸರ್ಕಾರ ರಚನೆಗೆ ವಿದ್ಯುಕ್ತವಾಗಿ ಎನ್‌ಡಿಎ ಹಕ್ಕು ಮಂಡಿಸಲಿದೆ. 20ರಂದು ಸರ್ಕಾರ ರಚನೆಗೆ ಅವಕಾಶ ನೀಡುವಂತೆ ಶಾಸಕಾಂಗ ಪಕ್ಷದ ನಾಯಕರು ರಾಜ್ಯಪಾಲರಿಗೆ ಶಾಸಕರ ಬೆಂಬಲದ ಪತ್ರಗಳನ್ನು ನೀಡಲಿದ್ದಾರೆ.

**ಎನ್‌ಡಿಎ ಮಿತ್ರಪಕ್ಷಗಳು ಒಪ್ಪಿಗೆ**

ಇದಕ್ಕೂ ಮುನ್ನ ನಿತೀಶ್‌ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ರಾಜಭವನಕ್ಕೆ ತೆರಳಿದ ಅವರು ರಾಜ್ಯಪಾಲ ಆರೀಫ್ ಮೊಹಮದ್ ಖಾನ್ ಅವರನ್ನು ಭೇಟಿಯಾಗಿ ರಾಜೀನಾಮೆ ಪತ್ರ ಸಲ್ಲಿಸಿದರು. ನಿತೀಶ್‌ಕುಮಾರ್ ರಾಜ್ಯದಲ್ಲಿ ನೀತಿ ಸಂಹಿತೆ ಜಾರಿಯಾದಾಗ ಹಂಗಾಮಿ ಮುಖ್ಯಮಂತ್ರಿಯಾಗಿದ್ದರು. ಈಗ ರಾಜೀನಾಮೆ ನೀಡಿರುವುದರಿಂದ ರಾಜ್ಯಪಾಲರು ವಿಧಾನಸಭೆಯನ್ನು ವಿಸರ್ಜಿಸಿ ಆದೇಶ ಹೊರಡಿಸಲಿದ್ದಾರೆ. ಶಾಸಕರ ಬೆಂಬಲದ ಪತ್ರವನ್ನು ನೀಡಿದ ನಂತರ ರಾಜ್ಯ ಚುನಾವಣಾ ಆಯೋಗವು ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಆಯ್ಕೆಯಾದ ಶಾಸಕರ ಪಟ್ಟಿಯನ್ನು ನೀಡಲಿದ್ದಾರೆ.


ನಂತರ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನ ಕೊಡುವರು. ಈಗಾಗಲೇ ಪ್ರಧಾನಿಯವರು ಕಾರ್ಯಕ್ರಮಕ್ಕೆ ಬರುವುದಾಗಿ ಸಮತಿಸಿರುವುದರಿಂದ ಇದೇ 20ರಂದು ಪಾಟ್ನಾದ ಗಾಂಧಿ ಮೈದಾನದಲ್ಲಿ ಭವ್ಯ ಸಮಾರಂಭ ಜರುಗಲಿದ್ದು, ಬಿಹಾರದಲ್ಲಿ 10ನೇ ಬಾರಿಗೆ ಮುಖ್ಯಮಂತ್ರಿಯಾಗಿ ನಿತೀಶ್‌ಕುಮಾರ್ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.



## ಸತ್ತಿದ್ದು ಪತಿ, ಮರಣ ಪತ್ರ ಸಿಕ್ಕಿದ್ದು ಪತ್ನಿಗೆ

**ಆಗ್ರಾ:** ಅಲಿಗಢ ಜಿಲ್ಲೆಯ ಖೈರ್ ತಹಶೀಲ್ ಪ್ರದೇಶದ ಚಮನ್ ನಗರಿಯ ಗ್ರಾಮದಲ್ಲಿ ಸರ್ಕಾರದ ಆಘಾತಕಾರಿ ನಿರ್ಲಕ್ಷ್ಯದ ಪರಮಾವಧಿ ಪ್ರಕರಣ ಬೆಳಕಿಗೆ ಬಂದಿದೆ. ಇಲ್ಲಿನ ಮಹಿಳೆಯೊಬ್ಬರು ತಮ್ಮ ಮೃತ ಪತಿಯ ಮರಣ ಪ್ರಮಾಣಪತ್ರ ಪಡೆಯಲು ಹೋಗಿ ತಮ್ಮ ಮರಣದ ಪ್ರಮಾಣ ಪತ್ರ ಪಡೆದಿದ್ದಾರೆ.

**ಪ್ರಕರಣದ ವಿವರ:** ಸರೋಜ್ ದೇವಿ ಎಂಬ 58 ವರ್ಷದ ಮಹಿಳೆ 20 ವರ್ಷಗಳ ಹಿಂದೆ ನಿಧನರಾದ ತಮ್ಮ ಪತಿ ದಿವಂಗತ ಜಗದೀಶ್ ಪ್ರಸಾದ್ ಅವರ ಪ್ರಮಾಣಪತ್ರ ಪಡೆಯಲು ಬ್ಲಾಕ್ ಕಚೇರಿಗೆ ಹೋಗಿದ್ದಾರೆ, ಆದರೆ ಅಧಿಕಾರಿಗಳ ತೀವ್ರ ನಿರ್ಲಕ್ಷ್ಯದಿಂದಾಗಿ, ಅವರಿಗೆ ಪತಿಯ ಪ್ರಮಾಣಪತ್ರವನ್ನು ನೀಡಿದೆ ಜೀವಂತವಾಗಿರುವ ಸರೋಜ್ ದೇವಿಯನ್ನು ಸತ್ತಿದ್ದಾರೆ ಎಂದು ಘೋಷಿಸಿ ಸರೋಜ್ ದೇವಿ ಅವರ ಮರಣ ಪ್ರಮಾಣ ಪತ್ರ ನೀಡಿದ್ದಾರೆ. ಇದರಿಂದಾಗಿ ಅವರ ಕುಟುಂಬದಲ್ಲಿ ಅಲ್ಲೋಲ-ಕಲ್ಲೋಲ ಉಂಟಾಗಿದೆ. ಈ ಪ್ರಮಾದವನ್ನು





ಸರಿಪಡಿಸುವಂತೆ ಬ್ಲಾಕ್ ಕಚೇರಿಯ ಕಾರ್ಯದರ್ಶಿಗೆ ಪದೇ ಪದೇ ವಿನಂತಿಸಿದರೂ ತಮ್ಮ ಮನವಿಗೆ ಸ್ಪಂದಿಸಿಲ್ಲ ಎಂದು ಸರೋಜಾದೇವಿ ಆರೋಪಿಸಿದ್ದಾರೆ.

ಈ ತಪ್ಪಿನಿಂದಾಗಿ ಸರೋಜ್ ದೇವಿಯ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಮತ್ತು ಪಿಂಚಣಿ ನಿರ್ಬಂಧಿಸಲ್ಪಟ್ಟಿದ್ದು, ಕುಟುಂಬದ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ಸರೋಜಾದೇವಿ ಪುತ್ರ ಚಂದ್ರಶೇಖರ ಶರ್ಮಾ, ತಾನು ಮತ್ತು ತನ್ನ ತಾಯಿ ತನ್ನ ತಂದೆಯ ಮರಣ ಪ್ರಮಾಣಪತ್ರವನ್ನು ಪಡೆಯಲು ಹೋಗಿದ್ದೆವು, ಆದರೆ ಅಧಿಕಾರಿಗಳು ತಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು ನೀಡುವ ಬದಲು ತಮ್ಮ ತಾಯಿಯ ಪ್ರಮಾಣ ಪತ್ರವನ್ನು ನೀಡಿದ್ದಾರೆ ಎಂದು ಹೇಳಿದ್ದಾರೆ.

# ಮಾನವೀಯತೆ ವಿರುದ್ಧದ ಅಪರಾಧ ಪ್ರಕರಣದಲ್ಲಿ ಹಸೀನಾ ತಪ್ಪಿತಸ್ಥೆ


● ಬಾಂಗ್ಲಾದೇಶ ಮಾಜಿ ಪ್ರಧಾನಿ ಶೇಖ್ ಹಸೀನಾಗೆ ಗಲ್ಲುಶಿಕ್ಷೆ ವಿಧಿಸಿದ ನ್ಯಾಯಾಲಯ

**ಢಾಕಾ:** ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧದ ಗಂಭೀರ ಆರೋಪಗಳ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯವು, ಕಳೆದ ವರ್ಷ ನೆರೆಯ ದೇಶದಲ್ಲಿ ನಡೆದ ದಂಗೆಯ



- ಹಸೀನಾ ನಡೆಸಿರುವ ಅಪರಾಧಗಳು ಗರಿಷ್ಠ ಶಿಕ್ಷೆಗೆ ಅರ್ಹ
- ಆವಾಮಿ ಲೀಗ್ ಬೆಂಬಲಿಗರು ನಡೆಸುತ್ತಿರುವ ಪ್ರತಿಭಟನೆ
- ಹಿಂಸೆಯ ಮೂಲಕ ವಿದ್ಯಾರ್ಥಿ ಚಳುವಳಿ ಹತ್ತಿಕ್ಕಿದ ಆರೋಪದ ಮೇಲೆ ಶೇಖ್ ಹಸೀನಾಗೆ ಗಲ್ಲುಶಿಕ್ಷೆ.

ಸಂದರ್ಭದಲ್ಲಿ ಮಾನವೀಯತೆಯ ವಿರುದ್ಧದ ಅಪರಾಧಗಳಿಗೆ ಗಲ್ಲುಶಿಕ್ಷೆ ವಿಧಿಸಿದೆ. ಶೇಖ್ ಹಸೀನಾ ವಿರುದ್ಧದ ಅಪರಾಧ ಪ್ರಕರಣಗಳ ತನಿಖೆ ನಡೆಸಿದ ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ, ಮಾನವೀಯತೆ ವಿರುದ್ಧ ಶೇಖ್ ಹಸೀನಾ ನಡೆಸಿರುವ ಅಪರಾಧಗಳು ಗರಿಷ್ಠ ಶಿಕ್ಷೆಗೆ ಅರ್ಹ ಎಂದು ಅಭಿಪ್ರಾಯಪಟ್ಟಿತು. ಅಲ್ಲದೇ ಮಾಜಿ ಪ್ರಧಾನಿಗೆ ಗಲ್ಲುಶಿಕ್ಷೆ ವಿಧಿಸಿ ತೀರ್ಪು ನೀಡಿತು. ಇದಕ್ಕೂ ಮೊದಲು ತಮ್ಮ ಬೆಂಬಲಿಗರಿಗೆ



ಶೇಖ್ ಹಸೀನಾ ಆಡಿಯೋ ಸಂದೇಶ ಕಳುಹಿಸಿದ್ದರು. ಇದರಲ್ಲಿ ನನ್ನ ವಿರುದ್ಧ ನ್ಯಾಯಾಲಯ ನೀಡುವ ತೀರ್ಪಿನ ಬಗ್ಗೆ ಯಾವುದೇ ಭಯವಿಲ್ಲ ಎಂದು ಹೇಳಿದ್ದರು. ಅಲ್ಲದೇ ಈ ವಿಚಾರಣೆ ವಿರುದ್ಧ ಆವಾಮಿ ಲೀಗ್ ಬೆಂಬಲಿಗರು ನಡೆಸುತ್ತಿರುವ ಪ್ರತಿಭಟನೆ ಕೂಡ ಸ್ವಯಂಪ್ರೇರಿತ ಎಂದು ಶೇಖ್ ಹಸೀನಾ ಪ್ರತಿಪಾದಿಸಿದ್ದಾರೆ.

ಇದೇ ವೇಳೆ ಮೊಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಶೇಖ್ ಹಸೀನಾ, ಭ್ರಷ್ಟ ಮತ್ತು ಕೊಲೆಗಾರ ಆಡಳಿತದ ವಿರುದ್ಧ ಜನರು ತಿರುಗಿ ಬೀಳಲಿದ್ದು, ಈ ಜನತಾ ಪ್ರತಿಭಟನೆಗಳಿಗೆ ಆವಾಮಿ ಲೀಗ್ ನೇತೃತ್ವ ನೀಡಲಿದೆ ಎಂದು ಘೋಷಿಸಿದ್ದಾರೆ. ಕಳೆದ ಜೂನ್‌ನಲ್ಲಿ ಶೇಖ್ ಹಸೀನಾ ಮೇಲಿನ ಮಾನವೀಯತೆ ವಿರುದ್ಧದ ಆರೋಪಗಳ ವಿಚಾರಣೆ ಆರಂಭಿಸಿದ್ದ ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ, ಸಾವಿರಾರು ಜನರ ಹೇಳಿಕೆಗಳು ಮತ್ತು ವಿವಿಧ ದಾಖಲೆಗಳನ್ನು ಪರಿಗಣಿಸಿ ತೀರ್ಪು ಪ್ರಕಟಿಸಿದೆ. ಈ ಪ್ರಕರಣದಲ್ಲಿ ಶೇಖ್ ಹಸೀನಾ ಅವರನ್ನು ತಪ್ಪಿತಸ್ಥೆ ಎಂದು ಘೋಷಿಸಿರುವ ನ್ಯಾಯಾಕಯ, ಮಾಜಿ ಪ್ರಧಾನಿಗೆ ಗಲ್ಲಿಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.

ಭಾರತದ ಆಪ್ತರಾಗಿರುವ ಶೇಖ್ ಹಸೀನಾ, ಕಳೆದ ವರ್ಷ ತಮ್ಮ ಸರ್ಕಾರದ ವಿರುದ್ಧ ಹಿಂಸಾತ್ಮಕ ಪ್ರತಿಭಟನೆ ಭುಗಿಲೆದ್ದ ಬಳಿಕ ನವದೆಹಲಿಗೆ ಪಲಾಯನ ಮಾಡಿದ್ದರು. ತಮಗೆ ಆಶ್ರಯ ನೀಡಿದ ಭಾರತಕ್ಕೆ ಧನ್ಯವಾದ ಅರ್ಪಿಸಿರುವ ಶೇಖ್ ಹಸೀನಾ, ದಿಲ್ಲಿಯಲ್ಲಿ ಸ್ವತಂತ್ರವಾಗಿ ಬದುಕುತ್ತಿರುವುದಾಗಿ ಹೇಳಿದ್ದರು.

### ವಿದ್ಯಾರ್ಥಿಗಳಿಗೆ ಜೈಲಿನಲ್ಲಿ ಚಿತ್ರಹಿಂಸೆ

**ಕಳೆದ ವರ್ಷ ಬಾಂಗ್ಲಾದೇಶದಲಿ ಭುಗಿಲೆದ್ದಿದ್ದ ವಿದ್ಯಾರ್ಥಿ ಚಳುವಳಿಯನ್ನು, ಆಗಿನ ಪ್ರಧಾನಿ ಶೇಖ್ ಹಸೀನಾ ನೇತೃತ್ವದ ಸರ್ಕಾರ ಅತ್ಯಂತ ನಿರ್ದಯವಾಗಿ ಹತ್ತಿಕ್ಕಿತ್ತು. ನೂರಾರು ವಿದ್ಯಾರ್ಥಿಗಳನ್ನು ಪೊಲೀಸರು ಗುಂಡಿಕ್ಕಿ ಹತ್ಯೆ ಮಾಡಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ಜೈಲಿನಲ್ಲಿ ಚಿತ್ರಹಿಂಸೆ ನೀಡಲಾಗಿತ್ತು. ಶೇಖ್ ಹಸೀನಾ ಅವರೇ ವಿದ್ಯಾರ್ಥಿ ಚಳುವಳಿಯನ್ನು ಅತ್ಯಂತ ಕಠೋರವಾಗಿ ಹತ್ತಿಕ್ಕುವಂತೆ ಸೇನೆ ಮತ್ತು ಪೊಲೀಸರಿಗೆ ಆದೇಶ ನೀಡಿದ್ದರು ಎಂಬ ವಾದವನ್ನು ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಒಪ್ಪಿಕೊಂಡಿದೆ. ಹೀಗಾಗಿ ಮಾಜಿ ಪ್ರಧಾನಿಗೆ ಗಲ್ಲುಶಿಕ್ಷೆ ವಿಧಿಸಿ ನ್ಯಾಯಾಲಯ ತೀರ್ಪು ನೀಡಿದೆ.**

## ಮಿನಿ ನ್ಯೂಸ್

### ರಷ್ಯಾದೊಂದಿಗೆ ವ್ಯಾಪಾರಕ್ಕೆ ಅಮೆರಿಕ ಹೊಸ ಕಾನೂನು

**ವಾಷಿಂಗ್ಟನ್:** ಅಮೆರಿಕದ ಟ್ರಂಪ್ ಆಡಳಿತವು ಶೀಘ್ರದಲ್ಲೇ ರಷ್ಯಾದೊಂದಿಗೆ ವ್ಯಾಪಾರ ಮಾಡುವ ದೇಶಗಳ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸುವ ಹೊಸ ಕಾನೂನನ್ನು ಜಾರಿಗೆ ತರಲಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಇದಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.

ರಿಪಬ್ಲಿಕನ್ ಪಕ್ಷವು ರಷ್ಯಾದೊಂದಿಗೆ ವ್ಯಾಪಾರ ಮಾಡುವ ದೇಶಗಳ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸುವ ಶಾಸನವನ್ನು ಪರಿಚಯಿಸುತ್ತಿದೆ ಎಂದು ಅವರು ಘೋಷಿಸಿದ್ದಾರೆ. ಉಕ್ರೇನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ಮಧ್ಯೆ, ರಷ್ಯಾದ ಯುದ್ಧಕಾಲದ ಆದಾಯವನ್ನು ಹತ್ತಿಕ್ಕುವ ವಾಷಿಂಗ್ಟನ್‌ನ ಪ್ರಯತ್ನಗಳಲ್ಲಿ 500 ಪ್ರತಿಶತ ಸುಂಕಗಳನ್ನು ವಿಧಿಸುವ ಪ್ರಸ್ತಾವಿತ ಕ್ರಮವು ಗಮನಾರ್ಹವಾಗಿ ಮುಂದುವರೆದ ಭಾಗವಾಗಿದೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅಧ್ಯಕ್ಷ ಟ್ರಂಪ್, ತಮ್ಮ ಪಕ್ಷವು ಯಾವುದೇ ದೇಶವು ರಷ್ಯಾದೊಂದಿಗೆ ವ್ಯಾಪಾರ ಮಾಡುವುದು ಅತ್ಯಂತ ಕಷ್ಟಕರವಾಗಿಸುವ ಮಸೂದೆಯನ್ನು ಪರಿಚಯಿಸಲಿದೆ ಎಂದು ಹೇಳಿದ್ದಾರೆ. ಉಕ್ರೇನ್‌ನಲ್ಲಿ ಮಾಸ್ಕೋದ ನಿರಂತರ ಆಕ್ರಮಣದ ಬಗ್ಗೆ ಕಾಂಗ್ರೆಸ್‌ನಲ್ಲಿ ಹೆಚ್ಚುತ್ತಿರುವ ಹತಾಶೆಯ ನಡುವೆಯೇ ಇತ್ತೀಚಿನ ತಿಂಗಳುಗಳಲ್ಲಿ ಮಸೂದೆಗೆ ಬೆಂಬಲ ಹೆಚ್ಚಿದೆ.

### ನೂತನ ಶಾಸಕರೊಂದಿಗೆ ತೇಜಸ್ವಿ ಯಾದವ್ ಸಭೆ; ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚೆ

**ಪಾಟ್ನಾ:** ಇತ್ತೀಚೆಗೆ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಹೀನಾಯ ಸೋಲಿನ ಹಿನ್ನೆಲೆಯಲ್ಲಿ, ಆರ್.ಜೆ.ಡಿ. ನಾಯಕ ತೇಜಸ್ವಿ ಯಾದವ್ ಅವರು ನೂತನ ಶಾಸಕರೊಂದಿಗೆ ಸಭೆ ನಡೆಸಲಿದ್ದಾರೆ.ಇತ್ತೀಚೆಗೆ ನಡೆದ ಬಿಹಾರ ಚುನಾವಣೆಯಲ್ಲಿ ಎನ್ಡಿಎ ಮೈತ್ರಿಕೂಟವು 243 ಸದಸ್ಯರ ವಿಧಾನಸಭೆಯಲ್ಲಿ 202 ಸ್ಥಾನಗಳನ್ನು ಗೆದ್ದು, ಇಂಡಿಯಾ ಬ್ಲಾಕ್‌ಗೆ ಭಾರಿ ಹಿನ್ನಡೆ ಉಂಟುಮಾಡಿದೆ. ಆರ್. ಜೆಡಿ ಪಕ್ಷವು ಸ್ಪರ್ಧಿಸಿದ್ದ 143 ಕ್ಷೇತ್ರಗಳಲ್ಲಿ ಕೇವಲ 25 ಸ್ಥಾನಗಳನ್ನು ಮಾತ್ರ ಗಳಿಸಿದೆ. ಇದರ ಬೆನ್ನಲ್ಲೇ, ಪಕ್ಷದ ಸಂಸ್ಥಾಪಕ ಲಾಲು ಪ್ರಸಾದ್ ಅವರ ಕುಟುಂಬದಲ್ಲಿ ಕಲಹ ಶುರುವಾಗಿದೆ. ಲಾಲು ಪ್ರಸಾದ್ ಅವರಿಗೆ ಮೂತ್ರಪಿಂಡ ದಾನ ಮಾಡಿದ್ದಕ್ಕಾಗಿ ಹಣ ಮತ್ತು ಪಕ್ಷದ ಟಿಕೆಟ್ ಪಡೆದಿದ್ದಾಳೆ ಎಂದು ನಿಂದಿಸಲಾಗಿದೆ ಎಂದು ಹೇಳಿರುವ ರೋಹಿಣಿ ಆಚಾರ್ಯ, ತಾನು ಅನಾಥಳಾಗಿದ್ದೇನೆ ಎಂದು ಹೇಳಿಕೆ ನೀಡಿದ್ದಾರೆ.

### ಕಾಂಗೋದಲ್ಲಿ ಭೀಕರ ಗಣಿ ಅವಘಡ, ಭೂ ಕುಸಿತದಲ್ಲಿ ಕನಿಷ್ಟ 80 ಮಂದಿ ಸಾವು

**ಕಿನ್ಶಾಸಾ:** ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಭೀಕರ ಗಣಿ ದುರಂತ ಸಂಭವಿಸಿದ್ದು, ಭೂಕುಸಿತ ಸಂಭವಿಸಿ ಕನಿಷ್ಠ 80 ಮಂದಿ ಸಾವಿಗೀಡಾಗಿದ್ದಾರೆ ಎಂದು ಹೇಳಲಾಗಿದೆ. ನವೆಂಬರ್ 15ರ ಕಾಂಗೋ ಲುವಾಲಾಬಾ ಪ್ರಾಂತ್ಯದ ತಾಮ್ರ ಮತ್ತು ಕೋಬಾಲ್ಟ್ ಗಣಿಯಲ್ಲಿ ಸೇತುವೆ ಕುಸಿದು ಕನಿಷ್ಠ 80 ಜನರು ಸಾವನ್ನಪ್ಪಿದ್ದಾರೆ. ಸ್ಥಳೀಯ ವರದಿಗಳ ಪ್ರಕಾರ, ಆಗ್ನೇಯ ಕಾಂಗೋದಲ್ಲಿರುವ ತಾಮ್ರ ಮತ್ತು ಕೋಬಾಲ್ಟ್ ಗಣಿಯಲ್ಲಿನ ಸೇತುವೆ ಜನದಟ್ಟಣೆಯಿಂದಾಗಿ ಕುಸಿದು ಬಿದ್ದಿದೆ. ಘಟನೆಯಲ್ಲಿ ಹಲವಾರು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ದುರಂತದ ವಿಡಿಯೋವನ್ನು ಸ್ಥಳೀಯರು ತಮ್ಮ ಮೊಬೈಲ್ ನಲ್ಲಿ ಸೆರೆಹಿಡಿದಿದ್ದು, ಈ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದೆ.

ಇನ್ನು ಅಧಿಕಾರಿಗಳ ಪ್ರಕಾರ ತಾಮ್ರದ ಗಣಿ ಪ್ರಾಂತ್ಯದಲ್ಲಿ ಗುಂಡಿನ ಶಬ್ದ ಕೇಳಿದ್ದು, ಈ ವೇಳೆ ಅಲ್ಲಿದ್ದ ಜನರು ಭೀತಿಯಿಂದ ಸೇತುವೆ ಮೇಲೆ ತೆರಳಿದ್ದಾರೆ. ಈ ವೇಳೆ ಸೇತುವೆ ಕುಸಿದಿದೆ ಎಂದು ಹೇಳಿದ್ದಾರೆ. ಸೇತುವೆಯು ಪ್ರಾಂತ್ಯದ ಮುಲೋಂಡೊ ಪ್ರದೇಶದ ಕಲಾಂಡೊ ಗಣಿಯಲ್ಲಿದ್ದು, ದುರಂತದಲ್ಲಿ ಆರಂಭದಲ್ಲಿ 32 ಮಂದಿ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿತ್ತಾದರೂ ಬಳಿಕ ಈ ಸಂಖ್ಯೆ 80ಕ್ಕೆ ಏರಿಕೆಯಾಗಿದೆ ಎಂದು ತಿಳಿದುಬಂದಿದೆ.

### ಮಹಾಯುತಿಯಲ್ಲಿ ಬಿರುಕು: ಶರದ್ ಪವಾರ್ ಎನ್‌ಸಿಪಿ ಜತೆ ಶಿಂಧೆ ಶಿವಸೇನೆ ಮೈತ್ರಿ

**ನಾಸಿಕ್:** ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಯೆಯೋಲಾದಲ್ಲಿ ಆಡಳಿತಾರೂಢ ಮಹಾಯುತಿ ಮೈತ್ರಿಕೂಟ ವಿಭಜನೆಯಾಗಿದ್ದು, ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಶಿವಸೇನೆಯು ಪ್ರತಿಪಕ್ಷದ ಭಾಗವಾಗಿರುವ ಎನ್‌ಸಿಪಿ(ಎಸ್‌ಪಿ) ಜೊತೆ ಕೈಜೋಡಿಸಲು ನಿರ್ಧರಿಸಿದೆ. ಈ ಹೊಸ ಮೈತ್ರಿಯು, ಭಾರತೀಯ ಜನತಾ ಪಕ್ಷ(ಬಿಜೆಪಿ) ಮತ್ತು ಅಜಿತ್ ಪವಾರ್ ಅವರ ಎನ್‌ಸಿಪಿಯ ವಿರುದ್ಧ ಸ್ಪರ್ಧಿಸಲಿದೆ. ಮಹಾಯುತಿಯಲ್ಲಿ ಬಿಜೆಪಿ, ಶಿವಸೇನೆ ಮತ್ತು ಎನ್ ಸಿಪಿ ಇದ್ದರೆ, ವಿರೋಧ ಪಕ್ಷವಾದ ಮಹಾ ವಿಕಾಸ್ ಅಘಾಡಿಯಲ್ಲಿ ಉದ್ಧವ್ ಠಾಕ್ರೆ ಅವರ ಶಿವಸೇನೆ(ಯುಬಿಟಿ), ಶರದ್ ಪವಾರ್ ಅವರ ಎನ್‌ಸಿಪಿ (ಎಸ್‌ಪಿ) ಮತ್ತು ಕಾಂಗ್ರೆಸ್ ಇವೆ. ಡಿಸೆಂಬರ್ 2 ರಂದು ಯೆಯೋಲಾ ಸೇರಿದಂತೆ 246 ಪುರಸಭೆಗಳು ಮತ್ತು 42 ನಗರ ಪಂಚಾಯತ್‌ಗಳಿಗೆ ಚುನಾವಣೆ ನಡೆಯಲಿದೆ.

### 3.37 ಕೋಟಿ ರೂ. ವಂಚನೆ ಅಂತರರಾಜ್ಯ ಸೈಬರ್ ಗ್ಯಾಂಗ್ ಬಂಧನ

**ನೈನಿತಾಲ್:** ಜನರ ಫೋನ್‌ಗಳನ್ನು ಹ್ಯಾಕ್ ಮಾಡಿ ಅವರ ಬ್ಯಾಂಕ್ ಖಾತೆಗಳಿಂದ ಹಣ ವರ್ಗಾಯಿಸುತ್ತಿದ್ದ ಆರೋಪದ ಮೇಲೆ ಉತ್ತರಾಖಂಡ ಪೊಲೀಸರು ಪ್ರಮುಖ ಅಂತರರಾಜ್ಯ ಸೈಬರ್ ಅಪರಾಧ ಜಾಲದ ನಾಲ್ವರನ್ನು ಬಂಧಿಸಿದ್ದಾರೆ. ಈ ಗ್ಯಾಂಗ್, ಜನರ ಫೋನ್‌ಗಳಿಗೆ ಪ್ರವೇಶ ಪಡೆಯಲು ಸಾಮಾಜಿಕ ಮಾಧ್ಯಮದಲ್ಲಿ ಲಿಂಕ್‌ಗಳನ್ನು ಕಳುಹಿಸುತ್ತಿತ್ತು ಎನ್ನಲಾಗಿದೆ. ಎಲ್ಲಾ ವಹಿವಾಟುಗಳನ್ನು ಮ್ಯೂಲ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದ್ದು, ಅವರ ಗುರುತನ್ನು ಮರೆಮಾಚಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯ ಪ್ರಕಾರ, 3.37 ಕೋಟಿ ರೂ.ಗಳ ವಹಿವಾಟು ಅನುಮಾನಾಸ್ಪದವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ವರಿಷ್ಠಾಧಿಕಾರಿ ಜಗದೀಶ್ ಚಂದ್ರ ಮತ್ತು ಉಪ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ಅವರು ನಡೆಸಿದ ತಪಾಸಣೆಯ ಸಮಯದಲ್ಲಿ ದೋ ಗಾಂವ್‌ನ ಭೇದಿಯಪಖಾಡ್ ಮೋಡ್‌ನಲ್ಲಿ ತಲ್ಲಿಟಲ್ ಪೊಲೀಸರು ಕಾರೊಂದನ್ನು ತಡೆದರು.

ಕಾರಿನಲ್ಲಿದ್ದ ನಾಲ್ವರು ಅನುಮಾನಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಅವರ ಬಳಿ 11 ಫೋನ್‌ಗಳು, ಒಂಬತ್ತು ಸಿಮ್ ಕಾರ್ಡ್‌ಗಳು, ಹಲವಾರು ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳು, ಚೆಕ್ ಬುಕ್‌ಗಳು, ಕಿಖ ಕೋಡ್‌ಗಳು ಮತ್ತು ಹಲವಾರು ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳು ಪತ್ತೆಯಾಗಿವೆ. ವಿಚಾರಣೆಯ ಸಮಯದಲ್ಲಿ, ಆರೋಪಿಗಳು, ಫೋನ್‌ಗಳನ್ನು ಪ್ರವೇಶಿಸಲು ಅವರು ಸಾಮಾಜಿಕ ಮಾಧ್ಯಮದ ಮೂಲಕ ಫೈಲ್‌ಗಳನ್ನು ಕಳುಹಿಸಿರುವುದಾಗಿ ಬಹಿರಂಗಪಡಿಸಿದ್ದಾರೆ. ಮೊಬೈಲ್ ಗಳನ್ನು ಹ್ಯಾಕ್ ಮಾಡಿದ ನಂತರ, ಅವರು ವಿವಿಧ ಮ್ಯೂಲ್ ಖಾತೆಗಳಿಗೆ ಹಣವನ್ನು ವರ್ಗಾಯಿಸಿದ್ದಾರೆ.




## ಅವರಿಂದಾಗಿ ನಾನು ಇನ್ನೂ ಇಂಡಸ್ಟ್ರಿಯಲ್ಲಿದ್ದೇನೆ

ಛಾಯಾ ಸಿಂಗ್, ಅಮೃತಧಾರೆ ಧಾರಾವಾಹಿಯಲ್ಲಿ ಭೂಮಿಕಾ ಪಾತ್ರದ ಮೂಲಕ ಗಮನ ಸೆಳೆಯುತ್ತಿದ್ದಾರೆ. ಇತ್ತೀಚೆಗೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ತಮ್ಮ ಪತಿ, ನಟ ಕೃಷ್ಣ ಅವರ ಬೆಂಬಲದಿಂದಲೇ ಚಿತ್ರರಂಗದಲ್ಲಿ ಇಷ್ಟು ವರ್ಷಗಳಿಂದ ಮುಂದುವರಿಯಲು ಸಾಧ್ಯವಾಗಿದೆ ಎಂದು ಸಂತಸ ಹಂಚಿಕೊಂಡರು. ಸಿನಿಮಾಗಳು ಮತ್ತು ಧಾರಾವಾಹಿಗಳಲ್ಲಿ ಸಕ್ರಿಯವಾಗಿರಲು ಕೃಷ್ಣರ ಬೆಂಬಲವೇ ಮುಖ್ಯ ಕಾರಣ ಎಂದು ಛಾಯಾ ಸಿಂಗ್ ಹೇಳಿದರು.

ಛಾಯಾ ಸಿಂಗ್ ಅವರು ಜೀ ಕನ್ನಡದಲ್ಲಿ ಪ್ರಸಾರ ಆಗುತ್ತಿರುವ ಅಮೃತಧಾರೆ ಧಾರಾವಾಹಿಯಲ್ಲಿ ಭೂಮಿಕಾ ಹೆಸರಿನ ಪಾತ್ರ ಮಾಡುತ್ತಿದ್ದಾರೆ. ಈ ಪಾತ್ರ ಸಾಕಷ್ಟು ಗಮನ ಸೆಳೆಯುವ ರೀತಿಯಲ್ಲಿ ಇದೆ. ಅವರದ್ದು ಪ್ರಬುದ್ಧ ಪಾತ್ರ. ಛಾಯಾ ಸಿಂಗ್ ಅವರು ಈಗ ಒಬ್ಬರನ್ನು ಸ್ಮರಿಸಿಕೊಂಡಿದ್ದಾರೆ. ಅವರಿಂದಾಗಿ ನಾವು ಇಲ್ಲಿ ಇರೋದು ಎಂದು ಖುಷಿ ಖುಷಿಯಿಂದ ಹೇಳಿದ್ದಾರೆ. ಛಾಯಾ ಸಿಂಗ್ ಅವರು ರಜಪೂತ್ ಕುಟುಂಬದ ಹಿನ್ನೆಲೆ ಹೊಂದಿದ್ದಾರೆ. ಅವರು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಆ ಬಳಿಕ ಛಾಯಾ ಸಿಂಗ್ ಅವರು ಕನ್ನಡ ಧಾರಾವಾಹಿಗಳಲ್ಲಿ ನಟಿಸಿದರು. ಕನ್ನಡ ಸಿನಿಮಾಗಳನ್ನು ಮಾಡಿದರು. ಈಗ ಅವರು ತಮಿಳು ಧಾರಾವಾಹಿಗಳನ್ನು ಮಾಡುತ್ತಿದ್ದಾರೆ. ಜೀ ತಮಿಳಿನ 'ಗಟ್ಟಿಮೇಳಂ' ಹೆಸರಿನ ಧಾರಾವಾಹಿಯಲ್ಲೂ ಅವರು ನಟಿಸುತ್ತಿದ್ದಾರೆ. ಛಾಯಾ ಸಿಂಗ್ ಅವರಿಗೆ ಇತ್ತೀಚೆಗೆ ಜೀ ತಮಿಳು ಏರ್ಪಡಿಸಿದ್ದ ಅವಾರ್ಡ್ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು. ಈ ವೇಳೆ ಅವರು ಪತಿ ಕೃಷ್ಣ ಅವರ ಬಗ್ಗೆ ಮೆಚ್ಚುಗೆ ಸೂಚಿಸಿದರು. 'ಕೃಷ್ಣನ ಬೆಂಬಲದಿಂದ ನಾನು ಇನ್ನೂ ಇಂಡಸ್ಟ್ರಿಯಲ್ಲಿ ಇದ್ದೇನೆ' ಎಂದು ಹೇಳಿದರು. ಕೃಷ್ಣ ಅವರು ಕಿರುತೆರೆ ನಟ. ಸಿನಿಮಾಗಳಲ್ಲೂ ಅವರು ನಟಿಸಿದ್ದಾರೆ. ಅವರು ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದಾರೆ.

**ಪತಿ ಕೃಷ್ಣ ಬಗ್ಗೆ ಮೆಚ್ಚುಗೆ**





## ವಾರಣಾಸಿ ಚಿತ್ರಕ್ಕಾಗಿ ಹಾಲಿವುಡ್ ದೃಶ್ಯಗಳ ಕಾಪಿ

ರಾಜಮೌಳಿ ಅವರ ಬಹುನಿರೀಕ್ಷಿತ 'ವಾರಣಾಸಿ' ಸಿನಿಮಾದ ಟೀಸರ್ ಕೃತಿ ಚೌರ್ಯದ ಆರೋಪ ಎದುರಿಸುತ್ತಿದೆ. ನೆಟ್ಟಿಗರು ಟೀಸರ್‌ನ ದೃಶ್ಯಗಳನ್ನು ಹಾಲಿವುಡ್ ಚಿತ್ರಗಳೊಂದಿಗೆ ಹೋಲಿಕೆ ಮಾಡುತ್ತಿದ್ದಾರೆ. ಇದು ಹಿಂದೆ ಕೂಡ ರಾಜಮೌಳಿ ಎದುರಿಸಿದ ಟೀಕೆಯಾಗಿತ್ತು. ಮಹೇಶ್ ಬಾಬು ಅಭಿನಯದ ಈ ಚಿತ್ರ 2027ಕ್ಕೆ ಬಿಡುಗಡೆಯಾಗಲಿದೆ.

ಟಾಲಿವುಡ್ ಸ್ಟಾರ್ ನಿರ್ದೇಶಕ ರಾಜಮೌಳಿ ಅವರು ಯಾವುದೇ ಪ್ರಾಜೆಕ್ಟ್ ಕೈಗೆತ್ತಿಕೊಂಡರೂ ಅದರಲ್ಲಿ ಒಂದು ವಿಶೇಷತೆ ಇರುತ್ತದೆ. ಸಿನಿಮಾ ಅದ್ದೂರಿಯಾಗಿ ಮೂಡಿ ಬರುತ್ತದೆ. ಸಿನಿಮಾದ ದೃಶ್ಯಗಳನ್ನು ಥಿಯೇಟರ್‌ನಲ್ಲಿ ಕುಳಿತು ನೋಡುವಾಗ ಮೈ ರೋಮಾಂಚನ ಆಗುತ್ತದೆ. ಈಗ ಅವರ ಮೇಲೆ ಕೃತಿ ಚೌರ್ಯದ ಆರೋಪ ಕೇಳಿ ಬಂದಿದೆ.

'ವಾರಣಾಸಿ' ಟೀಸರ್ ನೋಡಿ ಅನೇಕರು ಇದನ್ನು ಹಾಲಿವುಡ್ ಸಿನಿಮಾ ದೃಶ್ಯಗಳಿಗೆ ಹೋಲಿಕೆ ಮಾಡಿದ್ದಾರೆ. ರಾಜಮೌಳಿ ಅವರು 'ಮಗಧೀರ', 'ಈಗ', 'ಬಾಹುಬಲಿ', 'ಬಾಹುಬಲಿ 2', 'ಆರ್‌ಆರ್‌ಆರ್'ನಂತಹ ಸಿನಿಮಾಗಳನ್ನು ನೀಡಿದ್ದಾರೆ.

**ಕೃತಿ ಚೌರ್ಯದ ಆರೋಪ**

ಇವೆಲ್ಲವೂ ಫ್ಯಾಂಟಸಿ ಚಿತ್ರಗಳು. ಈ ಸಿನಿಮಾಗಳಲ್ಲಿ ಅವರ ಆಲೋಚನಾ ಶಕ್ತಿ ಪ್ರೇಕ್ಷಕರನ್ನು ವಿಸ್ಮಯಗೊಳಿಸುತ್ತದೆ. ಆದರೆ, ಕೆಲವು ದೃಶ್ಯಗಳು ಬೇರೆ ಬೇರೆ ಸಿನಿಮಾಗಳ ದೃಶ್ಯಗಳಿಗೆ ಹೋಲಿಕೆ ಆಗಿದ್ದು ಇದೆ. ಈ ಸಂದರ್ಭದಲ್ಲಿ ಅವರು ಟೀಕೆ ಎದುರಿಸಿದ್ದರು. ಈಗ ರಾಜಮೌಳಿ ಅವರ 'ವಾರಣಾಸಿ' ಟೀಸರ್‌ನ ದೃಶ್ಯಗಳ ಮೇಲೂ ಕೃತಿ ಚೌರ್ಯದ ಆರೋಪ ಎದುರಾಗಿದೆ. ನೆಟ್ಟಿಗರು ಬೇರೆ ಬೇರೆ ಹಾಲಿವುಡ್ ಸಿನಿಮಾಗಳಿಗೆ 'ವಾರಣಾಸಿ' ಚಿತ್ರದ ದೃಶ್ಯವನ್ನು ಹೋಲಿಕೆ ಮಾಡುತ್ತಿದ್ದಾರೆ. ಒರಿಜಿನಲ್ ದೃಶ್ಯ ಹಾಗೂ ರಾಜಮೌಳಿ ವರ್ಷನ್ ಎಂದು ಫೋಟೋ ಸಮೇತ ಹಾಕಲಾಗಿದೆ. ಎರಡರ ಮಧ್ಯೆ ಸಾಮ್ಯತೆ ಇದೆ. ತಮ್ಮ ಸಿನಿಮಾಗಳಲ್ಲಿ ಹಾಲಿವುಡ್‌ನ ಸ್ಫೂರ್ತಿ ಇರುತ್ತದೆ ಎಂದು ರಾಜಮೌಳಿ ಹೇಳಿದ್ದಾರೆ.



## ಆ ರೀತಿಯ ಜನರನ್ನು ನೋಡಲು ಅಸಹ್ಯ

ತ್ರಿಷಾ 20 ವರ್ಷಗಳಿಂದ ಟಾಪ್ ನಾಯಕಿಯಾಗಿ ಮಿಂಚಿದ್ದಾರೆ. ಇತ್ತೀಚೆಗೆ ತಮ್ಮ ಬಗ್ಗೆ ಹರಡುತ್ತಿರುವ ಸುಳ್ಳು ಮದುವೆ ವದಂತಿಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾರೊಂದಿಗಾದರೂ ಫೋಟೋ ತೆಗೆಸಿಕೊಂಡರೆ ಮದುವೆ ಎಂದರ್ಥವೇ ನಕಲಿ ಸುದ್ದಿ ನಿಲ್ಲಿಸಿ ಎಂದು ಅವರು ಕೋರಿದ್ದಾರೆ. ತ್ರಿಷಾ ಸುಮಾರು 20 ವರ್ಷಗಳಿಂದ ಚಿತ್ರರಂಗದಲ್ಲಿ ಟಾಪ್ ಹೀರೋಯಿನ್ ಆಗಿದ್ದಾರೆ. ಇವರು ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಸಿನಿಮಾ ಮಾಡಿದ್ದಾರೆ. ಅವರು ಕನ್ನಡದಲ್ಲೂ ಒಂದು ಸಿನಿಮಾ ಮಾಡಿದ್ದಾರೆ.

ಅದು ಪುನೀತ್ ರಾಜ್‌ಕುಮಾರ್ ಜೊತೆ. 'ಪವರ್' ಈ ಸಿನಿಮಾದ ಹೆಸರು. ಇತ್ತೀಚೆಗೆ ಅವರು ಕಳೆದುಕೊಂಡಿದ್ದಾರೆ.

ತಮ್ಮ ಬಗ್ಗೆ ಹರಡುತ್ತಿರುವ ಸುಳ್ಳು ಕಥೆಗಳ ಬಗ್ಗೆ ಅವರು ತಮ್ಮ ಕೋಪವನ್ನು ವ್ಯಕ್ತಪಡಿಸಿದ್ದಾರೆ. ತ್ರಿಷಾ ತಮ್ಮ 42ನೇ ವಯಸ್ಸಿನಲ್ಲಿಯೂ ಯುವ ನಾಯಕಿಯರಿಗೆ ಸ್ಪರ್ಧೆ ನೀಡುತ್ತಿದ್ದಾರೆ. ಇತ್ತೀಚೆಗೆ, ಅವರು ಸುಂದರಿ ತಾಳ್ಮೆ ಕಳೆದುಕೊಂಡಿದ್ದಾರೆ.

ತನ್ನ ಬಗ್ಗೆ ಹರಡುತ್ತಿರುವ ಸುಳ್ಳು ಕಥೆಗಳ ಬಗ್ಗೆ ಅವರು ಕೋಪಗೊಂಡಿದ್ದಾರೆ. ಈಗ ಅವರ ಕಾಮೆಂಟ್‌ಗಳು ಅಂತರ್ಜಾಲದಲ್ಲಿ ವೈರಲ್ ಆಗಿವೆ. ಕಳೆದ ಕೆಲವು ದಿನಗಳಿಂದ, ತ್ರಿಷಾ ಅವರ ಮದುವೆಯ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅನೇಕ ವದಂತಿಗಳು ಹರಡುತ್ತಿವೆ. ಅಲ್ಲದೆ, ಅವರ ವೈಯಕ್ತಿಕ ಫೋಟೋಗಳನ್ನು ಹಂಚಿಕೊಳ್ಳಲಾಗುತ್ತಿದೆ. ಇದಕ್ಕೆ ತ್ರಿಷಾ ತಮ್ಮ ಕೋಪ ವ್ಯಕ್ತಪಡಿಸಿದ್ದಾರೆ. 'ನಾನು ಯಾರೊಂದಿಗಾದರೂ ಫೋಟೋ ತೆಗೆಸಿಕೊಂಡರೆ, ಅವರನ್ನು ಮದುವೆಯಾದೆ ಎಂದರ್ಥವೇ ಇನ್ನೂ ಎಷ್ಟು ಜನ ನನ್ನನ್ನು ಮದುವೆಯಾಗುತ್ತಾರೆ ನಾನು ಸ್ನೇಹಿತರೊಂದಿಗೆ ತೆಗೆಸಿಕೊಂಡಿರುವ ಫೋಟೋಗಳನ್ನು ತೋರಿಸಿ ಮದುವೆಯ ಸುದ್ದಿ ಬರೆಯುತ್ತಿದ್ದಾರೆ.

**ನಕಲಿ ಸುದ್ದಿ ನಿಲ್ಲಿಸಿ**

## ಮಹೇಶ್, ಪ್ರಿಯಾಂಕಾ ಯಾರು ಹೆಚ್ಚು ಶ್ರೀಮಂತರು

ಮಹೇಶ್ ಬಾಬು ಒಂದು ಚಿತ್ರಕ್ಕೆ 60 ರಿಂದ 80 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಾರೆ. ಸಿನಿಮಾ ಮಾತ್ರವಲ್ಲದೆ ಮಹೇಶ್ ಬಾಬು ಬ್ರಾಂಡ್ ಪ್ರಚಾರದಿಂದಲೂ ಸಾಕಷ್ಟು ಹಣ ಮಾಡುತ್ತಾರೆ. ಹೈದರಾಬಾದ್‌ನ ಜುಬಿಲಿ ಹಿಲ್ಸ್‌ನ ಐಷಾರಾಮಿ ಪ್ರದೇಶದಲ್ಲಿ ಅವರು ಐಷಾರಾಮಿ ಬಂಗಲೆ ಹೊಂದಿದ್ದಾರೆ. ನಟ ರೇಂಜ್ ರೋವರ್, ಮರ್ಸಿಡಿಸ್ ಬೆಂಜ್ ಮತ್ತು ಆಡಿಯಂತಹ ಅನೇಕ ಕಾರುಗಳನ್ನು ಹೊಂದಿದ್ದಾರೆ. ಅವರ ಒಟ್ಟು ಸಂಪತ್ತಿನ ಬಗ್ಗೆ ಹೇಳುವುದಾದರೆ, ಇದು 300 ಕೋಟಿ ರೂಪಾಯಿಗಳು. 2025 ರ ಹೊತ್ತಿಗೆ ಅಂದಾಜು ನಿವ್ವಳ ಮೌಲ್ಯ 300 ರಿಂದ 350 ಕೋಟಿ ರೂಪಾಯಿಗಳ ನಡುವೆ ಇದೆ. ಪ್ರಿಯಾಂಕಾ ಒಂದು ಚಿತ್ರಕ್ಕೆ 30 ರಿಂದ 40 ಕೋಟಿ ರೂ ಪಡೆಯುತ್ತಾರೆ. 'ವಾರಣಾಸಿ' ಚಿತ್ರಕ್ಕಾಗಿ ಅವರು 30 ಕೋಟಿ ರೂ. ಸಂಭಾವನೆ ಪಡೆದಿದ್ದಾರೆ. ಪ್ರಿಯಾಂಕಾ ಮುಂಬೈನಲ್ಲಿ ಮಾತ್ರವಲ್ಲದೆ ನ್ಯೂಯಾರ್ಕ್‌ನಲ್ಲೂ ಐಷಾರಾಮಿ ಬಂಗಲೆ ಹೊಂದಿದ್ದಾರೆ. ಅಲ್ಲಿ ಅವರು ಪತಿ ನಿಕ್ ಜೋನಾಸ್ ಮತ್ತು ಮಗಳು ಮಾಲ್ತಿ ಅವರೊಂದಿಗೆ ವಾಸಿಸುತ್ತಿದ್ದಾರೆ. ನಟಿ ಮರ್ಸಿಡಿಸ್ ಬೆಂಜ್ ಎಸ್ ಕ್ಲಾಸ್, ಪೋರ್ಷೆ, ಆಡಿ ಕ್ಯೂ 7, ಬಿಎಂಡಬ್ಲ್ಯು 5 ಮತ್ತು ರೋಲ್ಸ್ ರಾಯ್ಸ್‌ನಂತಹ ಐಷಾರಾಮಿ ಕಾರುಗಳನ್ನು ಹೊಂದಿದ್ದಾರೆ. ವರದಿಯ ಪ್ರಕಾರ, ಪ್ರಿಯಾಂಕಾ ಚೋಪ್ರಾ ಅವರ ನಿವ್ವಳ ಆಸ್ತಿ ಮೌಲ್ಯ ಸುಮಾರು 650 ಕೋಟಿ ರೂ. ಚಲನಚಿತ್ರಗಳ ಹೊರತಾಗಿ, ಅವರು ಸರಣಿ ಮತ್ತು ಬ್ರಾಂಡ್ ಪ್ರಚಾರದಿಂದ ಸಾಕಷ್ಟು ಸಂಪಾದಿಸುತ್ತಾರೆ. ಸಂಪತ್ತಿನ ವಿಷಯದಲ್ಲಿ, ಪ್ರಿಯಾಂಕಾ ಮಹೇಶ್ ಬಾಬುಗಿಂತ ಹೆಚ್ಚಿನ ಸಂಪತ್ತನ್ನು ಹೊಂದಿದ್ದಾರೆ.

**30 ಕೋಟಿ ರೂ. ಸಂಭಾವನೆ**




## ಕಪ್ಪು ಉಡುಗೆಯಲ್ಲಿ ಕಂಗೊಳಿಸಿದ ಮೋಹಕತಾರೆ

ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ ಹೊಸ ಫೋಟೋಶೂಟ್ ಮೂಲಕ ಇನ್ಸ್ಟಾದಲ್ಲಿ ಮಿಂಚಿದ್ದಾರೆ. ವೆಸ್ಟರ್ನ್ ಉಡುಗೆ ಧರಿಸಿರುವ ರಮ್ಯಾ ಆಕರ್ಷಕವಾಗಿ ಪೋಸ್ ಕೊಟ್ಟಿದ್ದಾರೆ. ರಮ್ಯಾ ನಯಾ ಲುಕ್‌ಗೆ ಫ್ಯಾನ್ಸ್ ಫಿದಾ ಆಗಿದ್ದಾರೆ. ಸಿನಿಮಾ ಲೋಕಕ್ಕೆ ವಾಪಸ್ ಬರೋದಾಗಿ ಆಗಾಗ ಘೋಷಿಸುವ ರಮ್ಯಾ ಇದುವರೆಗೂ ಸಿನಿಮಾ ಘೋಷಿಸಿಲ್ಲ. ಘೋಷಿಸಿರುವ ಸಿನಿಮಾಗಳಲ್ಲೂ ನಟಿಸಿಲ್ಲ. ಆದರೆ ಈ ಬಾರಿ ಮತ್ತೆ ನಟನೆಗೆ ಮರಳುವ ಎಲ್ಲಾ ನಿರೀಕ್ಷೆಗೆ ಜೀವ ತಂದಂತಿದೆ ಈ ಫೋಟೋಶೂಟ್. ಈ ಲುಕ್‌ನಲ್ಲಿ 15 ವರ್ಷದ ಹಿಂದಿನ ರಮ್ಯಾ ಕಾಣಿಸ್ಕೊಂಡಿದ್ದಾರೆ. ಕಪ್ಪು ಉಡುಗೆಯಲ್ಲಿ ರಮ್ಯಾ ಬಿಂದಾಸ್ ಪೋಸ್ ಕೊಟ್ಟಿದ್ದಾರೆ. ಮ್ಯಾಗಜಿನ್‌ವೊಂದರ ಮುಖಪುಟಕ್ಕಾಗಿ ರಮ್ಯಾ ಈ ಫೋಟೋಶೂಟ್ ಮಾಡಿಸಿದ್ದು, ಶ್ವಾನಪ್ರಿಯೆ ರಮ್ಯಾ ಬೀದಿನಾಯಿಗಳ ರಕ್ಷಣಾ ಜಾಗೃತಿಗಾಗಿ ಸಂದೇಶ ರವಾನಿಸಿದಂತಿದೆ. ಇನ್ನಷ್ಟು ಮಾಹಿತಿಯನ್ನ ಖುದ್ದು ರಮ್ಯಾ ಹಂಚಿಕೊಳ್ಳಬೇಕು. ಆದರೆ ಸದ್ಯಕ್ಕಂತೂ ರಮ್ಯಾ ಹೊಸ ಲುಕ್ ಫ್ಯಾನ್ಸ್ ಎದೆಯಲ್ಲಿ ಬಣ್ಣದ ಚಿಟ್ಟೆ ಹರಿಬಿಟ್ಟಂತಾಗಿದೆ.


## ದ್ವಿತೀಯ ಟೆಸ್ಟ್‌ಗೆ ಪ್ರಮುಖ ಆಟಗಾರ ಡೌಟ್

ಭಾರತ ಮತ್ತು ಸೌತ್ ಆಫ್ರಿಕಾ ನಡುವಣ 2 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಮ್ಯಾಚ್ ಮುಗಿದಿದೆ. ಕೊಲ್ಕತ್ತಾದಲ್ಲಿ ನಡೆದ ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡ 30 ರನ್‌ಗಳ ಜಯ ಸಾಧಿಸಿದೆ. ಇನ್ನು ದ್ವಿತೀಯ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದ್ದು, ಈ ಪಂದ್ಯಕ್ಕೆ ಗುವಾಹಟಿಯ ಬರ್ಸಪಾರ ಸ್ಟೇಡಿಯಂ ಆತಿಥ್ಯವಹಿಸಲಿದೆ. ಭಾರತ ಮತ್ತು ಸೌತ್ ಆಫ್ರಿಕಾ ನಡುವಣ ದ್ವಿತೀಯ ಟೆಸ್ಟ್ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದೆ. ಗುವಾಹಟಿಯ ಬರ್ಸಪಾರ ಸ್ಟೇಡಿಯಂನಲ್ಲಿ ನಡೆಯಲಿರುವ ಈ ಪಂದ್ಯವು ಟೀಮ್ ಇಂಡಿಯಾ ಪಾಲಿಗೆ ನಿರ್ಣಾಯಕ. ಏಕೆಂದರೆ ಮೊದಲ ಮ್ಯಾಚ್‌ನಲ್ಲಿ ಸೋತಿರುವ ಭಾರತ ತಂಡವು ಸರಣಿ ಸೋಲನ್ನು ತಪ್ಪಿಸಿಕೊಳ್ಳಬೇಕಿದ್ದರೆ ಈ ಮ್ಯಾಚ್‌ನಲ್ಲಿ ಗೆಲ್ಲಲೇಬೇಕು.

ಆದರೆ ಈ ನಿರ್ಣಾಯಕ ಪಂದ್ಯದಲ್ಲಿ ಟೀಮ್ ಇಂಡಿಯಾದ ನಾಯಕ ಶುಭ್‌ಮನ್ ಗಿಲ್ ಕಣಕ್ಕಿಳಿಯುವುದು ಡೌಟ್. ಏಕೆಂದರೆ ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದ ವೇಳೆ ಕುತ್ತಿಗೆ ನೋವಿನ ಸಮಸ್ಯೆಗೀಡಾದ ಗಿಲ್ ಮೊದಲ ಇನಿಂಗ್ಸ್ ಬಳಿಕ ಮೈದಾನದಲ್ಲಿ ಕಾಣಿಸಿಕೊಂಡಿರಲಿಲ್ಲ. ಕುತ್ತಿಗೆ ಭಾಗದ ಸ್ನಾಯು ಸೆಳೆತದ ನೋವಿನಿಂದಾಗಿ ಮೊದಲ ಇನಿಂಗ್ಸ್ ಬೆನ್ನಲ್ಲೇ ಆಸ್ಪತ್ರೆಗೆ ದಾಖಲಾಗಿದ್ದರು. ಹೀಗಾಗಿಯೇ ಅವರು ದ್ವಿತೀಯ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್‌ಗೆ ಬಂದಿರಲಿಲ್ಲ. ಇದೀಗ ಗಿಲ್ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದಾಗ್ಯೂ ಮತ್ತೆ ಕಣಕ್ಕಿಳಿಯಲು ಅವರು ಸಂಪೂರ್ಣ ಫಿಟ್ ಆಗಿಲ್ಲ ಎಂದು ವರದಿಯಾಗಿದೆ. ಪ್ರಸ್ತುತ ಮಾಹಿತಿ ಪ್ರಕಾರ, ಶುಭ್‌ಮನ್ ಗಿಲ್ ಅವರಿಗೆ ವೈದ್ಯರು 4 ರಿಂದ 5 ದಿನಗಳ ಕಾಲ ವಿಶ್ರಾಂತಿ ಸೂಚಿಸಿದ್ದಾರೆ. ಅತ್ತ ಭಾರತ ಮತ್ತು ಸೌತ್ ಆಫ್ರಿಕಾ ನಡುವಣ ದ್ವಿತೀಯ ಟೆಸ್ಟ್ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದೆ. ಹೀಗಾಗಿ ಗುವಾಹಟಿಯಲ್ಲಿ ನಡೆಯಲಿರುವ 2ನೇ ಟೆಸ್ಟ್ ಪಂದ್ಯದಲ್ಲಿ ಗಿಲ್ ಕಣಕ್ಕಿಳಿಯುವುದು ಅನುಮಾನ ಎನ್ನಲಾಗಿದೆ.



**4 ರಿಂದ 5 ದಿನಗಳ ಕಾಲ ವಿಶ್ರಾಂತಿ**



## ಯಾವ ತಂಡ ಎಷ್ಟು ಆಟಗಾರರನ್ನು ಖರೀದಿಸಬಹುದು ಇಲ್ಲಿದೆ ಮಾಹಿತಿ

ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯ ಮಿನಿ ಹರಾಜು ಅಬುಧಾಬಿಯಲ್ಲಿ ನಡೆಯಲಿದೆ. ಡಿಸೆಂಬರ್ 16 ರಂದು ಜರುಗಲಿರುವ ಈ ಹರಾಜಿನ ಮೂಲಕ ಗರಿಷ್ಠ 77 ಆಟಗಾರರಿಗೆ ಅವಕಾಶ ಸಿಗಲಿದೆ. ಅಂದರೆ 10 ತಂಡಗಳಲ್ಲಿ ಒಟ್ಟು 77 ಸ್ಲಾಟ್‌ಗಳು ಮಾತ್ರ ಖಾಲಿಯಿದ್ದು, ಈ ಸ್ಥಾನಗಳಿಗಾಗಿ ಹರಾಜು ಪ್ರಕ್ರಿಯೆ ನಡೆಯಲಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19ರ ಮಿನಿ ಹರಾಜು ಡಿಸೆಂಬರ್ 16 ರಂದು ನಡೆಯಲಿದೆ. 10 ಫ್ರಾಂಚೈಸಿಗಳ ನಡುವೆ ನಡೆಯಲಿರುವ ಈ ಹರಾಜಿನಲ್ಲಿ ಯಾವ ತಂಡ ಎಷ್ಟು ಆಟಗಾರರನ್ನು ಖರೀದಿಸಬಹುದು ಎಂಬುದರ ಸಂಪೂರ್ಣ ಮಾಹಿತಿ ಈ ಕೆಳಗಿನಂತಿದೆ...

**ಚೆನ್ನೈ ಸೂಪರ್ ಕಿಂಗ್ಸ್:** ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯು ಹರಾಜಿಗೂ ಮುನ್ನ 12 ಆಟಗಾರರನ್ನು ಬಿಡುಗಡೆ ಮಾಡಿದೆ. ಅದರಂತೆ ಇದೀಗ 43.40 ಕೋಟಿ ರೂ. ಹರಾಜು ಮೊತ್ತ ಹೊಂದಿರುವ ಸಿಎಸ್‌ಕೆ ಒಟ್ಟು 9 ಆಟಗಾರರನ್ನು ಖರೀದಿಸಬಹುದು. ಇದರಲ್ಲಿ ನಾಲ್ವರು ವಿದೇಶಿ ಆಟಗಾರರನ್ನು ಆಯ್ಕೆ ಮಾಡಬಹುದು. ಅಂದರೆ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 5 ಭಾರತೀಯ ಹಾಗೂ 4 ವಿದೇಶಿ ಆಟಗಾರರನ್ನು ಆಯ್ಕೆ ಮಾಡಲು ಅವಕಾಶವಿದೆ.

**ಮುಂಬೈ ಇಂಡಿಯನ್ಸ್:** ಮಿನಿ ಹರಾಜಿಗೂ ಮುನ್ನ ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯು ಒಟ್ಟು 10 ಆಟಗಾರರನ್ನು ಬಿಡುಗಡೆ ಮಾಡಿದ್ದಾರೆ. ಇದೀಗ 20 ಆಟಗಾರರನ್ನು ಹೊಂದಿರುವ ಮುಂಬೈ ಇಂಡಿಯನ್ಸ್‌ಗೆ ಇನ್ನೂ 5 ಪ್ಲೇಯರ್ಸ್‌ಗಳನ್ನು ಆಯ್ಕೆ



**ಭಾರತೀಯರನ್ನು ಆಯ್ಕೆ ಮಾಡಲು ಅವಕಾಶ**

ಮಾಡಲು ಅವಕಾಶವಿದೆ. ಅದರಂತೆ 2.75 ಕೋಟಿ ರೂ. ಹರಾಜು ಮೊತ್ತದಲ್ಲಿ ಮುಂಬೈ ಇಂಡಿಯನ್ಸ್ ನಾಲ್ವರು ಭಾರತೀಯರು ಹಾಗೂ ಓರ್ವ ವಿದೇಶಿ ಆಟಗಾರನನ್ನು ಖರೀದಿಸಬಹುದು.

**ಸನ್‌ರೈಸರ್ಸ್ ಹೈದರಾಬಾದ್:** ಎಸ್‌ಆರ್‌ಹೆಚ್ ಫ್ರಾಂಚೈಸಿಯು 10 ಆಟಗಾರರನ್ನು ಬಿಡುಗಡೆ ಮಾಡಿದ್ದಾರೆ. ಅದರಂತೆ ಇದೀಗ 25.50 ಕೋಟಿ ರೂ. ಹೊಂದಿರುವ ಸನ್‌ರೈಸರ್ಸ್ ಹೈದರಾಬಾದ್ 10 ಆಟಗಾರರನ್ನು ಖರೀದಿಸಬಹುದು. ಈ ಹತ್ತರಲ್ಲಿ ಇಬ್ಬರು ವಿದೇಶಿ ಆಟಗಾರರನ್ನು ಕೂಡ ಆಯ್ಕೆ ಮಾಡಬಹುದು.

**ಪಂಜಾಬ್ ಕಿಂಗ್ಸ್:** ಐಪಿಎಲ್ ರಿಟೆನ್ಷನ್ ವೇಳೆ ಪಂಜಾಬ್ ಕಿಂಗ್ಸ್ ಫ್ರಾಂಚೈಸಿಯು ಒಟ್ಟು 6 ಆಟಗಾರರನ್ನು ರಿಲೀಸ್ ಮಾಡಿದ್ದಾರೆ. ಇದೀಗ 21 ಆಟಗಾರರ ಬಳಗವನ್ನು ಹೊಂದಿರುವ ಪಂಜಾಬ್ ಕಿಂಗ್ಸ್ ಹರಾಜಿನ ಮೂಲಕ 11.50 ಕೋಟಿಯಲ್ಲಿ ಒಟ್ಟು ನಾಲ್ವರನ್ನು ಖರೀದಿಸಬಹುದು. ಇದರಲ್ಲಿ ಇಬ್ಬರು ವಿದೇಶಿ ಆಟಗಾರರನ್ನು ಆಯ್ಕೆ ಮಾಡಲು ಅವಕಾಶವಿದೆ.

**ರಾಜಸ್ಥಾನ್ ರಾಯಲ್ಸ್:** ಆರ್‌ಆರ್ ಫ್ರಾಂಚೈಸಿಯು ಒಟ್ಟು 9 ಸ್ಲಾಟ್‌ಗಳನ್ನು ಹೊಂದಿದೆ. ಇದೀಗ 14 ಆಟಗಾರರೊಂದಿಗೆ 16.05 ಕೋಟಿ ರೂ. ಪರ್ಸ್ ಮೊತ್ತ ಹೊಂದಿರುವ ರಾಜಸ್ಥಾನ್ ರಾಯಲ್ಸ್ ಹರಾಜಿನ ಮೂಲಕ 8 ಭಾರತೀಯ ಹಾಗೂ ಓರ್ವ ವಿದೇಶಿ ಆಟಗಾರನನ್ನು ಖರೀದಿಸಬಹುದು.

**ಲಕ್ನೋ ಸೂಪರ್ ಜೈಂಟ್ಸ್:** ಎಸ್‌ಎಲ್‌ಜಿ ಫ್ರಾಂಚೈಸಿಯು ಮಿನಿ ಹರಾಜಿನ ಮೂಲಕ 6 ಆಟಗಾರರನ್ನು ಖರೀದಿಸಬಹುದು. 22.95 ಕೋಟಿ ರೂ. ಪರ್ಸ್ ಮೊತ್ತ ಹೊಂದಿರುವ ಲಕ್ನೋ ಸೂಪರ್ ಜೈಂಟ್ಸ್ ತಂಡಕ್ಕೆ ನಾಲ್ವರು ವಿದೇಶಿ ಹಾಗೂ ಇಬ್ಬರು ಭಾರತೀಯರನ್ನು ಆಯ್ಕೆ ಮಾಡಲು ಅವಕಾಶವಿದೆ.

**ಕೊಲ್ಕತ್ತಾ ನೈಟ್ ರೈಡರ್ಸ್:** ಕೆಕೆಆರ್ ಫ್ರಾಂಚೈಸಿಯು 9 ಆಟಗಾರರನ್ನು ಬಿಡುಗಡೆ ಮಾಡಿದ್ದಾರೆ. ಇದೀಗ 12 ಆಟಗಾರರ ಬಳಗವನ್ನು ಹೊಂದಿರುವ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಗೆ ಒಟ್ಟು 13 ಆಟಗಾರರನ್ನು ಖರೀದಿಸಲು ಅವಕಾಶವಿದೆ. ಅದರಂತೆ 64.30 ಕೋಟಿ ರೂ.ನಲ್ಲಿ ಕೆಕೆಆರ್ 6 ವಿದೇಶಿ ಆಟಗಾರರು ಹಾಗೂ 7 ಭಾರತೀಯ ಆಟಗಾರರನ್ನು ಖರೀದಿಸಬಹುದು.

**ಗುಜರಾತ್ ಟೈಟಾನ್ಸ್:** ಜಿಟಿ ಫ್ರಾಂಚೈಸಿಯು ಮಿನಿ ಹರಾಜಿಗೂ ಮುನ್ನ 5 ಆಟಗಾರರನ್ನು ಬಿಡುಗಡೆ ಮಾಡಿದ್ದಾರೆ. ಅದರಂತೆ ಇದೀಗ 12.90 ಕೋಟಿ ರೂ. ಹರಾಜು ಮೊತ್ತ ಹೊಂದಿರುವ ಗುಜರಾತ್ ಟೈಟಾನ್ಸ್ ನಾಲ್ವರು ವಿದೇಶಿ ಹಾಗೂ ಓರ್ವ ಭಾರತೀಯ ಆಟಗಾರನನ್ನು ಖರೀದಿಸಬಹುದು.

**ಡೆಲ್ಲಿ ಕ್ಯಾಪಿಟಲ್ಸ್:** ಡಿಸಿ ಫ್ರಾಂಚೈಸಿಯು ಒಟ್ಟು 7 ಆಟಗಾರರನ್ನು ಬಿಡುಗಡೆ ಮಾಡಿದ್ದಾರೆ. ಈ ಮೂಲಕ 21.80 ಕೋಟಿ ರೂ. ಹರಾಜು ಮೊತ್ತ ಹೊಂದಿರುವ ಡೆಲ್ಲಿ ಕ್ಯಾಪಿಟಲ್ಸ್‌ಗೆ 8 ಆಟಗಾರರನ್ನು ಆಯ್ಕೆ ಮಾಡಲು ಅವಕಾಶವಿದೆ.

## ಕೇವಲ 31 OP ಸ್ಲಾಟ್

ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಗಾಗಿ ಡಿಸೆಂಬರ್ 16 ರಂದು ಮಿನಿ ಹರಾಜು ನಡೆಯಲಿದೆ. ಅಬುಧಾಬಿಯಲ್ಲಿ ನಡೆಯಲಿರುವ ಈ ಹರಾಜಿನ ಮೂಲಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಆರು ಭಾರತೀಯ ಹಾಗೂ ಇಬ್ಬರು ವಿದೇಶಿ ಆಟಗಾರರನ್ನು ಖರೀದಿಸಬಹುದು.

ಇಂಡಿಯನ್ ಪ್ರೀಮಿಯರ್ ಲೀಗ್ 2026ರ ರಿಟೆನ್ಷನ್ ಪ್ರಕ್ರಿಯೆ ಮುಗಿದಿದೆ. ಈ ರಿಟೆನ್ಷನ್ ಪ್ರಕ್ರಿಯೆಯಲ್ಲಿ ಅತೀ ಹೆಚ್ಚು ಆಟಗಾರರನ್ನು ರಿಟೈನ್ ಮಾಡಿಕೊಂಡ ಫ್ರಾಂಚೈಸಿ ಪಂಜಾಬ್ ಕಿಂಗ್ಸ್. ಪಂಜಾಬ್ ಕಿಂಗ್ಸ್ 21 ಆಟಗಾರರನ್ನು ಉಳಿಸಿಕೊಂಡರೆ, ಮುಂಬೈ ಇಂಡಿಯನ್ಸ್ ಹಾಗೂ ಗುಜರಾತ್ ಟೈಟಾನ್ಸ್ ತಲಾ 20 ಆಟಗಾರರನ್ನು ರಿಟೈನ್ ಮಾಡಿಕೊಂಡಿದೆ. ಇನ್ನು 10 ಫ್ರಾಂಚೈಸಿಗಳು ರಿಟೈನ್ ಮಾಡಿಕೊಂಡಿರುವ ಒಟ್ಟು ಆಟಗಾರರ ಸಂಖ್ಯೆ ಬರೋಬ್ಬರಿ 173 ಪ್ಲೇಯರ್ಸ್. ಈ 173 ಆಟಗಾರರಲ್ಲಿ 49 ವಿದೇಶಿ ಆಟಗಾರರಿದ್ದಾರೆ. ಅಂದರೆ ಮಿನಿ ಹರಾಜಿನಲ್ಲಿ ಕೇವಲ 31 ಓವರ್ಸಿಸ್ ಪ್ಲೇಯರ್ಸ್‌ಗೆ ಮಾತ್ರ ಅವಕಾಶ ದೊರೆಯಲಿದೆ.



ಐಪಿಎಲ್ ನಿಯಮ ಪ್ರಕಾರ ಒಂದು ಫ್ರಾಂಚೈಸಿಯು ಕನಿಷ್ಠ 18 ಆಟಗಾರರನ್ನು ಹೊಂದಿರಲೇಬೇಕು. ಹಾಗೆಯೇ ಗರಿಷ್ಠ 25 ಆಟಗಾರರನ್ನು ಹೊಂದಬಹುದು. ಇದೀಗ 10 ಫ್ರಾಂಚೈಸಿಗಳು 173 ಪ್ಲೇಯರ್ಸ್ ಫರಿಟೈನ್ ಮಾಡಿಕೊಂಡಿರುವ ಕಾರಣ ಹರಾಜಿನ ಮೂಲಕ ಕೆಲವೇ ಕೆಲವು ಆಟಗಾರರಿಗೆ ಮಾತ್ರ ಅವಕಾಶ ದೊರೆಯಲಿದೆ.

## ನೀವು ನಿಮ್ಮ ಜೇಬು ತುಂಬಿಸಿ

ಭಾರತ ಮತ್ತು ಸೌತ್ ಆಫ್ರಿಕಾ ನಡುವಣ 2 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಮ್ಯಾಚ್ ಮುಗಿದಿದೆ. ಕೊಲ್ಕತ್ತಾದಲ್ಲಿ ನಡೆದ ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡ 30 ರನ್‌ಗಳ ಜಯ ಸಾಧಿಸಿದೆ. ಇನ್ನು ದ್ವಿತೀಯ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದ್ದು, ಈ ಪಂದ್ಯಕ್ಕೆ ಗುವಾಹಟಿಯ ಬರ್ಸಪಾರ ಸ್ಟೇಡಿಯಂ ಆತಿಥ್ಯವಹಿಸಲಿದೆ. ಸೌತ್ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಹೀನಾಯವಾಗಿ ಸೋತಿದೆ. ಅದು ಕೂಡ 15 ವರ್ಷಗಳ ಬಳಿಕ. ಅಂದರೆ ಸೌತ್ ಆಫ್ರಿಕಾ ತಂಡವು ಬರೋಬ್ಬರಿ 15 ವರ್ಷಗಳ ಬಳಿಕ ಟೆಸ್ಟ್ ಪಂದ್ಯವನ್ನು ಗೆದ್ದುಕೊಂಡಿದೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ತಂಡವು 159 ರನ್‌ಗಳಿಗೆ ಆಲೌಟಾದರೆ, ಟೀಮ್ ಇಂಡಿಯಾ ಪ್ರಥಮ ಇನಿಂಗ್ಸ್‌ನಲ್ಲಿ 189 ರನ್ ಕಲೆಹಾಕಿತು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಸೌತ್ ಆಫ್ರಿಕಾ 153 ರನ್‌ಗಳಿಸಿ ಸರ್ವಪತನ ಕಂಡಿತು. ಮೊದಲ ಇನಿಂಗ್ಸ್‌ನಲ್ಲಿನ 30 ರನ್‌ಗಳ ಮುನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್‌ನಲ್ಲಿ 124 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾ ಕೇವಲ 93 ರನ್‌ಗಳಿಸಿ ಆಲೌಟ್ ಆಗಿದೆ. ಈ ಮೂಲಕ ಭಾರತ ತಂಡ 30 ರನ್‌ಗಳಿಂದ ಸೋಲೊಪ್ಪಿಕೊಂಡಿತು. ಈ ಸೋಲಿನ ಬೆನ್ನಲ್ಲೇ ಇಂಗ್ಲೆಂಡ್ ತಂಡದ ಮಾಜಿ ನಾಯಕ ಕೆವಿನ್ ಪೀಟರ್ಸನ್ ಸೋಷಿಯಲ್ ಮೀಡಿಯಾ ಮೂಲಕ ಆಧುನಿಕ ಕ್ರಿಕೆಟ್‌ನ ಹಾದಿಯನ್ನು ಪ್ರಶ್ನಿಸಿದ್ದಾರೆ. ಮೊದಲು ವಿಕೆಟ್, ನಂತರ ಸ್ಕೋರ್, ಅನಂತರ ಕೋಲ್ಕತ್ತಾದಲ್ಲಿನ ಫಲಿತಾಂಶವನ್ನು ನೋಡಿದಾಗ ಆಶ್ಚರ್ಯವಾಯಿತು.

ಇದಕ್ಕೆ ಕಾರಣ ಬ್ಯಾಟರ್‌ಗಳು ಆಧುನಿಕ ತಂತ್ರಗಳಿಗೆ ಮಾತ್ರ ಸೀಮಿತವಾಗಿರುವುದು. ಬ್ಯಾಟರ್‌ಗಳು ಈಗ ಸಿಕ್ಸ್‌ಗಳನ್ನು ಹೊಡೆಯಲು ಮತ್ತು ಸ್ವಿಚ್-ಹಿಟ್‌ಗಳನ್ನು ಆಡಲು ಮಾತ್ರ ಬೆಳೆಯುತ್ತಿದ್ದಾರೆ. ಇನ್ನಿಂಗ್ಸ್ ಕಟ್ಟಲು ಮತ್ತು ಕ್ರೀಸ್ ಕಚ್ಚಿ ನಿಲ್ಲುವಂತಹ ಕಲೆಯೇ ಗೊತ್ತಿಲ್ಲ. ಇದು ಸತ್ಯ, ಏಕೆಂದರೆ ಏನು ಈಗ ಕಲಿಸಲಾಗುತ್ತಿದೆ ಎಂಬುದು ನಮಗೆ ತಿಳಿದಿದೆ. ನಾನು ಸಹ ಅನೇಕ ಆಟಗಾರರ ಚರ್ಚೆಗಳ ಭಾಗವಾಗಿದ್ದೇನೆ.

## ಪಾಕ್ ಆಟಗಾರನ ಆಕ್ರಮಣಕಾರಿ ವರ್ತನೆ ವಾರ್ನಿಂಗ್!

ದೋಹಾದಲ್ಲಿ ನಡೆದ ಭಾರತ ಎ ವಿರುದ್ಧದ ಪಂದ್ಯದಲ್ಲಿ ಪಾಕಿಸ್ತಾನ್ ಎ ತಂಡದ ಆಟಗಾರ ಸಾದ್ ಮಸೂದ್ ಆಕ್ರಮಣಕಾರಿ ವರ್ತನೆ ತೋರಿದ್ದಾರೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಪರ ನಮನ್ ಧೀರ್ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದಿದ್ದರು. ಬಿರುಸಿನ ಬ್ಯಾಟಿಂಗ್‌ನೊಂದಿಗೆ ಗಮನ ಸೆಳೆದ ನಮನ್ ಕೇವಲ 19 ಎಸತೆಗಳಲ್ಲಿ 1 ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ 35 ರನ್ ಬಾರಿಸಿದ್ದರು. ಈ ವೇಳೆ ದಾಳಿಗಿಳಿದ ಸಾದ್ ಮಸೂದ್ ಎಸೆತದಲ್ಲಿ ಭರ್ಜರಿ ಹೊಡೆತಕ್ಕೆ ಮುಂದಾಗಿ ಫ್ರಂಟ್ ಫೀಲ್ಡರ್‌ಗೆ ಕ್ಯಾಚ್ ನೀಡಿದರು. ಇತ್ತ ಡೇಂಜರಸ್ ನಮನ್ ಧೀರ್ ವಿಕೆಟ್ ಸಿಗುತ್ತಿದ್ದಂತೆ ಸಾದ್ ಮಸೂದ್ ದಾಟು ಎನ್ನುವಂತೆ ಕೈ ಸನ್ನೆ ಮಾಡಿ ಆಕ್ರಮಣಕಾರಿ ವರ್ತನೆ ತೋರಿದರು. ಇದರಿಂದ ಕುಪಿತಗೊಂಡ ನಮನ್ ಧೀರ್ ಕೂಡ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಪೆವಿಲಿಯನ್ ಕಡೆ ಹೆಜ್ಜೆ ಹಾಕಿದರು. ಸಾದ್ ಮಸೂದ್ ಅವರ ಈ ದುರ್ವತನೆಯನ್ನು ಗಮನಿಸಿದ ಫೀಲ್ಡ್ ಅಂಪೈರ್ ಮೊದಲ ಎಚ್ಚರಿಕೆ ನೀಡುತ್ತಾ, ಇಂತಹ ಆಕ್ರಮಣಕಾರಿ ವರ್ತನೆಯನ್ನು ಪುನರಾವರ್ತಿಸದಂತೆ ವಾರ್ನಿಂಗ್ ನೀಡಿದರು. ಇದೀಗ ಪಾಕಿಸ್ತಾನ್ ತಂಡದ ಯುವ ಆಟಗಾರನ ಆಕ್ರಮಣಕಾರಿ ವರ್ತನೆಯ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ ಎ ತಂಡವು 19 ಓವರ್‌ಗಳಲ್ಲಿ 136 ರನ್‌ಗಳಿಸಿ ಆಲೌಟ್ ಆಗಿದೆ. ಈ ಗುರಿಯನ್ನು 13.2 ಓವರ್‌ಗಳಲ್ಲಿ ಚೇಸ್ ಮಾಡಿ ಪಾಕಿಸ್ತಾನ್ ಎ ತಂಡ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966